ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಇದನ್ನು ನಾನೂ ಸಹ ಸ್ವಾಗತ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಇದನ್ನು ನಾನೂ ಸಹ ಸ್ವಾಗತ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಇದನ್ನು ಸ್ವಾಗತ ಮಾಡುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ;

"ಸಂವಿಧಾನದ ೨೫೨ನೇ ಅನುಚ್ಛೇದದ ೧ನೇ ಖಂಡಕ್ಕನುಸಾರವಾಗಿ ಅಂಗೀಕರಿಸಲಾದ ನಿರ್ಣಯದ ಮೇರೆಗೆ, ಸಂಸತ್ತಿನಲ್ಲಿ ಅಂಗೀಕರಿಸಲಾದ ೧೯೫೩ನೇ ಇಸವಿಯ ಸಂಪತ್ತಿ ಶುಲ್ಕದ ಕಾಯ್ದೆ (೧೯೫೩ನೇ ಇಸವಿಯ ೩೪) ಮುಖಾಂತರ ಕೃಷಿ ಭೂಮಿಗೆ ಸಂಬಂಧಿಸಿದ ಸಂಪತ್ತಿ ಶುಲ್ಕವನ್ನು ಕರ್ನಾಟಕ ರಾಜ್ಯಕ್ಕೆ ವಿನಿಯಮಿಸಲಾಗಿದೆ.

ಮತ್ತು ಆ ಕಾರಣವಾಗಿ, ೧೯೫೩ನೇ ಇಸವಿಯ ಸಂಪತ್ತಿ ಶುಲ್ಕ ಕಾಯ್ದೆಯ (೧೯೫೩ನೇ ಇಸವಿಯ ೩೪) ಮೇರೆಗೆ ಕೃಷಿ ಭೂಮಿಗೆ ಸಂಬಂಧಿಸಿದಂತೆ ಸಂಪತ್ತಿ ಶುಲ್ಕ ವಿಧಿಸಲು ಅವಕಾಶ ಕಲ್ಪಿಸಿದ್ದ ಉಪಬಂಧಗಳು ಕೊನೆಗೊಳ್ಳುವಂತೆ ೧೯೮೫ನೇ ಇಸವಿಯ ಸಂಪತ್ತಿ ಶುಲ್ಕದ (ತಿದ್ದುಪಡಿ) ಕಾಯ್ದೆ (೧೯೮೫ನೇ ಇಸವಿಯ ೫೩ನೇ ಕೇಂದ್ರ ಕಾಯ್ದೆ)ಯನ್ನು ಸಂಸತ್ತಿನಲ್ಲಿ ಅಂಗೀಕರಿಸಲಾಯಿತು.

ಮತ್ತು, ಆ ಕಾರಣಕ್ಕಾಗಿ ಮೇಲ್ಕಂಡ ತಿದ್ದುಪಡಿ ಕಾಯ್ದೆಯ ಉಪಬಂಧಗಳನ್ನು ಈ ಸದನದಲ್ಲಿ ಅಂಗೀಕರಿಸಬೇಕಾಗಿದೆ.

ಆದುದರಿಂದ, ಈಗ, ಸಂವಿಧಾನದ ೨೫೨ನೇ ಅನುಚ್ಛೇದದ ಖಂಡ (೧) ಹಾಗೂ ಖಂಡ (೨) ಸೇರಿದಂತೆ ೧೯೮೫ನೇ ಇಸವಿಯ ಸಂಪತ್ತಿ ಶುಲ್ಕದ (ತಿದ್ದುಪಡಿ) ಕಾಯ್ದೆಯ (೧೯೮೫ನೇ ಇಸವಿಯ ೫೩ನೇ ಕೇಂದ್ರ ಕಾಯ್ದೆ) ಉಪಬಂಧಗಳನ್ನು ಕರ್ನಾಟಕ ರಾಜ್ಯವು ಅಂಗೀಕರಿಸಬೇಕೆಂದು ಈ ಸದನ ನಿರ್ಣಯಿಸುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ತರಾವಿಗೆ ಒಪ್ಪಿಗೆ ನೀಡಲಾಯಿತು.

ವಿತ್ತೀಯ ಕಾರ್ಯಕಲಾಪಗಳು

೧೯೮೫-೮೬ರ ಬೇಡಿಕೆಗಳ ಮೇಲಿನ ಚರ್ಚೆ.

ಬೇಡಿಕೆಗಳ ಸಂಖ್ಯೆ ; ೩೨-ನಗರಾಭಿವೃದ್ಧಿ
೩೩-ನಿಗಮ ಮತ್ತು ನಗರ ಪಾಲಿಕೆಗಳಿಗೆ ಪರಿಹಾರ.
೩೬-ರಾಜ್ಯ ವಿಧಾನ ಸಭೆ.
೩೭-ನ್ಯಾಯ ಪರಿಪಾಲನೆ.

ಅಧ್ಯಕ್ಷರು.—ಈಗ ೧೯೮೫-೮೬ನೇ ಸಾಲಿಗೆ ಸಂಬಂಧಿಸಿದ ೩೨, ೩೩, ೩೬ ಮತ್ತು ೩೭ನೇ ಅನುದಾನಗಳ ಬೇಡಿಕೆಗಳನ್ನು ಮಾನ್ಯ ಸಚಿವರು ಸಭೆಯ ಮುಂದೆ ಮಂಡನೆ ಮಾಡುವುದು.

DEMAND NO. 32-URBAN DEVELOPMENT ETC.

ಶ್ರೀ ಎ ಲಕ್ಷ್ಮೀಸಾಗರ್ (ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿ).—Sir. on the recommendation of the Governor, I beg to move ;

"That a sum not exceeding Rs. 12,44,69,000 on Revenue Account and Rs. 9,50,36.000 on capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1986 in respect of "Urban Development etc."

DEMAND NO. 33

COMPENSATION AND GRANTS CORPORATION & MUNICIPALITIES

"That a sum not exceeding Rs. 39,04,00,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1986 in respect of "Compensation and Grants to Corporations and Municipalities."

DEMAND NO. 36-STATE LEGISLATURE

"That a sum not exceeding Rs. 3,12,40,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1986 in respect of "State Legislatures".

DEMAND NO. 37-ADMINISTRATION OF JUSTICE

"That a sum not exceeding Rs. 15,93,40 000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1986 in respect of "Administration of Justice".

Question was proposed

ಅಧ್ಯಕ್ಷರು.—ಈಗ ೩೨, ೩೩, ೩೬ ಮತ್ತು ೩೭ನೇ ಅನುದಾನದ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. ಈ ಬೇಡಿಕೆಗಳಿಗೆ ಒಂದು ದಿವಸ ನಿಗದಿ ಮಾಡಲಾಗಿದೆ. ಚರ್ಚೆ ಹಾಗೂ ಮಂತ್ರಿಗಳ ಉತ್ತರಕ್ಕೆ ಸುಮಾರು ೬ ಗಂಟೆಗಳ ಕಾಲಾವಕಾಶ ಸಿಗುವುದೆಂದು ಆಯಾ ಪಕ್ಷಗಳಿಗೆ ಸಮಯವನ್ನು ಈ ರೀತಿ ವಿಂಗಡಿಸಲಾಗಿದೆ.—

ಕಾಂಗ್ರೆಸ್ ಪಕ್ಷ	೧೦೫ ನಿಮಿಷಗಳು	
ಸಿ.ಪಿ.ಐ.	೨೦	,,
ಸಿ.ಪಿ.ಐ. (ಎಂ)	೧೫	,,
ಬಿ.ಜೆ.ಪಿ.	೧೫	,,
ಪಕ್ಷೇತರರು	೨೦	,,
ಜನತಾ ಪಕ್ಷ	೧೨೫	,,
(ಮಂತ್ರಿಗಳ ಉತ್ತರವೂ ಸೇರಿ)		

ದಯಮಾಡಿ ಆಯಾ ಪಕ್ಷದ ನಾಯಕರು ಹಾಗೂ ಸದಸ್ಯರು ಸಹಕರಿಸಬೇಕೆಂದು ಕೋರುತ್ತೇನೆ. ಆಯಾ ಪಕ್ಷದ ಸಮಯ ಮುಗಿದಲ್ಲಿ ಆಯಾ ಪಕ್ಷದ ಇತರ ಸದಸ್ಯರಿಗೆ ಅವಕಾಶ ಕೊಡುವುದಕ್ಕೆ ಕಷ್ಟವಾಗುವುದು. ಈಗ ಮಾನ್ಯ ಧರ್ಮಸಿಂಗ್ ಅವರು ಚರ್ಚೆಯನ್ನು ಪ್ರಾರಂಭ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ.— ಇವೊತ್ತು ಚರ್ಚೆ ನಡೆಯಲಿ. ನಾಳೆ ಇದಕ್ಕೆ ಉತ್ತರ ಕೊಡುವುದು ಒಳ್ಳೆಯದು.

ಅಧ್ಯಕ್ಷರು. — ನೋಡೋಣ.

ಶ್ರೀ ಎಸ್. ಬಂಗಾರಪ್ಪ. — ಈ ತಿಂಗಳ ೨೪ ಮತ್ತು ೨೫ ರಂದು ಅಧಿವೇಶನ ಸೇರುವುದಿಲ್ಲ. ೨೬ ರಂದು ಸಭೆ ಸೇರುತ್ತದೆ. ಮತ್ತೆ ೨೭ ರಂದು ಬಕ್ರೀದ್ ಹಬ್ಬದ ಪ್ರಯುಕ್ತ ಸಭೆ ಸೇರುವುದಿಲ್ಲ. ಮುಸ್ಲಿಂ ಬಾಂಧವರು ಆ ಕಡೆಯೂ ಇದ್ದಾರೆ ಮತ್ತು ಈ ಕಡೆಯೂ ಇದ್ದಾರೆ. ಈ ಕಾರಣದಿಂದ ೨೬ನೇ ತಾರೀಖು ಸೋಮವಾರವೂ ಸಹ ಸಭೆ ನಡೆಸದೆ ರಜಾ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು. — ಈ ತಿಂಗಳ ೧೬ ರಂದು ರಜೆ ಕೊಡುವ ಬಗ್ಗೆ ನಾನು, ನೀವು ಮತ್ತು ಮಾನ್ಯ ಸಭಾನಾಯಕರು ಒಂದು ತೀರ್ಮಾನ ತೆಗೆದುಕೊಂಡಂತೆ ಈ ಬಗ್ಗೆಯೂ ನಾವುಗಳು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರೋಣ.

ಶ್ರೀ ಎಸ್. ಬಂಗಾರಪ್ಪ. — ಆಗಬಹುದು.

† ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಜೇವರ್ಗಿ). — ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲಕ್ಷ್ಮೀಸಾಗರ್ ಅವರು ೩೨, ೩೩, ೩೬ ಮತ್ತು ೩೭ನೇ ಅನುದಾನ ಬೇಡಿಕೆಗಳನ್ನು ಈ ಸಭೆಯ ಮುಂದೆ ಮಂಡನೆ ಮಾಡಿ, ಇದಕ್ಕೆ ಈ ಸದನದ ಎಲ್ಲಾ ಮಾನ್ಯ ಸದಸ್ಯರ ಅನುಮೋದನೆಯನ್ನು ಕೇಳಿದ್ದಾರೆ. ಮಾನ್ಯ ಲಕ್ಷ್ಮೀಸಾಗರ್ ಅವರು ತಮ್ಮ ಇಲಾಖಾ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ನಮ್ಮ ಮುಂದಿಟ್ಟಿರುವಂತಹ ಪರ್‌ಫಾರ್ಮೆನ್ಸ್ ಬಡ್ಜೆಟ್‌ನ್ನು ನೋಡಿ ನಮಗೆ ಬಹಳ ವ್ಯಥೆಯಾಯಿತು. ಮಾನ್ಯ ಮುಖ್ಯ ಮಂತ್ರಿಗಳು ಬಹಳ ಬುದ್ಧಿವಂತರು. ಏಕೆಂದರೆ, ಬೆಂಗಳೂರು ನಗರದಿಂದ ಆರಿಸಿ ಬಂದಂಥ ಶಾಸಕರೊಬ್ಬರಿಗೆ ಈ ಖಾತೆಯನ್ನು ವಹಿಸಿಕೊಟ್ಟಿದ್ದಾರೆ. ಇದಕ್ಕೂ ಮೊದಲು ಅಂದರೆ ೧೯೮೩-೮೪ ನೇ ಸಾಲಿನಲ್ಲಿ ಮತ್ತು ೧೯೮೪-೮೫ನೇ ಸಾಲಿನಲ್ಲಿ ಈ ಖಾತೆಯನ್ನು ಮಾನ್ಯ ಚಂದ್ರಶೇಖರ್ ಅವರು ವಹಿಸಿಕೊಂಡಿದ್ದರು. ೧೯೮೫-೮೬ನೇ ಸಾಲಿನಲ್ಲಿ ಈ ಖಾತೆ ಮಾನ್ಯ ಲಕ್ಷ್ಮೀಸಾಗರ್ ಅವರ ಕೈಗೆ ಬಂದಿದೆ. ಈ ಹಿಂದೆ ಅವರು ವಿರೋಧಪಕ್ಷದಲ್ಲಿದ್ದಾಗ ನಗರ ಪ್ರದೇಶಗಳಲ್ಲಿ ವಾಸ ಮಾಡುವಂತಹ ಜನರ ಸಮಸ್ಯೆಗಳ ಬಗ್ಗೆ ಇಲ್ಲಿ ಬಹಳಷ್ಟು ಪ್ರಸ್ತಾಪ ಮಾಡಿದ್ದರು ಮತ್ತು ಆಗಿನ ಸರ್ಕಾರದ ಮೇಲೆ ಆರೋಪಗಳನ್ನು ಸಹ ಮಾಡಿದ್ದರು. ಈ ಕಾರಣದಿಂದ ಬೆಂಗಳೂರು ನಗರ ಮತ್ತು ಕರ್ನಾಟಕ ರಾಜ್ಯದಲ್ಲಿರುವಂತಹ ಇತರೇ ಪಟ್ಟಣ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಜನರ ಸಮಸ್ಯೆಗಳನ್ನು ಅಂದರೆ ನೀರಿನ ಸಮಸ್ಯೆ ಹಾಗೂ ಇನ್ನಿತರ ಸಮಸ್ಯೆಗಳನ್ನು ಹೋಗಲಾಡಿಸಲು ಯಾವ ರೀತಿ ಇವರು ಶ್ರಮ ಪಡುತ್ತಿದ್ದಾರೆಂಬುದನ್ನು ಜನರು ಕಾದು ನೋಡುತ್ತಿದ್ದಾರೆ. ಈ ಬಗ್ಗೆ ನಾನು ಬಹಳ ನೊಂದ ಮನಸ್ಸಿನಿಂದ ಹೇಳುವುದೇನೆಂದರೆ, ಇವರಲ್ಲಿ ಜನರ ದೈನಿಕ ಜೀವನಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿ ಇಲ್ಲ. ಇದಕ್ಕೆ ಕಾರಣವೇನೆಂದರೆ ಇವರಿಗೆ ಲಗ್ನವಾಗಿಲ್ಲ. ಇವರೂ ಸಹ ಲಗ್ನವಾಗಿದ್ದರೆ ಜನರು ಅನುಭವಿಸುತ್ತಿರುವ ನೀರಿನ ಸಮಸ್ಯೆ ಹಾಗೂ ಇನ್ನಿತರ ಸಮಸ್ಯೆಗಳೇನೆಂಬುದು ಗೊತ್ತಾಗುತ್ತಿತ್ತು. ಇವೊತ್ತು ಇಲ್ಲಿ ಮಂಡಿಸಿರುವ ಎಲ್ಲಾ ಬೇಡಿಕೆಗಳಿಗೆ ಈ ಸದನದ ಎಲ್ಲಾ ಸದಸ್ಯರ ಸಹಕಾರ ಬೇಕೆಂದು ಕೋರಿದ್ದಾರೆ. ಒಂದೇ ದಿವಸದಲ್ಲಿ ಈ ಬೇಡಿಕೆಗಳ ಚರ್ಚೆ ನಡೆಯಬೇಕೆಂದು ತಾವು ಹೇಳಿದ್ದನ್ನು ಕೇಳಿ ನನಗೆ ಬಹಳ ದುಃಖವಾಯಿತು, ಏಕೆಂದರೆ ಮಾನ್ಯ ನಜೀರ್ ಸಾಬ್ ಅವರು ಇಲ್ಲಿ ಮಂಡಿಸಿದಂಥ ಗ್ರಾಮಾಭಿವೃದ್ಧಿ ಇಲಾಖೆಯ ಬೇಡಿಕೆಗಳ ಮೇಲೆ ಇಲ್ಲಿ ಎರಡು ದಿನಗಳ ಕಾಲ ಚರ್ಚೆಯಾಯಿತು ಈ ಬೇಡಿಕೆಗಳ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ಸಹ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು, ಆದಕಾರಣ ನಾವು ನಗರಾಭಿವೃದ್ಧಿ ಇಲಾಖೆಯ ಬೇಡಿಕೆಗಳ ಮೇಲೂ ಸಹ ನಮ್ಮ ಅಭಿಪ್ರಾಯಗಳನ್ನು ವಿವರವಾಗಿ ತಿಳಿಸಬೇಕಾಗುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿರುವಂತಹ ೩ ಕೋಟಿ ೭೨ ಲಕ್ಷ ಜನರ ಪೈಕಿ ಪಟ್ಟಣ ಪ್ರದೇಶಗಳಲ್ಲಿ ಒಂದು ಕೋಟಿ ೭ ಲಕ್ಷ ಜನರು ವಾಸ ಮಾಡುತ್ತಿದ್ದಾರೆಂಬುದು ನಮಗೆ ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ೧೯೭೧ ಮತ್ತು ೧೯೮೧ರ ನಡುವೆ ನಗರ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಜನಸಂಖ್ಯೆಯ ಪ್ರಮಾಣ ಶೇಕಡ ೪೬ರಷ್ಟು ಬೆಳವಣಿಗೆಯಾಗಿದ್ದರೆ ಗ್ರಾಮಾಂತರ ಪ್ರದೇಶಗಳಲ್ಲಿ ಶೇಕಡ ೧೮ರಷ್ಟು ಮಾತ್ರ ಬೆಳವಣಿಗೆಯಾಗಿದೆಯೆಂಬುದು ನಮಗೆ ಅಂಕಿ ಅಂಶಗಳಿಂದ ತಿಳಿದುಬರುತ್ತದೆ. ಜನ ಸಂಖ್ಯೆಯ ಬೆಳವಣಿಗೆಯ ವೇಗ ಪಟ್ಟಣ ಪ್ರದೇಶಗಳಲ್ಲಿಯೇ ಜಾಸ್ತಿಯಾಗಿದೆ. ಈಗ ಪಟ್ಟಣ ಪ್ರದೇಶಗಳಲ್ಲಿ ಏನು

---

† ಈ ಚಿನ್ಹೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಜನಸಂಖ್ಯೆ ಇದೆ, ಇದರ ಅರ್ಧದಷ್ಟು ೨೦೦೦ ನೇ ಇಸವಿಯ ಹೊತ್ತಿಗೆ ಮತ್ತೆ ಹೆಚ್ಚಾಗುತ್ತದೆಂದು ಯುನೈಟೆಡ್ ನೇಷನ್ ಅವರು ಮತ್ತು ಇತರೇ ಸಂಘ ಸಂಸ್ಥೆಗಳವರು ಅಂಕಿ ಅಂಶಗಳ ಮುಖಾಂತರ ತಿಳಿಸಿದ್ದಾರೆ. ನಮ್ಮ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೨೧.೯೧ ರಷ್ಟು ಜನರು ಏನು ನಗರ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ, ಇವರಿಗೆ ಎಲ್ಲಾ ರೀತಿಯ ಅನುಕೂಲಗಳನ್ನು ಕಲ್ಪಿಸಿ ಕೊಡುವ ಬಗ್ಗೆ ತಾವು ಯಾವ ರೀತಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೀರಿ ಎಂಬ ಅಂಶವನ್ನು ನಾವು ನೋಡ ಬೇಕಾಗುತ್ತದೆ. ಒಂದು ಕೋಟಿ ೭ ಲಕ್ಷ ಜನರು ೧೭ ಪಟ್ಟಣಗಳಲ್ಲಿ ಮತ್ತು ೧೬೪ ಟೌನ್‌ಗಳಲ್ಲಿ ವಾಸ ಮಾಡುತ್ತಿದ್ದಾರೆ, ಒಂದು ಲಕ್ಷಕ್ಕೂ ಹೆಚ್ಚಿನ ಜನರು ೧೬೪ ಸಣ್ಣಪುಟ್ಟ ಪಟ್ಟಣಗಳಲ್ಲಿ ವಾಸ ಮಾಡು ತ್ತಿದ್ದಾರೆ ೧೯೮೧ ರ ಜನಗಣತಿಯ ಆಧಾರದ ಮೇಲೆ ನಾನು ಇದನ್ನು ಹೇಳುತ್ತಿದ್ದೇನೆ. ನಾಲ್ಕು ವರ್ಷಗಳ ಅವಧಿಯಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಜನಸಂಖ್ಯೆ ಬೆಳೆದಿದೆ. ಇಂತಹ ಪ್ರದೇಶಕ್ಕೆಲ್ಲಾ ದಿನನಿತ್ಯ ಜೀವನಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಹಾರ ಮಾಡತಕ್ಕ ಎಂದರೆ ನೀರಿನ ಸಮಸ್ಯೆಯಾಗಲೀ, ನೈರ್ಮಲ್ಯ ಸಮಸ್ಯೆಯಾಗಲೀ ಕೊಳಚೆ ನಿರ್ಮೂಲನಾ ಸಮಸ್ಯೆಯಾಗಲೀ ಇನ್ನಿತರ ಜನರ ಸಮಸ್ಯೆಯಾಗಲಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡತಕ್ಕ ಎಲ್ಲಾ ಜವಾಬ್ದಾರಿ ತಮ್ಮ ಮೇಲೆ ಇದೆ. ಇವೊತ್ತು ೩೦ ಪರ್‌ಸೆಂಟ್ ಜನರು ಪಟ್ಟಣ ಪ್ರದೇಶಗಳಲ್ಲಿ ಇದ್ದಾರೆ. ಅವರ ಬಗ್ಗೆ ತಾವು ಏನು ಮಾಡುತ್ತಿದ್ದೀರಿ ? ಮಾನ್ಯ ಮುಖ್ಯ ಮಂತ್ರಿಗಳು ಕೂಡ ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ, ನಾನು ಕೂಡ ಬೆಂಗಳೂರು ಜನಸಂಖ್ಯೆ ಏನು ಬೆಳೆಯುತ್ತಿದೆ ಮತ್ತು ಬೇರೆ ಬೇರೆ ಪಟ್ಟಣ ಪ್ರದೇಶಗಳಲ್ಲಿ ಏನು ಜನಸಂಖ್ಯೆ ಬೆಳೆಯುತ್ತಿದೆ, ಇದರ ಬಗ್ಗೆ ಈಗಾಗಲೇ ಪ್ರಧಾನ ಮಂತ್ರಿಯವರ ಜೊತೆ ಮಾತನಾಡಿದ್ದೇನೆ, ಕಾವೇರಿ ನದಿಯ ಥರ್ಡ್ ಸ್ಟೇಜ್ ಬಗ್ಗೆ ಮಾತನಾಡಿದ್ದೇನೆ ಎನ್ನತಕ್ಕ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಇವೊತ್ತು ನಮಗೆ ಎಷ್ಟು ಆದಾಯ ಬರುತ್ತದೆ ಎಂದರೆ ೨ ಸಾವಿರದ ೧೨ ಕೋಟಿ ರೂಪಾಯಿಗಳು. ಅದನ್ನು ನಾನ್ ಟ್ಯಾಕ್ಸ್ ರೆವಿನ್ಯೂ, ಟ್ಯಾಕ್ಸ್ ರೆವಿನ್ಯೂವಿನಿಂದ ವಸೂಲಿ ಮಾಡುತ್ತೇವೆ. ಪಟ್ಟಣ ಪ್ರದೇಶಗಳಲ್ಲಿರತಕ್ಕಂತಹ ಜನರಿಂದಲೇ ೯೮೬ ಕೋಟಿ ರೂಪಾಯಿಗಳನ್ನು ಟ್ಯಾಕ್ಸ್ ರೂಪದಲ್ಲಿ ವಸೂಲಿಯಾಗುತ್ತಿದೆಯೆಂದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ಈ ಟ್ಯಾಕ್ಸ್‌ಗಳು ಬೇರೆ ಬೇರೆ ರೂಪದಲ್ಲಿ ಬರುತ್ತವೆ. ಎಲೆಕ್ಟ್ರಿಸಿಟಿ ಟ್ಯಾಕ್ಸ್ ಆಗಲೀ ಪ್ರೊಫೆಷನ್ ಟ್ಯಾಕ್ಸ್ ಆಗಲಿ, ಮನೆಗಳ ಟ್ಯಾಕ್ಸ್ ಆಗಲಿ, ಆಕ್ಟ್ರಾಯ್ ಟ್ಯಾಕ್ಸ್ ಆಗಲೀ ಇದೆಲ್ಲವನ್ನೂ ಪಟ್ಟಣ ಪ್ರದೇಶಗಳಲ್ಲಿರತಕ್ಕ ಜನರಿಂದ ವಸೂಲಿ ಮಾಡುತ್ತಿದ್ದೇವೆ. ಸ್ಟೇಟ್ ಎಕ್ಸೈಸ್‌ನಿಂದ ೧೯೫ ಕೋಟಿ ರೂಪಾಯಿಗಳು, ಸೇಲ್ಸ್ ಟ್ಯಾಕ್ಸ್‌ನಿಂದ ೫೫೧ ಕೋಟಿ ರೂಪಾಯಿಗಳು, ವೆಹಿಕಲ್ ಟ್ಯಾಕ್ಸ್‌ನಿಂದ ೯೫ ಕೋಟಿ ರೂಪಾಯಿಗಳು, ಪ್ಯಾಸೆಂಜರ್ ಮತ್ತು ವಸ್ತು ಸಾಗಣೆ ಟ್ಯಾಕ್ಸ್‌ನಿಂದ ೬೦ ಕೋಟಿ ರೂಪಾಯಿಗಳು, ಎಲೆಕ್ಟ್ರಿಸಿಟಿಯಿಂದ ೫೭ ಕೋಟಿ ರೂಪಾಯಿಗಳು, ಬೇರೆ ಬೇರೆ ಕಮಾಡಿಟಿ ಟ್ಯಾಕ್ಸ್‌ನಿಂದ ೬೩ ಕೋಟಿ ರೂಪಾಯಿಗಳು ಸರ್ಕಾರಕ್ಕೆ ಬರುತ್ತದೆ. ಈ ಎಲ್ಲಾ ಟ್ಯಾಕ್ಸ್‌ಗಳನ್ನು ಪಟ್ಟಣ ಪ್ರದೇಶದಲ್ಲಿರತಕ್ಕ ಜನರಿಂದಲೇ ವಸೂಲಿ ಮಾಡುತ್ತಿದ್ದೇವೆ ಒಟ್ಟು ವಸೂಲಾಗುವ ೯೮೬ ಕೋಟಿ ರೂಪಾಯಿಗಳಲ್ಲಿ ೨೧೨ ಕೋಟಿ ರೂಪಾಯಿಗಳನ್ನು ಮಾತ್ರ ಇದಕ್ಕೆ ಖರ್ಚು ಮಾಡಲಾಗಿದೆ. ಇವೊತ್ತು ನೀವು ೬೦ ಕೋಟಿ ರೂಪಾಯಿಗಳನ್ನು ಈ ಖಾತೆಯ ಖರ್ಚಿಗೆ ಒದಗಿಸಿದ್ದೀರಿ, ಅರಬನ್ ಡೆವಲಪ್‌ಮೆಂಟ್ ಖಾತೆಗೆ ೬೦.೧೯ ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಇದರಲ್ಲಿ ೩೫.೬೫ ಕೋಟಿ ರೂಪಾಯಿಗಳನ್ನು ಆಕ್ಟ್ರಾಯ್ ಕಾಂಪನ್‌ಸೇಷನ್ ರೂಪದಲ್ಲಿ ಕೊಡುತ್ತೀರಿ ಇನ್ನುಳಿದ ೧೫ ೩೪ ಕೋಟಿ ರೂಪಾಯಿಗಳನ್ನು ಡಿಪಾರ್ಟ್‌ಮೆಂಟಿಗಾಗಿ ಖರ್ಚು ಮಾಡುತ್ತಿದ್ದೀರಿ. ಪ್ಲಾನ್‌ನಲ್ಲಿ ೧೫.೩೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ನಾನ್ ಪ್ಲಾನ್‌ನಲ್ಲಿ ೩೫.೬೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಟೋಟಲ್ ೬.೯೯ ಕೋಟಿ ರೂಪಾಯಿಗಳನ್ನು ನೀವು ಖರ್ಚು ಮಾಡಿದ್ದೀರಿ. ನೀವು ಖರ್ಚು ಮಾಡತಕ್ಕ ಹಣವು, ಪಟ್ಟಣ ಪ್ರದೇಶದಲ್ಲಿರುವ ೧ ಕೋಟಿ ೭ ಲಕ್ಷ ಜನರಿಗೆ ಅಂದಾಜು ಮೇರೆಗೆ ಪರ್‌ಕ್ಯಾಪಿಟಾ ೬ ರೂಪಾಯಿಗಳನ್ನು ಖರ್ಚು ಮಾಡಿದಂತಾಗುತ್ತದೆ ನೀವು ಎಸ್ಟಾಬ್ಲಿಷ್‌ಮೆಂಟಿಗೆ ಮಾಡುವ ಖರ್ಚನ್ನು ತೆಗೆದರೆ ಕೇವಲ ೩ ರೂಪಾಯಿ ಖರ್ಚು ಮಾಡಿದಂತಾಗುತ್ತದೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇವೊತ್ತು ಲಕ್ಷ್ಮೀಸಾಗರ್‌ರವರು ೮೫–೮೬ನೇ ಸಾಲಿಗೆ ಖರ್ಚು ಮಾಡಲಿಕ್ಕೆ ಹಣವನ್ನು ಮಂಜೂರು ಮಾಡ ಲಿಕ್ಕೆ ಕೇಳುತ್ತಿದ್ದಾರೆ. ಪಟ್ಟಣ ಪ್ರದೇಶದಲ್ಲಿರತಕ್ಕ ಜನರ ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ಇವರಿಗೆ

ಸಾಧ್ಯವಾಗುವುದಿಲ್ಲ. ನಮ್ಮ ಸರ್ಕಾರ ಇದ್ದಾಗ ೧೯೭೯–೮೦ರಲ್ಲಿ ೫೯.೫೬ ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು. ೧೯೮೦–೮೧ರಲ್ಲಿ ೭೨.೩೬ ಕೋಟಿ ರೂಪಾಯಿಗಳನ್ನು, ೧೯೮೧–೮೨ರಲ್ಲಿ ೭೨.೧೫ ಕೋಟಿ ರೂಪಾಯಿಗಳನ್ನು ೧೯೮೨–೮೩ರಲ್ಲಿ, ಆಗ ಮಾನ್ಯ ವೀರಪ್ಪಮೊಯ್ಲಿಯವರು ಅರ್ಥ ಸಚಿವರಾಗಿದ್ದರು ಆಗ ಈ ಡಿಪಾರ್ಟ್‌ಮೆಂಟಿಗೆ ೮೮ ಕೋಟಿ ರೂಪಾಯಿಗಳನ್ನು ಒದಗಿಸಿದ್ದೆವು. ೧೯೮೨–೮೩ರಲ್ಲಿ ಐ.ಯು.ಡಿ.ಪಿ. ಮತ್ತು ಎಲ್.ಐ.ಸಿ. ಹಾಗು ಹುಡ್‌ಕೋ ಇಲಾಖೆಗಳಿಂದ ಹಣವನ್ನು ಪಡೆದುಕೊಂಡು ಆ ವರ್ಷ ೧೨೦ ಕೋಟಿ ರೂಪಾಯಿಗಳನ್ನು ಈ ಇಲಾಖೆಗೆ ಇಟ್ಟಿದ್ದೆವು. ಈಗ ಎಂದರೆ ೧೯೮೫–೮೬ನೇ ಸಾಲಿಗೆ ೬೦ ಕೋಟಿ ರೂಪಾಯಿಗಳನ್ನು ಮಾತ್ರ ಈ ಬಜೆಟ್‌ನಲ್ಲಿ ಇಟ್ಟಿದ್ದಾರೆ. ಅಂದರೆ ೫೦ ಪರ್‌ಸೆಂಟ್ ಹಣ ಡ್ರಾಪ್ ಆಗಿದೆ. ಪಟ್ಟಣ ಪ್ರದೇಶಗಳ ಸಮಸ್ಯೆಗಳ ಬಗ್ಗೆ ರಾತ್ರಿ ಹಗಲು ಮಾತನಾಡತಕ್ಕ ಮಾನ್ಯ ಲಕ್ಷ್ಮೀಸಾಗರ್‌ರವರು ಈ ಇಲಾಖೆಗೆ ಬಹಳ ಕಡಿಮೆ ಹಣವನ್ನು ಇಟ್ಟಿದ್ದಾರೆ. ಇದರಿಂದ ಜನರ ಸಮಸ್ಯೆಗಳನ್ನು ಹೇಗೆ ನಿವಾರಿಸುತ್ತಾರೆ ? ಇದರಿಂದ ನಮಗೆ ಬಹಳ ದುಃಖವಾಗುತ್ತದೆ. ನಮ್ಮ ರಾಜ್ಯದಲ್ಲಿ ೬ ಕಾರ್ಪೊರೇಷನ್‌ಗಳು ಇವೆ, ೩ ಮುನಿಸಿಪಾಲಿಟಿಗಳು ಇವೆ, ೨೧೫ ಟೌನ್ ಮುನಿಸಿ ಪಾಲಿಟಿಗಳು ಇವೆ ೧೧ ನೋಟಿಫೈಡ್ ಏರಿಯಾಗಳು ಇವೆ. ಪಿ.ಡಬ್ಲ್ಯು.ಡಿ. ವಾಟರ್‌ಸಪ್ಲೈ, ಕರ್ನಾಟಕ ಅರ್‌ಬನ್ ವಾಟರ್ ಸಪ್ಲೈ ಇದೆ, ಟೌನ್ ಬೋರ್ಡ್‌ಗಳು ಇವೆ. ಇವುಗಳಿಗೆಲ್ಲಾ ಹೇಗೆ ಸರ್ಕಾರ ಧನ ಸಹಾಯ ಮಾಡುತ್ತದೆ ? ಜನರ ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಪರಿಹರಿಸಲು ಪ್ರಯತ್ನ ಮಾಡುತ್ತೇವೆಂದು ವಾಗ್ದಾನ ಕೊಡತಕ್ಕ ಸರ್ಕಾರ ಇವೊತ್ತು ಯಾವ ರೀತಿ ವಂಚನೆ ಮಾಡುತ್ತಿದೆ ಎಂಬುದು ಗೊತ್ತಾಗುತ್ತಿದೆ. ಪಟ್ಟಣ ಪ್ರದೇಶದಲ್ಲಿರುವ ಒಂದು ಕೋಟಿ ಏಳು ಲಕ್ಷ ಜನರಿಗೆ ಇವತ್ತಿನ ದಿವಸ ಯಾವ ರೀತಿಯಾಗಿ ಕೆಲಸ ಮಾಡುತ್ತೀರಿ ? ಯಾವ ರೀತಿಯಾಗಿ ಅವರ ಸಮಸ್ಯೆಗಳನ್ನು ಪರಿಹಾರ ಮಾಡುತ್ತೀರಿ ? ಯಾವ ರೀತಿ ಜನರಿಗೆ ಒಂದು ತರಹದ ಸಮಾಧಾನವನ್ನು ಕೊಡುತ್ತೀರಿ ಎನ್ನುವ ಮಾತನ್ನು ನಾನು ನೊಂದ ಮನಸ್ಸಿನಿಂದ ಕೇಳಬೇಕಾಗುತ್ತದೆ. ಇಲಾಖೆಗಳಲ್ಲಿ ಎಫಿಷಿಯಂಟ್ ಆಫೀಸರ್‌ಗಳು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲವಾಗಿದೆ. ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿ, ಹಾಗೂ ಸಣ್ಣಪುಟ್ಟ ವ್ಯವಹಾರಗಳ ಬಗ್ಗೆ ಹೇಳಬೇಕಾದರೆ ಸಾಕಷ್ಟು ಕಾಲವಾಗುತ್ತದೆ ಆದುದರಿಂದ ಅದರ ಬಗ್ಗೆ ನಾನು ಈಗ ಹೇಳುವುದಿಲ್ಲ. ಬೆಂಗಳೂರಿನಲ್ಲಿ ವಾಟರ್ ಸಪ್ಲೈ ಬೋರ್ಡ್ ಇದೆ, ಕರ್ನಾಟಕ ವಾಟರ್ ಬೋರ್ಡ್ ಇದೆ, ಸ್ಲಮ್ ಬೋರ್ಡ್ ಇದೆ, ಈ ಬೋರ್ಡ್‌ಗಳು ಜನರ ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಯಾವ ರೀತಿಯಾಗಿ ವ್ಯವಸ್ಥೆ ಮಾಡಿದ್ದೀರಿ ? ಏನು ಸಾಧನೆಯನ್ನು ಮಾಡಿದ್ದೀರಿ ? ಈಗ ಬೋರ್ಡ್‌ಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕೆಲಸ ಮಾಡುವುದಕ್ಕೆ ಹಣವೇ ಇರುವುದಿಲ್ಲ. ಇವರು ಆಕ್ಟ್ರಾಯಿ ತೆಗೆದುಹಾಕಿದ್ದಾರೆ. ೧೯೭೮–೭೯ರಲ್ಲಿ ಚುನಾವಣೆಗಳಾದ ಮೇಲೆ ಬೆಂಗಳೂರಿನ ಮುನಿಸಿಪಾಲಿಟಿ ಮತ್ತು ಇನ್ನುಳಿದ ಸಣ್ಣ ಪುಟ್ಟ ಮುನಿಸಿ ಪಾಲಿಟಿಗಳ ಪ್ರೆಸಿಡೆಂಟ್‌ರುಗಳು ಮತ್ತು ಮೇಯರ್‌ಗಳ ಮೇಲೆ ಕೆಲಸ ಕಾರ್ಯಗಳನ್ನು ಹಾಕಿ ಬಿಟ್ಟಿದ್ದಾರೆ. ೧೯೮೩–೮೪ರಲ್ಲಿ ೬೦.೨೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಪ್ರಾವಿಜನ್ ಮಾಡಿದ್ದರು, ಅದರಲ್ಲೆಲ್ಲ ೪೯.೧೯ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಇನ್ನು ಉಳಿದ ೧೧.೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡದೇ ಹಾಗೆಯೇ ಲ್ಯಾಪ್ಸ್ ಆಯಿತು.

೬೦ ಕೋಟಿ ರೂಪಾಯಿಗಳನ್ನು ಕೂಡಾ ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಪ್ರೊವೈಡ್ ಮಾಡಿದ್ದೀರಿ. ಅದರ ಅಂಕಿಅಂಶಗಳನ್ನು ನಾನು ಇಲ್ಲಿ ಇಡುತ್ತಿದ್ದೇನೆ. ೧೯೮೪–೮೫ ರಲ್ಲಿ ೭೮.೭೨ ಕೋಟಿ ರೂಪಾಯಿಗಳನ್ನು ಕೊಟ್ಟರೆ ಅದರಲ್ಲಿ ೫೭.೯೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ೨೦.೮೧ ಕೋಟಿ ರೂಪಾಯಿಗಳು ಲ್ಯಾಪ್ಸ್ ಆಗಿದೆ. ಮತ್ತು ೧೯೮೩–೮೪ ಹಾಗೂ ೮೪–೮೫ ರಲ್ಲಿ ಒಟ್ಟು ೩೫ ಕೋಟಿ ರೂಪಾಯಿಗಳ ಬಜೆಟ್ ಅಲಾಟ್ ಆಗಿದೆ. ಅದರಲ್ಲಿಯೂ ಕೂಡಾ ಖರ್ಚು ಆಗಿಲ್ಲ. ನಾವು ೧೯೮೨–೮೩ರಲ್ಲಿ ೧೨೦ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಪ್ರೊವೇಶ್ ಮಾಡಿದ್ದರೆ ೧೯೮೫–೮೬ರಲ್ಲಿ ನೀವುಗಳು ೬೧ ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ೧೯೮೩ ೮೪—೮೫ ರಲ್ಲಿ ೩೫ ಕೋಟಿ ರೂಪಾಯಿಗಳನ್ನು ಒದಗಿಸಿದ್ದರೂ ಆ ಹಣವನ್ನು ನೀವು ಖರ್ಚು ಮಾಡಿಲ್ಲ ಎಂಬ ಆಪಾದನೆಯನ್ನು ನಾನು ಮಾಡುತ್ತೇನೆ. ಡೇ—ಟು—ಡೇ, ಅಫೈರ್ಸ್‌ನಲ್ಲಿ ಪದೇ ಪದೇ ಇಲಾಖೆಗಳಲ್ಲಿಯ ಆಫೀಸರ್ಸ್‌ಗಳನ್ನು ಕರೆದು ಯಾವ ಕೆಲಸಗಳು ಆಗಿಲ್ಲ ಎಂದು ತಾವು ನೋಡಿಕೊಳ್ಳ ಬೇಕಾಗುತ್ತದೆ. ಇವೊತ್ತು ನೀವು ಜನತೆಯ ಮೇಲೆ ಎಂಟ್ರೀ ಟ್ಯಾಕ್ಸ್ ಆಗಲೀ, ವೆಹಿಕಲ್ಸ್ ಟ್ಯಾಕ್ಸ್ ಆಗಲೀ ಹಾಕಿ ಅವರಿಂದ ದುಡ್ಡು ವಸೂಲು ಮಾಡುತ್ತಿದ್ದೀರಿ, ಆದರೆ ನೀವು ಅವರ ಮೇಲೆ ಖರ್ಚು

ಮಾಡತಕ್ಕಂತಹ ಮನಸ್ಸು ತೆಗೆದುಕೊಳ್ಳದಿದ್ದರೆ, ಅವರಿಗೆ ಸಿಗಬೇಕಾದ ಸೌಲಭ್ಯಗಳು ಹೇಗೆ ಸಿಗಬೇಕು ಅವುಗಳನ್ನು ತಾವು ಮಾಡಿಕೊಡ ಬೇಕಾಗುತ್ತದೆ. ನಾವು ೭೮-೭೯-೮೦ ರಲ್ಲಿ ನಾವು ಅಧಿಕಾರದಲ್ಲಿ ಬಂದದ್ದು. ಅದಕ್ಕಿಂತ ಮೊದಲು ಮಾನ್ಯ ದೇವರಾಜ್ ಅರಸ್‌ರವರ ಕಾಲದಲ್ಲಿ ಈ ಆಕ್ಟ್ರಾಯ್ ಅಬಾಲಿಷ್ ಆಯಿತು. ಈ ಆಕ್ಟ್ರಾಯಲ್ಲಿ ಬಹಳ ಗಲಾಟೆ ನಡೆಯುತ್ತಿದೆ, ಅದರಲ್ಲಿ ಬಹಳ ಕರಪ್ಷನ್ ನಡೆಯುತ್ತಿದೆ. ಮತ್ತು ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ತರಹದಲ್ಲಿ ಅನಾನುಕೂಲತೆಗಳು ಆಗುತ್ತಿವೆ ಎಂದು ಅದನ್ನು ಅಬಾಲಿಷ್ ಮಾಡಲಾಯಿತು. ಜನತಾ ಸರಕಾರದವರು ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಅವರು ಎಲ್ಲಾ ಕಡೆಗಳಲ್ಲಿಯೂ ಈ ಆಕ್ಟ್ರಾಯ್ ಪದ್ಧತಿಯನ್ನು ತೆಗೆದುಹಾಕಬೇಕೆಂದು ಮಾಡಿದರು. ಅದಕ್ಕಾಗಿ ಮುಂಬೈ ಯೂನಿವರ್ಸಿಟಿಯ ಶ್ರೀ ಗುಲ್ಹಾಟಿಯವರನ್ನು ಈ ಕಮೀಷನ್‌ಗೆ ನೇಮಕ ಮಾಡಿದರು, ಶ್ರೀ ಗುಲ್ಹಾಟಿಯವರು ಮಹಾನ್ ಆರ್ಥಿಕ ತಜ್ಞರು ಆಗಿದ್ದರು. ಈ ಆಕ್ಟ್ರಾಯನ್ನು ತೆಗೆದುಹಾಕುವುದರಿಂದ ಫೈನಾನ್ಷಿಯಲ್ ರಿಸೋರ್ಸಸ್ ಹೇಗೆ ಮೊಬಲೈಸ್ ಮಾಡಬೇಕೆಂದು ಅದರ ವಿಚಾರವಾಗಿತ್ತು. ನಮ್ಮಲ್ಲಿಯೂ ಕೂಡಾ ಜನತಾ ಸರಕಾರ ಆಡಳಿತಕ್ಕೆ ಬಂದಮೇಲೆ ಈ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಆಯೋಗವನ್ನು ಮಾಡಿದರು. ಅದಕ್ಕೆ ಒಬ್ಬ ಶಾಸಕರನ್ನು ಚೇರ್‌ಮನ್ ಮಾಡಬೇಕಾಗಿತ್ತು, ಮಾಡಿದರು. ಅವರು ಆರ್ಥಿಕ ತಜ್ಞರೆಂದೇನೂ ಅಲ್ಲ. ಒಟ್ಟಿನಲ್ಲಿ ರಾಜಕೀಯ ಕ್ಷೇತ್ರದಲ್ಲಿದ್ದ ಮಾನ್ಯ ಜೇಕಬ್‌ರವರನ್ನು ಅಧ್ಯಕ್ಷರಾಗಿ ಮಾಡಿದರು. ಪಟ್ಟಣ ಪ್ರದೇಶದಲ್ಲಿರತಕ್ಕಂತಹ ಈ ಸಂಸ್ಥೆಗಳ ಹಣಕಾಸಿನ ಮೂಲಕ ಬಗ್ಗೆ ಒಂದು ವರದಿಯನ್ನು ಕಮೀಷನ್ ಕೊಡಬೇಕು. ಎಂದು ಈ ಆಯೋಗವನ್ನು ನೇಮಕ ಮಾಡಲಾಯಿತು, ಅವರಿಗೆ ಎಲ್ಲಾ ಸೌಲಭ್ಯಗಳನ್ನು ಸೌಕರ್ಯಗಳನ್ನು ಎರಡು ವರ್ಷಗಳ ಕಾಲ ಒದಗಿಸಲಾಯಿತು. ಮಾನ್ಯ ಜೇಕಬ್‌ರವರ ನೇತೃತ್ವದ ಸಮಿತಿ ಎರಡು ವರ್ಷಗಳ ನಂತರ ಮಾಡಿದ ಶಿಫಾರಸ್ಸು, ಅದರ ವಿಷಯವೇನೂ ನಮಗೆ ಗೊತ್ತಾಗಲಿಲ್ಲ. ಆ ನಂತರವೂ ಮತ್ತೊಂದು ಸಮಿತಿಯಾಯಿತು. ಶ್ರೀಮಾನ್ ಲಕ್ಷ್ಮಣರಾವ್ ಅವರನ್ನು ಚೇರ್‌ಮನ್ ಮಾಡಿದರು. ಅದೂ ಕೂಡ ಯಾವ ಹಂತದಲ್ಲಿ ಇದೆ ಎನ್ನುವುದು ನನಗೆ ಗೊತ್ತಿಲ್ಲ.

ಶ್ರೀ ಎಂ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಅವರು ಸರಕಾರಕ್ಕೆ ವರದಿ ಕೊಟ್ಟಿದ್ದಾರೆ.

ಶ್ರೀ ಧರ್ಮಸಿಂಗ್.—ಈ ಎಲ್ಲಾ ಆಕ್ಟ್ರಾಯ್ ನಮಗೆ ಹೋದ ಮೇಲೆ ಏನಾಗುತ್ತದೆ ? ಈಗ ನೀವು ಆಡಿಟ್ ರಿಪೋರ್ಟ್ ಆದಮೇಲೆ ಈ ಮುನ್ಸಿಪಾಲಿಟಿಗಳಿಗೆ ಕಾರ್ಪೋರೇಷನ್‌ಗಳಿಗೆ ಆಕ್ಟ್ರಾಯ್ ಕಾಂಪನ್‌ಸೇಷನ್ ೪೫ ಕೋಟಿ ರೂಪಾಯಿಗಳನ್ನು ಕೊಡುತ್ತಾ ಇದ್ದೀರಿ. ನೀವು ಬೆಂಗಳೂರು ನಗರ ಒಂದೇ ಪಟ್ಟಣಕ್ಕೆ ಈ ಆಕ್ಟ್ರಾಯನ್ನು ಮುಂದುವರಿಸಿದರೆ, ಅವರಿಗೆ ೯೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಆದಾಯ ಬರುತ್ತದೆ. ಇಲ್ಲಿಯ ಜನಸಂಖ್ಯೆ ೧೯೭೧ರಲ್ಲಿ ೧೬ ಲಕ್ಷ ಇದ್ದರೆ, ೧೯೭೮ ರಲ್ಲಿ ೨೯ ಲಕ್ಷ ಆಗಿದೆ. ಮುಂದೆ ೨೦೦೦ನೇ ಇಸವಿಯಲ್ಲಿ ಎಂಟು ಮಿಲಿಯ ಆಗಬಹುದೆಂದು ಅಂದಾಜು ಇದೆ. ನೀವು ಇವೊತ್ತು ಅವರಿಗೆ, ೨೨-೨೩ ಕೋಟಿ ರೂಪಾಯಿಗಳನ್ನು ಕೊಡುತ್ತಾ ಇದ್ದೀರಿ. ಅದು ಅವರಿಗೆ ಸಾಕಾಗುವುದಿಲ್ಲ. ಇದರ ಹೆಚ್ಚಳವನ್ನು ಗಮನಿಸತಕ್ಕದ್ದು ಇದೆ. ನೀವು ನಗರದ ಜನರಿಂದ ವಿವಿಧ ಟ್ಯಾಕ್ಸ್‌ಗಳನ್ನು ತೆಗೆದುಕೊಳ್ಳುತ್ತಿರುವಾಗ ಅವರಿಗೆ ಸರಿಯಾದ ಸೌಲಭ್ಯಗಳನ್ನು ಒದಗಿಸುವುದು ಅತ್ಯಗತ್ಯವಾಗಿಲ್ಲವೇ ? ಇವೊತ್ತು ಆಕ್ಟ್ರಾಯಿಂದ ಅನಾಹುತವಾಗಿದೆ, ತೊಂದರೆಯಾಗಿದೆ ಎಂದು ಅದನ್ನು ತೆಗೆದು ಹಾಕಿದರೆ, ಯಾವ ಇಲಾಖೆಯಲ್ಲಿ ಕರಪ್ಷನ್ ಆಗಲೀ ಅನಾನುಕೂಲತೆಗಳಾಗಲೀ, ತೊಂದರೆಯಾಗಲೀ ಇಲ್ಲ ಎಂದು ಹೇಳಲಿಕ್ಕಾಗುವುದಿಲ್ಲ ಎಲ್ಲಾ ಕಡೆಗಳಲ್ಲಿಯೂ ಅದು ಇದ್ದೇ ಇದೆ, ಅದು ಸಮಾಜದ ಒಂದು ವ್ಯವಸ್ಥೆಯಲ್ಲಿ ಬಂದು ಬಿಟ್ಟಿದೆ. ಈ ದೇಶದಲ್ಲಿ ಅದು ಬೆಳೆದು ಬಂದಿದೆ. ಇಲ್ಲಿ ಮಾನ್ಯ ಅಬ್ದುಲ್ ನಜೀರ್ ಸಾಬ್‌ರವರು ಕೆಲವು ವಿಚಾರಗಳನ್ನು ಹೇಳಿದ್ದರು. ಅವರು ಕಾರ್ಲ್‌ಮಾರ್ಕ್ಸ್ ಮುಂತಾದವರ ತತ್ವಗಳನ್ನುದ್ದೇಶಿಸಿ ಅನೇಕ ವಿಚಾರಗಳನ್ನು ಹೇಳಿದರು. ಆ ವಿಚಾರಗಳನ್ನು ಆಚರಣೆಯಲ್ಲಿ ತರಬೇಕಾದರೆ, ಅದಕ್ಕೂ ಕೂಡಾ ಜನತಾ ಪಕ್ಷದ ವಿಚಾರದ ಹಿನ್ನಲೆಯಲ್ಲಿ ಆ ತತ್ವಗಳನ್ನು ತರಲಿಕ್ಕೆ ಆಗುವುದಿಲ್ಲ. ಜನರೆಲ್ಲರೂ ಅದರ ಬಗ್ಗೆ ವಿಚಾರ ಮಾಡಿದರೆ ಮಾತ್ರ ಅದು ಸಾಧ್ಯವಾಗುತ್ತದೆ. ಜನರು ಅದರ ಬಗ್ಗೆ ಮನಸ್ಸು ಮಾಡಬೇಕು ಅದನ್ನು ನಾವೆಲ್ಲರೂ ಕೂಡಿ ಮಾಡಬೇಕಾಗುತ್ತದೆ, ಈ ಕರಪ್ಷನ್ ವಿಷಯ ಎಲ್ಲಾ ಕಡೆಯಲ್ಲಿ ಇದೆ. ಆ ಡಿಪಾರ್ಟ್‌ಮೆಂಟ್ ಈ ಡಿಪಾರ್ಟ್‌ಮೆಂಟ್ ಎಂದು ನಿಗದಿ ಮಾಡಿ ಅದರ ಆಧಾರದ ಮೇಲೆ ಈ ವಿಚಾರ ತೆಗೆದುಕೊಳ್ಳುವುದಾದರೆ ಅದು ತಪ್ಪು. ಇದನ್ನು ನನ್ನ ಅನುಭವದಿಂದ ಹೇಳುತ್ತಾ ಇದ್ದೇನೆ. ಅದಕ್ಕಾಗಿ ನಾನು ಹೇಳುವುದು ಇವೊತ್ತಿನ ದಿವಸ ನೀವು ಆಕ್ಟ್ರಾಯ್‌ನ್ನು ಇಂಟ್ರಡ್ಯೂಸ್ ಮಾಡಿ ಬಿಡಿ

ಉದಾಹರಣೆಗೆ ಹೇಳುವುದಾದರೆ, ನಗರ ನೀರು ಸರಬರಾಜು ಮಾಡತಕ್ಕವರಿಗೆ ಒಂದು ಪಂಪ್‌ಸೆಟ್ ಕೆಟ್ಟು ಹೋದರೂ ಅದನ್ನು ರಿಪೇರಿ ಮಾಡಲಿಕ್ಕೆ ಬೇಕಾದರೆ ಹಣಕಾಸು ಅವರ ಬಳಿ ಇರುವುದಿಲ್ಲ. ಅವರಿಗೆ ಆರ್ಥಿಕ ವ್ಯವಸ್ಥೆ ಇಲ್ಲವಾಗಿದೆ. ನೀವು ಜಿಲ್ಲಾ ಪರಿಷತ್, ಪಂಚಾಯತ್ ರಾಜ್ಯ ಆಕ್ಟ್ ಮಾಡಿ ಅವರ ಕೈಯಲ್ಲಿ ಹಣ ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ಬೆಂಗಾಲ್‌ನಲ್ಲಿರುವಂತಹ ವ್ಯವಸ್ಥೆ ಇಲ್ಲಿ ಮಾಡುತ್ತೇವೆ ಎಂದು ನಿಮ್ಮ ಹೇಳಿಕೆ. ನಾನೂ ಕೂಡಾ ಬೆಂಗಾಲ್‌ನಲ್ಲಿ ನೋಡಿದ್ದೇನೆ. ಅವರ ಅಧಿಕಾರ ಮತ್ತು ಆರ್ಥಿಕ ರೀತಿಯನ್ನು ಇವೊತ್ತು ನೀವು ಜಿಲ್ಲಾ ಪರಿಷತ್ ಆಕ್ಟ್ ತಂದು ಹಳ್ಳಿಯ ಜನರಿಗೆ ಸಹಾಯ ಮಾಡತಕ್ಕಂತಹ ಸರಕಾರದ ಭಾವನೆ ಏನಿದೆ ಅದನ್ನು ಬಗೆಹರಿಸಲಿಕ್ಕೆ ಸಂಘಸಂಸ್ಥೆಗಳನ್ನು ಬಲಪಡಿಸತಕ್ಕಂತಹ ವಿಚಾರದಲ್ಲಿ, ಮುಂದೆ ಹೇಳುತ್ತೇನೆ. ಇವೊತ್ತು ಸೆಕ್ರೆಟರಿಯೇಟ್‌ಗೆ ಬರತಕ್ಕಂತಹ ವಿಚಾರಗಳನ್ನೂ ನೋಡಬೇಕಾಗುತ್ತದೆ. ನೀವು, ಡಿ. ಸಿ. ಯವರಿಗೆ, ಡಿವಿಜನಲ್ ಕಮೀಷನರ್‌ರವರಿಗೆ ಅಧಿಕಾರವನ್ನು ಡೀ ಸೆಂಟ್ರಲೈಸೇಷನ್ ಮಾಡಿದ್ದೀರಿ. ಅಂತಹ ಒಂದು ಮನೋಭಾವನೆಯ ಒಂದು ಆರ್ಥಿಕ ವ್ಯವಸ್ಥೆಯನ್ನು ಈ ಕಾರ್ಪೊರೇಷನ್ ಮುನ್ಸಿಪಾಲಿಟಿಯವರಿಗೆ ಕೊಟ್ಟರೆ ಒಳ್ಳೆಯದಾಗುತ್ತದೆ. ಇದು ನನ್ನ ಭಾವನೆ. ನಾವು ೧೯೮೩-೮೪ರಲ್ಲಿ ಯಾವ ಭಾವನೆಯೂ ಇರಲಾರದೆ ಎಷ್ಟು ಚೆನ್ನಾಗಿ ಇದನ್ನು ಮಾಡಿದ್ದೇವೆಂದು ತಮಗೆ ಅಂಕಿಅಂಶಗಳಿಂದ ಗೊತ್ತಾಗುತ್ತದೆ.

೩–೦೦ ಪಿ.ಎಂ.

ಮಾನ್ಯ ಅಧ್ಯಕ್ಷರೇ ನಾನು ಹೇಳುತ್ತೇನೆ. ತಾವು ಮತ್ತೆ ಆಕ್ಟ್ರಾಯ್‌ಯನ್ನು ಜಾರಿಗೆ ತನ್ನಿ, ಶ್ರೀಮಾನ್ ಗುಲ್ವಾಡಿಯವರು ತಮ್ಮ ವರದಿಯಲ್ಲಿ ಏನು ಕೊಟ್ಟಿದ್ದಾರೆಂದು ಸಹ ನಾವು ಕಾದು ನೋಡಬೇಕಾಗಿದೆ ಅದೇರೀತಿಯಲ್ಲಿ ಶ್ರೀಮಾನ್ ಲಕ್ಷ್ಮಣರಾವ್‌ರವರು ಸಹ ಒಂದು ವರದಿಯನ್ನು ಕೊಟ್ಟಿದ್ದಾರೆ. ಅವರ ವರದಿ ಈ ಸದನದಲ್ಲಿ ಪ್ರಸ್ತಾಪಕ್ಕೆ ಬರುತ್ತದೆ. ಅವರು ತಮ್ಮ ವರದಿಯಲ್ಲಿ ಯಾವ ರೀತಿಯ ಸಲಹೆ ಮತ್ತು ಸೂಚನೆಗಳನ್ನು ಕೊಟ್ಟಿದ್ದಾರೆ, ಏನು ಶಿಫಾರಸ್ಸು ಮಾಡಿದ್ದಾರೆ ಎಂಬುದನ್ನೂ ಸಹ ನಾವು ಕಾದು ನೋಡಬೇಕಾಗಿದೆ. ಆದರೆ ನಾನು ನನ್ನ ಒಂದು ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ ಮತ್ತೆ ತಾವು ಆಕ್ಟ್ರಾಯ್‌ಯನ್ನು ಜಾರಿಗೆ ತರುವುದು ಒಳ್ಳೆಯದು ಎಂದು ಮಾನ್ಯ ಉಪಾಧ್ಯಕ್ಷರ ಮುಖಾಂತರ ನಾನು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಮುನಿಸಿಪಾಲಿಟಿಗಳು, ಕಾರ್ಪೊರೇಷನ್‌ಗಳು ಇತ್ಯಾದಿಗಳು ಇವೆ. ಅವುಗಳಿಗೆಲ್ಲಾ ತಾವು ಕೇವಲ ೧೫ ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ ಈ ೧೫ ಕೋಟಿ ರೂಪಾಯಿಗಳಲ್ಲಿ ಲೋಕೋಪಯೋಗಿ ಇಲಾಖೆಗೆ ಮತ್ತು ವಾಟರ್ ಸಪ್ಲೈ ಇಲಾಖೆಗೆ ಕೂಡ ತಾವು ಹಣವನ್ನು ಕೊಡಬೇಕಾಗುತ್ತದೆ, ಆದ್ದರಿಂದ ನಾನು ಹೇಳುವುದೇನೆಂದರೆ ಸ್ಥಳೀಯ ಮುನಿಸಿಪಾಲಿಟಿಗಳ ಆದಾಯವನ್ನು ಹೆಚ್ಚು ಮಾಡುವಂತಹ ಕೆಲಸವನ್ನು ತಾವೇ ಮಾಡಿಕೊಡಬೇಕು. ಆಗ ಅವರ ಅಭಿವೃದ್ಧಿ ಕೆಲಸಕಾರ್ಯಗಳನ್ನು ಅವರು ಮಾಡಿಕೊಳ್ಳುತ್ತಾರೆ. ನಿಮ್ಮಲ್ಲಿ ಅವರು ಬರುವುದು ತಪ್ಪುತ್ತದೆ. ಇನ್ನು ಬೆಂಗಳೂರು ನಗರದಲ್ಲಿ ಜಮೀನನ್ನು ಲೀಜ್‌ಗೆ ಕೊಟ್ಟಿದ್ದಾರೆ. ೧೯೮೦ನೇ ಇಸವಿಯಿಂದ ಯಾರು ಯಾರು ಯಾರು ಯಾರಿಗೆ ಎಷ್ಟೆಷ್ಟು ಜಮೀನುಗಳನ್ನು ಲೀಜ್‌ಗೆ ಕೊಟ್ಟಿದ್ದಾರೆಂದು ಪಟ್ಟಿ ಮಾಡಿದರೆ ಆಗ ಗೊತ್ತಾಗುತ್ತದೆ. ಸ್ವಾಮಿ ನಾನು ಮಂತ್ರಿಯಾಗಿದ್ದಾಗ ಬೆಂಗಳೂರು ನಗರದಲ್ಲಿ ಯಾರ್‍ಯಾರಿಗೆ ಜಮೀನನ್ನು ಲೀಜ್‌ಗೆ ಕೊಟ್ಟಿದ್ದಾರೆ ಎಂಬುದನ್ನು ಪರಿಶೀಲನೆ ಮಾಡಬೇಕೆಂದು ಒಂದು ಆದೇಶವನ್ನು ಕೊಟ್ಟಿದ್ದೆ. ಆಗ ನಮ್ಮ ಬೆಂಗಳೂರು ನಗರದಲ್ಲಿ ಇರುವಂತಹ ಅಲಸೂರು ಲೇಕ್ ಅನ್ನು ಕೇವಲ ೬೫೦ ರೂಪಾಯಿಗಳ ಬಾಡಿಗೆಗೆ ಎಷ್ಟೋ ವರ್ಷಗಳ ಕಾಲ ಲೀಜ್‌ಗೆ ಕೊಟ್ಟಿದ್ದರು. ಆಗ ಈ ವಿಷಯವನ್ನು ಶಾಸಕರಾದಂಥ ಶ್ರೀಮಾನ್ ಮೈಕೇಲ್ ಫರ್ನಾಂಡೀಸ್‌ರವರು ಸಹ ಪ್ರಸ್ತಾಪ ಮಾಡಿದ್ದರು. ಆ ಲೀಜ್ ಈಗಲೂ ಸಹ ಮುಂದುವರಿಯುತ್ತಿದೆ. ತಾವು ಏನಾದರೂ ಆ ಒಂದು ಲೇಕ್‌ನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲಿಲ್ಲವೆಂದರೆ ನಾವು ಮತ್ತು ನೀವು ಎಲ್ಲರೂ ಸಹ ನಾಚಿಕೆ ಪಡಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ ಇವೊತ್ತು ಸುಮಾರು ೧೦–೨೦ ಸ್ಥಳಗಳನ್ನು ಲೀಜ್‌ಗೆ ಕೊಟ್ಟಿದ್ದಾರೆ ಅದೂ ಕಡಿಮೆ ರೇಟಿನಲ್ಲಿ. ಸರಿಯಾದ ರೀತಿಯಲ್ಲಿ ಲೀಜ್‌ಗೆ ಕೊಟ್ಟರೆ ಈ ಜಮೀನುಗಳಿಂದ ಕಾರ್ಪೊರೇಷನ್‌ಗೆ ಸುಮಾರು ೩೭ ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಅಷ್ಟೊಂದು ದೊಡ್ಡ ಪ್ರಮಾಣದ ಸೈಟ್‌ಗಳು ಇವೆ,

ಈಗ ಕಾರ್ಪೊರೇಷನ್‌ನಲ್ಲಿ ಚುನಾಯಿತ ಪ್ರತಿನಿಧಿಗಳು ಇದ್ದಾರೆ. ಆ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೂ ಕೂಡ ಕಾರ್ಪೊರೇಷನ್‌ಗೆ ಬೇರೆ ಬೇರೆ ಸಂಸ್ಥೆಗಳಿಂದ ಬೇರೆ ಬೇರೆ ಮೂಲಗಳಿಂದ ರೆವಿನ್ಯೂ ಬರುವಂಥಾದ್ದು ಇದೆ ಅದನ್ನು ಸರಿಯಾದ ರೀತಿಯಲ್ಲಿ ರೂಢಿಸಿ ಕೊಳ್ಳುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಬೆಂಗಳೂರು ನಗರದಲ್ಲಿ ಇರುವಂಥ ಸುಮಾರು ೧೦-೨೦ ಸೈಟ್‌ಗಳನ್ನು ಸುಮಾರು ೯೯ ವರ್ಷಗಳಿಗೆ ಮತ್ತು ೩೦ ವರ್ಷಗಳಿಗೆ ಹೀಗೆ ಲೀಜ್‌ಗೆ ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಎಲ್ಲಾ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ದೊಡ್ಡ ದೊಡ್ಡ ನಗರಗಳಲ್ಲಿ ಸೈಟ್‌ಗಳನ್ನು ಲೀಜ್‌ಗೆ ಕೊಟ್ಟಿದ್ದಾರೆ. ಈ ಸೈಟ್‌ಗಳು ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳುವಂತಹ ಸೈಟ್‌ಗಳು. ಈ ರೀತಿಯ ಸೈಟ್‌ಗಳು ಬೆಂಗಳೂರು, ಮೈಸೂರು, ಬೆಳಗಾಂ ಮಂಗಳೂರು, ಹುಬ್ಬಳ್ಳಿ ಧಾರವಾಡ, ಗುಲ್ಬರ್ಗ ಇತ್ಯಾದಿ ಕಡೆಗಳಲ್ಲಿ ಕೊಟ್ಟಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಕೂಲಂಕಷವಾಗಿ ವಿಚಾರ ಮಾಡಿ ತನಿಖೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಮತ್ತು ಈ ಸ್ಥಳಗಳಲ್ಲಿ ಆದಾಯ ಬರತಕ್ಕಂಥ ದೊಡ್ಡ ದೊಡ್ಡ ಶಾಪಿಂಗ್ ಕಾಂಪ್ಲೆಕ್ಸ್‌ಗಳನ್ನು ಕಟ್ಟಿಸಬಹುದು ಈ ಯೋಜನೆಗಳಿಗೆ ಹುಡ್ಕೋ ನೆರವು ನೀಡುತ್ತಿದೆ. ಎಲ್. ಐ. ಸಿ. ಯವರು ಧನಸಹಾಯ ಮಾಡುತ್ತಾರೆ. ಇವರ ಜೊತೆಯಲ್ಲಿ ಮಾನ್ಯ ಮಂತ್ರಿಗಳು ಸಮಾಲೋಚನೆ ಮಾಡಿ ಬರತಕ್ಕಂಥ ಧನಸಹಾಯವನ್ನು ಪಡೆದುಕೊಂಡು ಬೆಂಗಳೂರು, ಮೈಸೂರು, ಬೆಳಗಾಂ, ಹುಬ್ಬಳ್ಳಿ, ಧಾರವಾಡ ಮತ್ತು ಗುಲ್ಬರ್ಗಗಳಲ್ಲಿ ಶಾಪಿಂಗ್ ಕಾಂಪ್ಲೆಕ್ಸ್‌ಗಳನ್ನು ತೆರೆಯಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುವಂತಹ ಬಡ ಜನರಿಗೆ ಸರ್ಕಾರದ ವತಿಯಿಂದ ಸೈಟ್‌ಗಳನ್ನು ಕೊಡುತ್ತೀರಿ. ಆದರೆ ಪಟ್ಟಣ ಪ್ರದೇಶಗಳಲ್ಲಿ ವಾಸ ಮಾಡುವಂತಹ ಬಡ ಜನರಿಗೆ ಯಾವುದೇ ರೀತಿಯಾದಂಥ ಸೈಟ್‌ಗಳನ್ನು ಹಂಚಿಕೆ ಮಾಡುತ್ತಿಲ್ಲ. ಪಟ್ಟಣ ಪ್ರದೇಶಗಳಲ್ಲಿ ಸುಮಾರು ೪೧ ಲಕ್ಷ ಜನ ಬಡವರಿದ್ದಾರೆ. ಅವರಿಗೆಲ್ಲಾ ತಾವು ಸೈಟ್‌ಗಳನ್ನು ಹಂಚಿಕೆ ಮಾಡಿಲ್ಲ. ಕೇವಲ ೫ ಸಾವಿರ ಜನರಿಗೆ ಮಾತ್ರ ಸೈಟ್‌ಗಳನ್ನು ಕೊಟ್ಟಿದ್ದೀರಿ. ಅದೂ ೪೮೦೦ ರೂಪಾಯಿಗಳಿಗಿಂತ ಕಡಿಮೆ ವಾರ್ಷಿಕ ವರಮಾನವಿರುವಂತಹ ಬಡ ಜನರಿಗೆ ಮಾತ್ರ ತಾವು ಸೈಟ್‌ಗಳನ್ನು ಹಂಚಿಕೆ ಮಾಡಿದ್ದೀರಿ. ಯಾರಿಗೆ ತಾವು ಸೈಟ್‌ಗಳನ್ನು ಕೊಡುತ್ತೀರೋ ಅವರು ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಸರ್ಕಾರದಿಂದ ೭೫ ಪರ್ಸೆಂಟ್ ಹಣವನ್ನು ಕೊಡಬೇಕು, ಅದಕ್ಕೆ ೧೨½ ಪರ್ಸೆಂಟ್ ಸಬ್‌ಸೀಡಿಯನ್ನು ಕೊಡಬೇಕು ಮುನಿಸಿಪಾಲಿಟಿಯವರು ಹನ್ನೆರಡೂವರೆ ಪರ್ಸೆಂಟ್ ಸಬ್ಸಿಡಿಯನ್ನು ಕೊಡಬೇಕು. ಆ ರೀತಿಯ ಒಂದು ಡೈರೆಕ್ಷನ್ ಅನ್ನು ತಾವು ಎಲ್ಲಾ ಮುನಿಸಿಪಾಲಿಟಿಗಳ ಅಧ್ಯಕ್ಷರಿಗೂ ಎಲ್ಲಾ ಕಾರ್ಪೊರೇಷನ್ ಮೇಯರ್‌ಗಳಿಗೂ ಕೊಡಬೇಕಾಗುತ್ತದೆ. ಇವರ ಜೊತೆಗೆ ಪಟ್ಟಣಪ್ರದೇಶಗಳಲ್ಲಿರತಕ್ಕಂಥ ಬಡ ಜನರಿಗೆ ಹೌಸಿಂಗ್ ಸೊಸೈಟಿಗಳ ಮುಖಾಂತರ ಮತ್ತು ಜನತಾ ಮನೆಗಳು ಹಾಗೂ ಇತರೆ ಬೇರೆ ಬೇರೆ ರೀತಿಯಲ್ಲಿ ಸಹಾಯ ಮಾಡಬೇಕಾಗುತ್ತದೆ, ಇದರಿಂದ ಅವರಿಗೆ ವಸತಿ ಕಲ್ಪಿಸಿಕೊಡುವುದಕ್ಕೆ ಅನುಕೂಲವಾಗುತ್ತದೆ. ಇದಕ್ಕೆ ಬೇಕಾದರೆ ಕೇಂದ್ರ ಸರ್ಕಾರದಿಂದ ಕೂಡ ಬರತಕ್ಕಂಥ ಹಣವನ್ನು ಉಪಯೋಗಿಸಿಕೊಳ್ಳಿ. ಬ್ಯಾಂಕಿಂಗ್ ಅಸಿಸ್ಟೆಂಟ್ ಸ್ಕೀಂ ಕೂಡ ಇದೆ. ಅದನು ಬೇಕಾದರೂ ಉಪಯೋಗ ಮಾಡಿಕೊಳ್ಳಿ. ಯಾವ ಯಾವ ಕಾರ್ಪೊರೇಷನ್‌ನಲ್ಲಿ ಏನೇನು ಅವಶ್ಯಕತೆ ಇದೆ ಎನ್ನುವ ಬಗ್ಗೆ ವಿವರವನ್ನು ತರಿಸಿಕೊಂಡು ಮಾನ್ಯ ಮಂತ್ರಿಗಳು ನೋಡಬೇಕು. ಕಾರ್ಪೊರೇಷನ್‌ಗಳಿಗೆ ಹೆಚ್ಚಿನ ಸೌಲಭ್ಯವನ್ನು ಕಲ್ಪಿಸಿಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ತಾವು ಡೈರೆಕ್ಟೊರೇಟ್ ಮಾಡಿದ್ದೀರಿ. ಇಂತಹ ಒಂದು ಡೈರೆಕ್ಟೊರೇಟಿನ ಅವಶ್ಯಕತೆ ಇತ್ತು. ಡೈರೆಕ್ಟೋರೇಟ್ ಮಾಡಬೇಕೆಂದು ನಮ್ಮ ಕಾಲದಲ್ಲಿ ಕೂಡ ಪರಿಶೀಲನೆಯಲ್ಲಿ ಇದ್ದಂತಹ ವಿಷಯವೇ. ನಮ್ಮ ಕಾಲದಲ್ಲಿ ಈ ವಿಷಯ ಕ್ಯಾಬಿನೆಟ್ ಸಬ್ ಕಮಿಟಿಯ ಮುಂದೆ ಇತ್ತು. ಕೇವಲ ಡೈರೆಕ್ಟೊರೇಟ್ ಮಾಡಿದರೆ ಸಾಕಾಗುವುದಿಲ್ಲ. ಅವರಿಗೆ ಹೆಚ್ಚಿನ ಅಧಿಕಾರವನ್ನು ನೀವು ಕೊಡಬೇಕಾಗುತ್ತದೆ. ಆ ವಿಚಾರವನ್ನು ಕೂಡ ನಾವು ಯೋಚನೆ ಮಾಡುತ್ತಿದ್ದೆವು. ಡಿವಿಜನಲ್ ಕಮಿಷನರ್ಸ್ ಇದ್ದಾರೆ. ಡಿ. ಸಿ. ಗಳು ಇದ್ದಾರೆ. ಮತ್ತೆ ಈ ಖಾತೆಯ ಒಬ್ಬ ಡೈರೆಕ್ಟರ್ ಸಹ ಇದ್ದಾರೆ ಡೈರೆಕ್ಟೊರೇಟ್ ಮಾಡಿದ ಮೇಲೆ ನೇರವಾಗಿ ಎಲ್ಲಾ ಕೆಲಸಕಾರ್ಯಗಳನ್ನು ಅವರೇ ನೋಡಬೇಕಾಗುತ್ತದೆ. ನಾನು ಸಹ ಸುಮಾರು ಮೂರು ವರ್ಷಗಳ ಕಾಲ ಪ್ರವಾಸ ಮಾಡಿ ನೋಡಿದಾಗ ಮುನಿಸಿಪಲ್ ಎಂಪ್ಲಾಯೀಸ್ ಯೂನಿಯನ್ ಮತ್ತು ಬೇರೆ ಬೇರೆ ಸಂಘಸಂಸ್ಥೆಗಳನ್ನು ನೋಡಿದ್ದೇನೆ. ಅವರ ಕಡೆಯಿಂದ ಕೂಡ ನನಗೆ ಒಂದು ಇಂಥ ಡೈರೆಕ್ಟರೇಟ್ ಬೇಕೆಂದು ಮನವಿಗಳು ಬಂದಿದ್ದವು. ಆ ಪ್ರಕಾರವಾಗಿ ತಾವು ಈಗ ಶ್ರೀ ರಾಮಸ್ವಾಮಿಯವರು ಡೈರೆಕ್ಟರ್ ಆಗಿದ್ದಾರೆ. ಅವರಿಗೆ ಎಲ್ಲಾ ರೀತಿಯ ಅಧಿಕಾರವನ್ನು

ಕೊಡಬೇಕು. ಹಣಕಾಸಿನ ಅಧಿಕಾರವನ್ನು ಸಹ ಕೊಡಬೇಕಾಗಿದೆ. ಹೆಚ್.ಯು.ಡಿ. ಕಾರ್ಯದರ್ಶಿಗಳಿಗೆ ಹೆಚ್ಚು ಕೆಲಸಕಾರ್ಯಗಳು ಇರುತ್ತವೆ. ಅವರು ಎಲ್ಲವನ್ನೂ ಸಹ ನೋಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನೇರವಾಗಿ ಡೈರೆಕ್ಟರ್ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬೇಕಾಗುತ್ತದೆ. ಇನ್ನು ಹುಡ್ಕೋ ರೀಜನಲ್ ಆಫೀಸ್ ಸಹ ಬೆಂಗಳೂರಿನಲ್ಲಿ ಆಗಿದೆ. ಹಿಂದೆ ಈ ಕಛೇರಿ ಮದ್ರಾಸ್ ನಗರದಲ್ಲಿ ಇತ್ತು. ಈಗ ಬೆಂಗಳೂರು ನಗರದ ಕಾವೇರಿ ಬಿಲ್ಡಿಂಗ್‌ನಲ್ಲಿ ಇದೆ. ಈ ಹುಡ್ಕೋ ಏಜನ್ಸಿಯು ಮುಖಾಂತರ ಮುನಿಸಿಪಾಲಿಟಿಗಳ ವಾಟರ್ ಸಪ್ಲೈ ಸ್ಕೀಂಗೆ ಇನ್ನಿತರ ಕೆಲಸಕಾರ್ಯಗಳಿಗೆ ಧನಸಹಾಯ ಸಿಗುತ್ತದೆ. ಆ ಧನಸಹಾಯವನ್ನು ಪಡೆದುಕೊಳ್ಳುವ ಅಧಿಕಾರ ಕೂಡ ತಾವು ಡೈರೆಕ್ಟರ್‌ಗೆ ಕೊಡಬೇಕು. ಮೊನ್ನೆಯ ದಿವಸ ತಾವು ಮುನಿಸಿಪಾಲಿಟಿಗಳ ಅಧ್ಯಕ್ಷರ ಸಮ್ಮೇಳನವನ್ನು ಮಾಡಿದ್ದೀರಿ, ಅಂತಹ ಸಂದರ್ಭದಲ್ಲಿ ಅವರಿಗೆ ಇಂತಹ ವಿಚಾರಗಳನ್ನು ತಿಳಿಸಿದರೆ ಅವರಿಗೂ ಕೂಡ ವಿಷಯ ತಿಳಿಯುತ್ತದೆ. ಯಾವ ಯಾವ ಸ್ಕೀಮುಗಳು ಇವೆ ಎಂಬುದನ್ನು ನಾವು ಹೇಳಬೇಕಾಗುತ್ತದೆ. ಪಟ್ಟಣ ಪ್ರದೇಶಗಳಲ್ಲಿ ಇರುವಂತಹ ಬಡಜನರಿಗೆ ಸೈಟ್‌ಗಳನ್ನು ಕೊಡುವಂತಹ ಜವಾಬ್ದಾರಿ ನಿಮ್ಮ ಮೇಲೆ ಇದೆ.

ಬೆಂಗಳೂರು ನಗರ ನೀರು ಸರಬರಾಜು ಯೋಜನೆಗೆ ನಾವು ೩೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಕಾವೇರಿ ಸೆಕೆಂಡ್ ಸ್ಟೇಜ್ ಮಾಡಿದ್ದುದು ನಮ್ಮ ಕಾಲದಲ್ಲಿ. ಬೆಂಗಳೂರು ಕಾವೇರಿ ಸೆಕೆಂಡ್ ಸ್ಟೇಜ್ ವಾಟರ್ ಸಪ್ಲೈ ಸ್ಕೀಮ್‌ಗೆ ನಾವು ೫೫ ಕೋಟಿ ಪ್ರೊವಯ್ಡ್ ಮಾಡಿದ್ದೇವೆ. ಬಹಳ ಜನ ಆಗ ಬೆಂಗಳೂರು ನಗರ ಒಂದಕ್ಕೇ ೩೮ ಕೋಟಿ ರೂಪಾಯಿಗಳು ಖರ್ಚು ಮಾಡುತ್ತಿದ್ದಾರೆ ಎಂದು ಆಪಾದನೆ ಮಾಡಿದರು. ಆದರೆ ಆಗ ನಾವು ಹೇಳಿದೆವು, ಬೆಂಗಳೂರು ರಾಜ್ಯದ ರಾಜಧಾನಿಯಾಗಿದೆ. ಕ್ಯಾಪಿಟಲ್ ಸಿಟಿ ಇದೆ ಬೆಂಗಳೂರು ಇಂಟರ್‌ನ್ಯಾಷನಲ್ ಸಿಟಿ ಇದೆ ಇದಕ್ಕೆ ಖರ್ಚು ಮಾಡಬೇಕಾಗುತ್ತದೆ ಎಂದು ಹೇಳಿದೆವು. ೧೯೮೦ನೇ ಇಸವಿಯಲ್ಲಿ ಯುನೈಟೆಡ್ ನೇಷನ್ಸ್‌ಗೆ ಹೋಗಿದ್ದಾಗ ನಾನು ರೋಮ್‌ಗೆ ಹೋಗಿದ್ದೆ. ಇಡೀ ಜನತ್ತಿನಲ್ಲಿ ೫೦ ಮುಖ್ಯವಾದ ಪಟ್ಟಣಗಳು ಏನಿವೆ, ಅದರಲ್ಲಿ ನಮ್ಮ ಭರತಖಂಡದಲ್ಲಿ ಇರತಕ್ಕಂಥ, ಡೆಲ್ಲಿಯಾಗಲೀ, ಬೊಂಬಾಯಿ ಆಗಲೀ, ಅಹಮದಾಬಾದ್ ಆಗಲೀ, ಮದ್ರಾಸ್ ಆಗಲೀ ಕಲ್ಕತ್ತಾ ಆಗಲೀ ಮತ್ತು ಬೆಂಗಳೂರು ಆಗಲೀ ಇವೂ ಸೇರಿವೆ. ನಾವೂ ನೀವೂ ಎಲ್ಲಾ ಕಡೆ ಹೋಗಿದ್ದೆವು. ಇಂತಹ ಒಂದು ನಗರಕ್ಕೆ ಯಾವುವೇ ಒಂದು ಕೊರತೆ ಬರಬಾರದು ಎಂದು ನಾವು ಮಾಡಿರುತ್ತೇವೆ. ಬೆಂಗಳೂರಿನ ಪ್ರಾಬ್ಲಂಸ್ ಬಗ್ಗೆ ಎಲ್ಲಾ ಶಾಸಕರನ್ನು ಬೇರೆ ಕಡೆ ಕರೆದುಕೊಂಡು ಹೋಗಿದ್ದೆ. ಆಗ ರೋಮ್‌ಗೆ ನಾನೊಬ್ಬನೇ ಹೋಗಿದ್ದೆ. ಪಾಪ್ಯುಲೇಷನ್ ಅಂಡ್ ಅರ್ಬನ್ ಪ್ರಾಬ್ಲಂ ಮೇಲೆ ಕಾನ್‌ಫರೆನ್ಸ್ ಅಟೆಂಡ್ ಆಗಿದ್ದೆ. ಅಲ್ಲಿ ಒದಗಿಸಿದ ಪಟ್ಟಿಯನ್ನೂ ಕೂಡಾ ನಾನು ನೋಡಿದೆ. ಬೆಂಗಳೂರು ನಗರದ ಬೆಳವಣಿಗೆಯ ಬಗ್ಗೆ ಆತುರತೆ ಇತ್ತು. ಬೆಳೆಯುತ್ತಿರುವ ನಗರಕ್ಕೆ ಯಾವ ರೀತಿ ಲಕ್ಷ್ಯ ಕೊಡಬೇಕೆಂದು ನನಗೆ ಆತುರತೆ ಇತ್ತು. ನಾನು ಏತಕ್ಕೆ ಇವೊತ್ತು ಈ ಎಲ್ಲಾ ವಿಚಾರಗಳ ಬಗ್ಗೆ ಹೇಳುತ್ತಿದ್ದೇನೆ ಎಂದರೆ, ಸಣ್ಣ ಪುಟ್ಟ ವಿಷಯಗಳ ಮೇಲೆ ಚರ್ಚೆ ಮಾಡಿ, ಏನೇನು ಲೋಪದೋಷಗಳು ಇದೆ ಅದನ್ನು ಟೀಕೆ ಮಾಡಿದರೆ ಅದು ಬೇರೆ ಇವತ್ತು ಸಲಹೆ ಸೂಚನೆಗಳನ್ನು ಕೊಡತಕ್ಕಂಥಾದ್ದು ನಮ್ಮ ಜವಾಬ್ದಾರಿಯಾಗಿರುತ್ತದೆ ಯಾವರೀತಿ ಈ ಕೆಲಸವನ್ನು ಮೆಥಾಡಿಕಲ್ ಆಗಿ ಮಾಡಬೇಕೆಂದು ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ನಾನು ಸಲಹೆ ಮಾಡುತ್ತಿದ್ದೇನೆ. ಅವರು ಇನ್ನೂ ಕೂಡಾ ಹೆಚ್ಚಿನ ಕಲ್ಪನೆಯನ್ನು ಮಾಡಿ, ಇದರ ಬಗ್ಗೆ ಆಸಕ್ತಿಯನ್ನು ಮಾಡಿದ್ದರೆ, ನನಗೆ ಖುಷಿಯಾಗುತ್ತಿತ್ತು. ಮುಂದೆ ಬರತಕ್ಕಂಥ ಡಿಮ್ಯಾಂಡ್‌ನಲ್ಲಿ ಆದನ್ನು ನೋಡೋಣ.

ಉಪಾಧ್ಯಕ್ಷರು.—ಅವರಿಗೆ ರೋಮ್‌ಗೆ ಹೋಗಿ ಬರುವುದಕ್ಕೆ ಹೇಳಿ.

ಶ್ರೀ ಧರ್ಮಸಿಂಗ್.—ಇನ್ನು ಕರ್ನಾಟಕ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡ್ ಬಗ್ಗೆ ಹೇಳುತ್ತೇನೆ. ಪಟ್ಟಣ ಪ್ರದೇಶದಲ್ಲಿರತಕ್ಕ ಜನರಿಗೆ ಕುಡಿಯುವ ನೀರನ್ನು ಒದಗಿಸುವುದು ಮುಖ್ಯ. ಹಳ್ಳಿಯಲ್ಲಿರತಕ್ಕಂಥ ಜನರಿಗೆ ಬೋರ್‌ವೆಲ್ ಆಗಲೀ, ರೂರಲ್ ವಾಟರ್ ಸಪ್ಲೈ ಸ್ಕೀಮ್ ಆಗಲೀ ತಾವು ಮಾಡುತ್ತಿದ್ದೀರಿ. ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್ ಏನಿದೆ, ಇದಕ್ಕೆ ತಾವು ೧೯೮೨-೮೩ರಲ್ಲಿ ೧೧.೬೬ ಕೋಟಿ ರೂಪಾಯಿಗಳ ಬಜೆಟ್ ಪ್ರೊವೈಡ್ ಮಾಡಿದ್ದೀರಿ. ೧೯೮೩-೮೪ರಲ್ಲಿ ೬.೭ ಕೋಟಿ ೧೯೮೪-೮೫ರಲ್ಲಿ ೭.೬ ಕೋಟಿ ಪ್ರೊವೈಡ್ ಮಾಡಿದ್ದೀರಿ. ೧೯೮೫-೮೬ರಲ್ಲಿ ೭ ಕೋಟಿ ಪ್ರೊವೈಡ್ ಮಾಡಿ, ಅದರಲ್ಲಿ ಖರ್ಚು ಮಾಡಿದ್ದು ಎಷ್ಟು ಎಂದರೆ ೫.೭೩ ಕೋಟಿ, ಲ್ಯಾಪ್ಸ್ ಆಗಿದ್ದುದು ೧.೨೭ ಕೋಟಿ. ಇದೊಂದು ದೊಡ್ಡ ಡಿಪಾರ್ಟ್‌ಮೆಂಟ್. ನನ್ನ ಕಾಲದಲ್ಲಿದ್ದ ಎಲ್ಲಾ ಎಂಜಿನಿಯರುಗಳು ಇವತ್ತೂ ಅಲ್ಲಿ ಇದ್ದಾರೆ. ಎಲ್ಲಾ ಕೆಲಸ ಮಾಡತಕ್ಕಂಥವರು ಇದ್ದಾರೆ.

ಪದೇ ಪದೇ ನೀವು ಅವರನ್ನು ಟ್ರಾನ್ಸ್‌ಫರ್ ಮಾಡಿಲ್ಲ. ಕೆಲವು ಮಂದಿ ಮಾತ್ರ ಆಗಿದ್ದಾರೆ. ಕೆಲವು ಮಂದಿ ಟ್ರಾನ್ಸ್‌ಫರ್ ಆಗಿದ್ದರೂ ಕೂಡಾ ಇನ್ನೂ ಕೆಲವರು ಡಿಪಾರ್ಟ್‌ಮೆಂಟ್‌ನಲ್ಲಿ ಇದ್ದಾರೆ. ಬೆಂಗಳೂರು ವಾಟರ್ ಸಪ್ಲೈ ಬೋರ್ಡ್ ಆಗಲೀ, ಕರ್ನಾಟಕ ವಾಟರ್ ಸಪ್ಲೈ ಬೋರ್ಡ್ ಆಗಲೀ, ಅಲ್ಲಿ ಪಿ.ಡಬ್ಲ್ಯು.ಡಿ. ತರಹ ಪದೇ ಪದೇ ವರ್ಗಾವಣೆ ಮಾಡಿದರೆ ನಡೆಯುವುದಿಲ್ಲ. ಅಲ್ಲಿರುವವರಿಗೆ ಎಕ್ಸ್‌ಪೀರಿಯನ್ಸ್ ಬೇಕಾಗುತ್ತದೆ. ಹಿಂದೆ ಇದ್ದವರೆಲ್ಲರೂ ಕೂಡಾ ಇದ್ದಾರೆ. ಇವೊತ್ತು ಅಲ್ಲಿ ಏನಾಗಿದೆ ಎಂದರೆ ೧೯೮೫-೮೬ರಲ್ಲಿ ಅಲೋಕೇಷನ್, ಬೋತ್ ಪ್ಲಾನ್ ಅಂಡ್ ನಾನ್ ಪ್ಲಾನ್ ಎರಡೂ ಸೇರಿ ೪.೨೭ ಕೋಟಿ ರೂಪಾಯಿಗಳನ್ನು ನೀವು ಕೊಟ್ಟಿದ್ದೀರಿ. ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡ್‌ಗೆ ವೇಸ್ ಅಂಡ್ ಮೀನ್ಸ್‌ಗೆ ನೀವು ಸಿಂಗಲ್ ಎನ್ ಪಿ. ಯನ್ನೂ ಪ್ರೊವೈಡ್ ಮಾಡಿಲ್ಲ. ತಾವು ವೇಸ್ ಅಂಡ್ ಮೀನ್ಸ್‌ಗೆ ಪ್ರೊವೈಡ್ ಮಾಡದೇ ಹೋದರೆ, ಎಲ್.ಐ.ಸಿ. ಯಿಂದ ಬೇರೆ ಕಡೆಯಿಂದ ಹಣ ಒದಗಿಸಿ ತರುವುದಕ್ಕೆ ಆಗುವುದಿಲ್ಲ. ಎಲ್.ಐ.ಸಿ. ಯಿಂದ ಹಣ ತೆಗೆದು ಕೊಡಬೇಕಾದರೆ ಸ್ಟೇಟ್ ಗೌರ್ನ್‌ಮೆಂಟ್‌ನಿಂದ ಗ್ರ್ಯಾಂಟ್ಸ್ ಪ್ರೊವೈಡ್ ಮಾಡಬೇಕು. ಎಲ್ಲಿಯವರೆಗೆ ವೇಸ್ ಅಂಡ್ ಮೀನ್ಸ್‌ಗೆ ಸರ್ಕಾರದಿಂದ ಗ್ರ್ಯಾಂಟ್ ಕೊಡುವುದಿಲ್ಲ, ಅಲ್ಲಿಯವರೆಗೆ ಎಲ್.ಐ.ಸಿ. ಯವರು ವಾಟರ್ ಸಪ್ಲೈ ಬೋರ್ಡ್‌ಗೆ ಹಣ ಕೊಡುವುದಿಲ್ಲ. Matching grant has to be provided by the State Government, I would like to know how much amount you have received from LIC ? ತಾವು ೧೯೮೩-೮೪, ೧೯೮೪-೮೫ ಹಾಗೂ ೧೯೮೫-೮೬ರಲ್ಲಿ ತಾವು ಎಷ್ಟು ಹಣ ಕೊಟ್ಟಿದ್ದೀರಿ, ಎಲ್.ಐ.ಸಿ ಯಿಂದ ಎಷ್ಟು ಹಣವನ್ನು ತಂದಿದ್ದೀರಿ ಎಂಬುದನ್ನು ತಾವು ಈ ಸದನಕ್ಕೆ ತಿಳಿಸಬೇಕು. ರೀಜನಲ್ ವಾಟರ್ ಸಪ್ಲೈ ಸ್ಕೀಮ್‌ಗಳು ಬಹಳಷ್ಟು ಇವೆ. ಹುಕ್ಕೇರಿ ಇರಬಹುದು, ಸಂಕೇಶ್ವರ ಇರಬಹುದು. ಈ ರೀಜನಲ್ ವಾಟರ್ ಸಪ್ಲೈ ಸ್ಕೀಂ ೧೯೮೧ರಿಂದ ೧೯೯೧ರ ವರೆಗೆ ಇಂಟರ್‌ನ್ಯಾಷನಲ್ ವಾಟರ್ ಡಿಕೇಡ್ ಇನ್ ಸ್ಯಾನಿಟೇಷನ್ ಎಂದು ಹೇಳಿ, ಹಳ್ಳಿ ಪ್ರದೇಶದಲ್ಲಿರತಕ್ಕಂಥ, ಪಟ್ಟಣ ಪ್ರದೇಶದಲ್ಲಿರತಕ್ಕಂಥ ಜನರಿಗೆ ನೀರನ್ನು ಒದಗಿಸಲು ಒಂದು ಮಾಸ್ಟರ್ ಪ್ಲಾನ್ ಕೂಡಾ ನಾವು ರೆಡಿ ಮಾಡಿದ್ದೆವು. ಆ ಮಾಸ್ಟರ್ ಪ್ಲಾನ್‌ನಲ್ಲಿ ೨೪೭ ಪಟ್ಟಣ ಪ್ರದೇಶದಲ್ಲಿ ಸ್ಯಾನಿಟೇಷನ್ ಆಗಲೀ, ವಾಟರ್ ಸಪ್ಲೈ ಬಗ್ಗೆ ಆಗಲೀ, ಅಂಡರ್ ಗ್ರೌಂಡ್ ಡ್ರೈನೇಜ್ ಆಗಲೀ ಮಾಡುವುದಕ್ಕೆ ೨೪೭.೨೭ ಕೋಟಿ ರೂ.ಗಳ ಯೋಜನೆ ಹಾಕಿದ್ದೆವು. ನಾವು ಏನೇ ಮಾಡಿದರೂ ಕೂಡಾ ಪರ್ ಡೇ, ಪರ್ ಕ್ಯಾಪಿಟಾ ೨೫ ಗ್ಯಾಲನ್ಸ್ ನೀರನ್ನು ಕೊಡಬೇಕಾಗುತ್ತದೆ. ೨೫ ಗ್ಯಾಲನ್ ನೀರನ್ನು ಕೊಡದೇ ಹೋದರೆ ನಾವು ಯಾವುದೇ ವ್ಯವಸ್ಥೆಯನ್ನು ಮಾಡಿದ ಹಾಗೆ ಆಗುವುದಿಲ್ಲ. ಈ ಒಂದು ಸ್ಟ್ಯಾಂಡರ್ಡ್‌ನಲ್ಲಿ ಮಾಡುವುದಕ್ಕೆ ೨೪೭ ಕೋಟಿ ರೂಪಾಯಿಗಳ ಯೋಜನೆ ಮಾಡಿದ್ದೆವು. ಈ ಇಂಟರ್ ನ್ಯಾಷನಲ್ ವಾಟರ್ ಡಿಕೇಡ್ ಪ್ರೋಗ್ರಾಂ ೧೯೮೧ರಲ್ಲಿ ಪ್ರಾರಂಭವಾಗಿ, ೫ ವರ್ಷಗಳು ಆಯಿತು. ಇದು ೧೯೯೧ರಲ್ಲಿ ಮುಗಿಯುತ್ತದೆ. ಈ ೫ ವರ್ಷಗಳ ಕಾಲದಲ್ಲಿ, ರೀಜನಲ್ ವಾಟರ್ ಸಪ್ಲೈ ಸ್ಕೀಮ್ ಹುಕ್ಕೇರಿ, ಸಂಕೇಶ್ವರ, ಕುಮಟಾ, ಹೊನ್ನಾವಾರ, ಶಾಂತಿಸಾಗರ ಆಗಲೀ, ಈ ಇಂಟರ್ ನ್ಯಾಷನಲ್ ರೀಜನಲ್ ವಾಟರ್ ಸಪ್ಲೈ ಸ್ಕೀಮ್ ಏನಾಗಿದೆ, ಎಷ್ಟು ಹಣ ಖರ್ಚಾಗಿದೆ, ಎಷ್ಟು ಹಣ ಬಂದಿದೆ ಎಂಬುದರ ಬಗ್ಗೆ ತಾವು ಗಮನ ಕೊಡಬೇಕಾಗುತ್ತದೆ. ಮಾನ್ಯ ಬೈರೇಗೌಡರು ಹಿಂದೆ ಇದಕ್ಕೆ ಚೇರ್ಮನ್‌ರಾಗಿದ್ದರು. ನಾನ್ ಅಫಿಷಿಯಲ್ ಚೇರ್ಮನ್ ಆದರೆ ಏನೋ ಕೆಲಸ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೆ. ಆದರೆ ಅವರು ಏನೂ ಕೆಲಸ ಮಾಡಲಿಲ್ಲ. ಪಟ್ಟಣ ಪ್ರದೇಶದಲ್ಲಿ ಸಣ್ಣ ಸಣ್ಣ ಪ್ರದೇಶದಲ್ಲಿ, ಟೌನ್ ಮುನಿಸಿಪಾಲಿಟೀಸ್‌ನಲ್ಲಿ ಜನರಿಗೆ ನೀರಿನ ಕೊರತೆ ಬಹಳ ಇದೆ, ನೀರನ್ನು ಸರಬರಾಜು ಮಾಡತಕ್ಕಂಥ ಜವಾಬ್ದಾರಿ ಸಿಕ್ಕಿದೆ. ಬಹಳ ಪ್ರಾಮಾಣಿಕತೆಯಿಂದ, ಚೆನ್ನಾಗಿ, ವ್ಯವಸ್ಥಿತವಾಗಿ ಅವರು ಕೆಲಸ ಮಾಡುತ್ತಾರೆ ಎಂದು ನಾನು ತಿಳಿದಿದ್ದೆ. ಆದರೆ ಅವರು ರಾಜಕೀಯದಲ್ಲಿ ತಲ್ಲೀನರಾದರು. ರಾಜಕೀಯದಲ್ಲಿ ತಲ್ಲೀನರಾಗಿದ್ದರಿಂದ ಅವರನ್ನು ಕರ್ನಾಟಕ ವಾಟರ್ ಸಪ್ಲೈ ಬೋರ್ಡಿನ ಚೇರ್ಮನ್‌ರಾಗಿ ಮಾಡಿದ ಉದ್ದೇಶ ಸಾಧನೆಯಾಗಲಿಲ್ಲ. ಅದಕ್ಕೆ ಇವತ್ತಿನವರೆಗೂ ನಾನ್ ಅಫಿಷಿಯಲ್ ಚೇರ್ಮನ್ ಮಾಡಲಿಲ್ಲ, ಮಾಡದೇ ಇದ್ದರೂ ಪರವಾಗಿಲ್ಲ, ಮಾಡಲೇಬೇಕೆಂದು ಏನೂ ಇಲ್ಲ. ಅಲ್ಲಿ ಒಳ್ಳೆಯ ಎಂಜಿನಿಯರ್ಸ್ ಇರುತ್ತಾರೆ, ಅವರಿಗೇ ಕೆಲಸ ವಹಿಸಿದರೆ ಅವರು ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತಾರೆ. ಇವೊತ್ತಿನ ದಿವಸ ಮಾನ್ಯ ಬೈರೇಗೌಡರು ಮಂತ್ರಿ ಸ್ಥಾನದಲ್ಲಿ ಇದ್ದಾರೆ. ಅವರು ಆ ಸಂಸ್ಥೆಯ ಹೆಡ್ ಆಗಿ ಎರಡು ವರ್ಷಗಳ ಕಾಲ ಏನು ಕೆಲಸ ಮಾಡಿದ್ದಾರೆ ಎಂಬುದು ನನಗೆ ಗೊತ್ತಾಗಲಿಲ್ಲ. ವಾಟರ್ ಸಪ್ಲೈ ಒಂದಲ್ಲ ಎಲ್ಲಾ ಕಡೆಗೂ ಈ ರೀತಿ ಇದೆ. ಮಾನ್ಯ

ಕಾಂತಾರವರೂ ಇದರ ಬಗ್ಗೆ ಮಾತನಾಡುತ್ತಾರೆ. ಅವರು ಗುಲ್ಬರ್ಗ ನಗರದ ಶಾಸಕರಾಗಿದ್ದಾರೆ. ಅವರು ಗುಲ್ಬರ್ಗ ನಗರದ ನೀರು ಸರಬರಾಜು ಬಗೆಗೆ ಸಾಕಷ್ಟು ಕಳಕಳಿಯಿಂದ ಪ್ರಶ್ನೆ ಕೇಳಿದ್ದರು, ೧೯೮೦ರ ನಂತರ ಗುಲ್ಬರ್ಗ ನಗರದ ಜನಸಂಖ್ಯೆ ಏನು ಬೆಳೆಯುತ್ತಿದೆ ಅವನ್ನು ಗಮನದಲ್ಲಿಟ್ಟುಕೊಂಡು ನಾನು ಹಿಂದೆ ಅರ್ಥ ಮಂತ್ರಿಗಳನ್ನು ಗುಲಬರ್ಗಾಕ್ಕೆ ಕರೆದುಕೊಂಡು ಹೋಗಿದ್ದು, ಅವರು ೪.೬೮ ಕೋಟಿ ರೂಪಾಯಿಗಳನ್ನು ಅಲ್ಲಿಯ ಯೋಜನೆಗೆ ಸ್ಯಾಂಕ್ಷನ್ ಮಾಡಿದ್ದರು ಆ ಸ್ಕೀಂ ಬಗ್ಗೆ ತಾವು ಇವೊತ್ತು ಹೇಳಬೇಕು. ೧೯೮೧-೮೨ರಲ್ಲಿ ಎಷ್ಟು ಖರ್ಚಾಯಿತು, ೧೯೮೨-೮೩ರಲ್ಲಿ ಎಷ್ಟು ಖರ್ಚಾಗಿದೆ. ಕಳೆದ ಎರಡು ವರ್ಷದ ಅವಧಿಯಲ್ಲಿ ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂಬುದನ್ನು ತಾವು ಹೇಳಬೇಕು. ಅದರ ಜೊತೆಗೆ ತಾವು ಬೆಣ್ಣೆತೊರೆ ಪ್ರಾಜೆಕ್ಟ್‌ಗೂ ಹಣ ಖರ್ಚು ಮಾಡಬೇಕಾಗುತ್ತದೆ. ಅದಕ್ಕೆ ತಾವು ಖರ್ಚು ಮಾಡಿದರೆ. ಗುಲಬರ್ಗಾಕ್ಕೆ ಥರ್ಡ್ ಸ್ಟೇಜ ನಿಂದ ನೀರು ಬರುತ್ತದೆ. ೪.೬೮ ಕೋಟಿ ರೂಪಾಯಿಗಳನ್ನು ಗುಲಬರ್ಗಾ ನಗರಕ್ಕೆ ನಾವಿದ್ದಾಗ ಮಂಜೂರು ಮಾಡಿದ್ದೆವು. ಅದೇ ರೀತಿ ಹುಬ್ಬಳ್ಳಿ ಧಾರವಾಡದಲ್ಲಿ ಇವತ್ತು ೧೦ ಕೋಟಿ ರೂಪಾಯಿಗಳ ಯೋಜನೆ ಹಾಕಿದ್ದೆವು. ಮಾನ್ಯ ಬೊಮ್ಮಾಯಿಯವರು ಇದ್ದಾರೆ. ಅವರೂ ನಾವು ಸಾಕಷ್ಟು ಸಲ ವಿಚಾರ ಮಾಡಿ, ನಮ್ಮ ಸರ್ಕಾರದ ಕಾಲದಲ್ಲೇ ಅದಕ್ಕೆ ೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುತ್ತೇವೆ. ನಾವು ಆಗಲೇ ಅದನ್ನು ಕಂಪ್ಲೀಟ್ ಮಾಡಿದ್ದೆವು. ಕಂಪ್ಲೀಟ್ ಮಾಡಿದ ಮೇಲೆ ಯುಗಾದಿ ದಿವಸ ಅವರು ಪ್ರಾರಂಭ ಮಾಡಿದರು. ಇವತ್ತು ನಮ್ಮ ಹೆಮ್ಮೆಗೆಯವರು ಇದ್ದಾರೋ ಇಲ್ಲವೋ ಗೊತ್ತಿಲ್ಲ. ಮೈಸೂರು ಬಹಳ ದೊಡ್ಡ ನಗರ. ಮೈಸೂರಿಗೆ ೧೧ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅಂಡರ್ ಗ್ರೌಂಡ್ ಡ್ರೈನೇಜ್ ಆಗಬೇಕು, ಎಂಟೂವರೆ ಕೋಟಿ ಗ್ಯಾಲನ್ ನೀರು ಸರಬರಾಜಿನ ಯೋಜನೆ ಆಗಬೇಕೆಂದು ಹೇಳಿ, ಆ ಕಾಲದಲ್ಲೇ ೨೦ ಕೋಟಿ ರೂಪಾಯಿಗಳನ್ನು ಬೈಲ್ಯಾಟರಲ್ ಅಸಿಸ್ಟೆನ್ಸ್ ತರಹ ಕೊಡಬೇಕೆಂದು ಮಾಡಿದ್ದೆವು. ಮೈಸೂರು ನಗರದಲ್ಲಿ ವಿಶ್ವಕನ್ನಡ ಸಮ್ಮೇಳನ ಮಾಡಬೇಕೆಂದು ಹೊರಟಾಗ ಅಲ್ಲಿ ಎಲ್ಲಾ ತರಹದ ಸೌಕರ್ಯ ಕಲ್ಪಿಸಬೇಕೆಂದು, ಮಾಡಿದ್ದೆವು. ಶ್ರೀಮಾನ್ ಮಹಾರಾಜರ ಕಾಲದಲ್ಲಿ ೧೯೧೧ನೇ ಇಸವಿಯಲ್ಲಿ ಅಲ್ಲೇನಂ ಸಿಟಿಇಂಪ್ರೂವ್‌ಮೆಂಟ್ ಬೋರ್ಡ್ ಆಗಲೀ, ಅಭಿವೃದ್ಧಿ ಮಂಡಲಿ ಆಗಲಿ ಏನಿದೆ ಅದು ಇರಲಿಲ್ಲ. ಈ ಮೈಸೂರು ನಗರಕ್ಕೆ ೨೦ ಕೋಟಿ ರೂಪಾಯಿಗಳ ಒಂದು ಸ್ಕೀಂನ್ನೂ ಕೂಡಾ ನಾವು ಮಾಡಿದ್ದೆವು.

ಮಂಗಳೂರಿನಲ್ಲಿ ಕೂಡ ತಮಗೆ ಗೊತ್ತಿದೆ. ಗುಲ್ಬರ್ಗಾ. ಮಡಿಕೇರಿ, ಹುಣಸೂರು, ಕಾರ್ಕಳ ಈ ಸ್ಥಳಗಳಲ್ಲಿ ವಾಟರ್ ಸಪ್ಲೈ ಸ್ಕೀಂ ಇದೆ. ಚನ್ನಪಟ್ಟಣ, ಕೋಲಾರ, ಶಹಾಬಾದ್, ಶಿರಾ ಈ ಕಡೆಗಳಲ್ಲಿಯೂ ವಾಟರ್ ಸಪ್ಲೈ ಸ್ಕೀಂ ಇದೆ. ಈ ಒಂದು ಸ್ಕೀಂನ್ನು ಎಲ್ಲಾ ಕಡೆ ತಯಾರು ಮಾಡಿದೆವು, ರೀಜನಲ್ ವಾಟರ್ ಸಪ್ಲೈ ಸ್ಕೀಂ ಇಟ್ಟುಕೊಂಡು ದೊಡ್ಡ ದೊಡ್ಡ ಪಟ್ಟಣಗಳಿಗೆ ಯಾವ ತರಹ ವ್ಯವಸ್ಥೆ ಮಾಡಬೇಕೆಂಬುದರ ಬಗ್ಗೆ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ, ಇದರ ಬಗ್ಗೆ ತಾವು ವಿಚಾರ ಮಾಡಬೇಕು. ಇದನ್ನು ಎಲ್ಲಾ ಕಡೆಗಳಲ್ಲೂ ಈ ಯೋಜನೆಗಳನ್ನು ಕಾರ್ಯಗತ ಮಾಡಬೇಕು. ಮುನಿಸಿಪಾಲಿಟಿಯವರು ಒಬ್ಬರೇ ಇವನ್ನು ಸರಿದೂಗಿಸುವುದಕ್ಕಾಗುವುದಿಲ್ಲ. ಇದಕ್ಕಾಗಿ ಇರತಕ್ಕ ಆಕ್ಟನ್ನು ತಿದ್ದುಪಡಿ ಮಾಡಬೇಕು. ಇದಕ್ಕಾಗಿ ಎಷ್ಟು ಹಣ ಹಾಕಬೇಕು, ಯಾವ ಯಾವನಿಯಮಗಳನ್ನು ತೆಗೆದುಕೊಳ್ಳಬೇಕೆಂದು ಪರಿಶೀಲನೆ ಮಾಡಿ, ಮಾಡಬೇಕು ಎನ್ನುವುದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಇನ್ನು ಎಲ್ಲದಕ್ಕಿಂತಲ್ಲೂ ಸ್ಲಂ ವಿಷಯ ಬಹಳ ಮುಖ್ಯವಾದುದು ನೀವು ಮೌಲ್ಯಾಧಾರಿತ ರಾಜಕಾರಣ ಎಂದು ಹೇಳುತ್ತೀರಿ, ಇದು ಯಾರಿಗೆ ಏನು ಎನ್ನುವುದೇ ಗೊತ್ತಾಗುವುದಿಲ್ಲ. ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಲಕ್ಷ್ಮೀಸಾಗರ್‌ರವರು, ಚಂದ್ರಶೇಖರ್‌ರವರು, ಎಲ್ಲಾ ಶಾಸಕರು ಕೂಡ ನನ್ನ ಜೊತೆ ಬಾಂಬೆ, ಮದ್ರಾಸ್, ಕಲ್ಕತ್ತಾ ಈ ಪ್ರದೇಶಗಳಿಗೆ ಬಂದಿದ್ದರು. ಕಲ್ಕತ್ತಾದಲ್ಲಿ ೧.೦೦ ಲಕ್ಷ ಪ್ರಜಾಸಂಖ್ಯೆ ಇದ್ದಾರೆ. ಬಾಂಬೆಯಲ್ಲಿ ೮೫ ಲಕ್ಷ ಜನಸಂಖ್ಯೆ ಇದ್ದಾರೆ. ಆಗ ಬಾಂಬೆಯಲ್ಲಿ ರಾಮರಾವ್ ಆದಿಕ್ ಅ ರ್ಬನ್ ಫೈನಾನ್ಸ್ ಮಿನಿಸ್ಟರ್ ಆಗಿದ್ದರು. ಅಲ್ಲಿ ಕಾರ್ಪೊರೇಷನ್ ಮೀಟಿಂಗ್ ನಡೆಯುತ್ತಿತ್ತು ನಾವೆಲ್ಲರೂ ಸಭೆಗೆ ಹೋಗಿದ್ದೆವು. ಇದು ಮಾನ್ಯ ಲಕ್ಷ್ಮೀಸಾಗರ್ ಅವರಿಗೂ ನೆನಪಿರಬಹುದು. ಆಗ ಬಾಬುರಾವ್ ಪಾಟೀಲ್ ಅವರು ಗವರ್ನಮೆಂಟ್ ಚೀಫ್ ವಿಪ್ ಆಗಿದ್ದರು. ಇವೆಲ್ಲವೂ ತಮಗೂ ಕೂಡ ಗೊತ್ತಿರುವ ವಿಷಯಂವೇ. ಬಾಂಬೆಯಲ್ಲಿ ಅರ್ಧದಷ್ಟು ಜನರು ಸ್ಲಮ್ಸ್‌ನಲ್ಲಿರುತ್ತಾರೆ. ಅದರಲ್ಲಿ ೩೮ ಲಕ್ಷ ಜನರು ವೋಟರ್ ಲಿಸ್ಟ್‌ನಲ್ಲಿ ಇದ್ದಾರೆ. ಅಲ್ಲಿ ಜನಗಳಿಗೆ ಎಲ್ಲಾ ಸೌಕರ್ಯ ಒದಗಿಸಿಕೊಡುತ್ತಿದ್ದಾರೆ, ಇದು ಕೂಡ

ಬಹಳ ಸೂಕ್ಷ್ಮವಾದ ವಿಷಯ. ನನಗೆ ಸ್ಲಮ್ಸ್ ಬರಲಿ ಎನ್ನುವ ಉದ್ದೇಶ ಇಲ್ಲ. ನಮ್ಮ ಬೆಂಗಳೂರಿನಲ್ಲಿಯೂ ಕೂಡ ಸುಮಾರು ೭-೮ ಲಕ್ಷ ಜನರು ಈ ಜಾಗಗಳಲ್ಲಿ ಇರಬಹುದು. ಇಲ್ಲಿಗೆ ಬೇರೆ ಬೇರೆ ಕಡೆಯಿಂದ ಬರತಕ್ಕ ಜನರನ್ನು ನಿಲ್ಲಿಸಬೇಕು. ಪಟ್ಟಣ ಪ್ರದೇಶದಲ್ಲಿ ಇಂಡಸ್ಟ್ರೀಸ್‌ಗಳು ಇವೆ. ಇವುಗಳಿಗೆ ಹೆಚ್ಚು ಸಹಾಯ ಮಾಡತಕ್ಕಂಥ ಶ್ರೀಮಂತ ಜನರು ಇದ್ದಾರೆ. ಆದರೂ ಇಲ್ಲಿ ಸಣ್ಣ ಪುಟ್ಟ ಗುಡಿಸಲು ಕಟ್ಟಿಕೊಂಡು ಇರತಕ್ಕ ಜನರೂ ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೊಡೈಕೆನಾಲ್‌ಗೆ ವಿಶ್ರಾಂತಿ ಪಡೆಯಲು ಹೋದ ಸಂದರ್ಭದಲ್ಲಿ, ಯಾವರೀತಿಯಾಗಿ ಬುಲ್ಡೋಜರ್‌ನಿಂದ ಮನೆಗಳನ್ನು ಹೊಡು ಹಾಕಿದರು ಅದೇರೀತಿ ಮಾನ್ಯ ದೇವರಾಜ ಅರಸುರವರು ವಿರೋಧಪಕ್ಷದ ನಾಯಕರಾಗಿದ್ದಾಗ, ನಂದಿನಿ ಲೇಔಟ್‌ನಲ್ಲಿ ೧೨೦ ಮನೆಗಳನ್ನು ಕೆಡವಿದಾಗ, ಬೇರೆ ಬೇರೆ ರೋಡ್‌ನಲ್ಲಿ ಬರತಕ್ಕಂಥ ಮನೆಗಳಲ್ಲಿ ಒಡೆದಾಗ, ತಾವೆಲ್ಲಾ ಕಬ್ಬನ್‌ಪಾರ್ಕ್‌ನಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದಿರಿ. ಬಡವರ ಸರ್ಕಾರವಲ್ಲ, ಬಡವರ ಬೆನ್ನು ಮುರಿಯತಕ್ಕ ಸರ್ಕಾರ ಎಂದು ಹೇಳಿದಿರಿ. ಈಗ ನಿಮ್ಮ ಸರ್ಕಾರ ಬಂದ ಮೇಲೆ, ಸೌತ್‌ಎಂಡ್ ಸರ್ಕಲ್‌ನಲ್ಲಿ, ಜಯನಗರದಲ್ಲಿ ಬೇರೆ ಬೇರೆ ಕಡೆ ಎಷ್ಟು ಸ್ಲಮ್ಸ್‌ಗಳನು **ಹೊಡೆದು ಹಾಕಿದಿರಿ ?**

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಉಪಾಧ್ಯಕ್ಷರೇ, ಸ್ಲಮ್ಸ್ ನಿವಾಸಿಗಳ ಸಂಘದವರು ಸುಪ್ರೀಂ ಕೋರ್ಟಿನಲ್ಲಿ ತಾತ್ಕಾಲಿಕವಾಗಿ ತಡೆಯಾಜ್ಞೆಯನ್ನು ತಂದಿದ್ದಾರೆ. ಈ ವಿಚಾರ ಸುಪ್ರೀಂ ಕೋರ್ಟಿನಲ್ಲಿವೆ ಮತ್ತು "Not to dispossess any slum dweller" "ಎಂದು ಅವರು ಹೇಳಿದ್ದಾರೆ. ಸನ್ಮಾನ್ಯಸದಸ್ಯರು ಇದರ ಬಗ್ಗೆ ಟೀಕೆ ಮಾಡುತ್ತಾ ಹೋದರೆ ನಾನು ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ಈಗಾಗಲೇ ಸ್ಟೇ ಆರ್ಡರ್ ಕೊಟ್ಟಿದ್ದಾರೆ. ಇದರ ಬಗ್ಗೆ ಚರ್ಚೆ ಬೇಡ ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಯಾರು ಸುಪ್ರೀಂ ಕೋರ್ಟಿಗೆ ಹೋಗಿದ್ದರೋ ಅವರಿಗೆ stay ಕೊಟ್ಟಿದ್ದಾರೆ...............

ಶ್ರೀ ಎ. ಲಕ್ಷ್ಮೀಸಾಗರ್.—It is an Omni bus stay. ಕೋರ್ಟ್ ತೀರ್ಮಾನವಾದ ಮೇಲೆ, ಅಲ್ಲಿ ಯಾವರೀತಿ ಆಗುತ್ತದೆಯೋ, ಆ ರೀತಿಯಲ್ಲಿ ನಾವು ನಡೆದುಕೊಳ್ಳುತ್ತೇವೆ. ಈಗ ಇದರ ಬಗ್ಗೆ ಮಾತನಾಡುವುದು ಸಬ್‌ಜುಡೀಸ್ ಆಗುತ್ತದೆ. ಇದರ ಬಗ್ಗೆ ನೀವು ಮಾತನಾಡಿದರೆ ನಾವು ಉತ್ತರ ಕೊಡಬೇಕಾಗುತ್ತದೆ. ಕೋರ್ಟಿಗೆ ವಿರುದ್ಧವಾಗಿ ನಡೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ಚರ್ಚೆಬೇಡವೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಈಗ ತಾವು ಬೇಡಿಕೆಗಳನ್ನು ಇಟ್ಟಿದ್ದೀರಿ. ಕೊಳಚೆ ಪ್ರದೇಶಗಳಿಗೆ ಹಣ ಕೇಳುತ್ತಿದ್ದೀರಿ. ಕೋರ್ಟಿನಲ್ಲಿ ಇರತಕ್ಕ ವಿಷಯಕ್ಕೆ ನಾನು ಹೋಗುವುದಿಲ್ಲ. ಬುಲ್ಡೋಜರ್‌ನಿಂದ ನಂದಿನಿ ಲೇಔಟ್‌ನಲ್ಲಿ ಮನೆಗಳನ್ನು ಒಡೆದಾಗ, ಅವರಿಗೆ ಬೇರೆ ಕಡೆ ಸೈಟುಗಳನ್ನು ಕೊಟ್ಟೆವು. ಲಗ್ಗೆರೆಯಲ್ಲಿ ಸ್ಲಮ್ಸ್‌ನವರಿಗೆ ಕಟ್ಟಡ ಕಟ್ಟಿ ಕೊಟ್ಟಿದ್ದೇವೆ. ಕೊಳಚೆ ಪ್ರದೇಶದ ವಿಷಯದಲ್ಲಿ ಮದ್ರಾಸ್‌ನಲ್ಲಿ ಯಾವರೀತಿ ಮಾಡಿದ್ದಾರೆ ಎಂಬುದನ್ನೂ ನೋಡಿದ್ದೇನೆ. ಇವೊತ್ತಿನ ದಿವಸ ಏನಾಗಿದೆ ಎಂದರೆ, ಸ್ಲಮ್ಸ್ ವಿಚಾರದಲ್ಲಿ ಈ ಸರ್ಕಾರ ಬಡವರ ಬಗ್ಗೆ ಯಾವ ರೀತಿಯಾಗಿ ವಿಚಾರ ಮಾಡುತ್ತಿದೆ? ೧೯೮೨-೮೩ರಲ್ಲಿ ೧೩೮ ಲಕ್ಷ ಅಲೋಕೇಷನ್ ಮಾಡಿದ್ದು ೨೭ ಲಕ್ಷ ಖರ್ಚು ಮಾಡಿದ್ದೇವೆ. ೧೯೮೩-೮೪ರಲ್ಲಿ ೧೪೫ ಲಕ್ಷರೂಪಾಯಿಗಳು ಇಟ್ಟಿದ್ದು, ೧೦೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ೧೯೮೪-೮೫ರಲ್ಲಿ ೧೦೯ ಲಕ್ಷ ಖರ್ಚು ಮಾಡಿದ್ದೀರಿ. ೧೯೮೫-೮೬ರಲ್ಲಿ ೧೮೭ ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೀರಿ. ಈ ಸ್ಲಮ್ಸ್‌ನಲ್ಲಿ ಸುಮಾರು ೧೦ ಲಕ್ಷ ಪ್ರಜಾಸಂಖ್ಯೆ ಇದೆ. ಇದರಲ್ಲಿ ಸುಮಾರು ೫೦ ಪರ್ಸೆಂಟ್ ಹರಿಜನ ಗಿರಿಜನರು ಇದ್ದಾರೆ. ಈ ರೀತಿಯಾಗಿ ಇರತಕ್ಕ ನಜರಿಗೆ ತಾವು ಹುಡ್ಕೋ ಸಹಾಯ ಪಡೆದು ಅವರಿಗೆ ಟೆನಮೆಂಟ್ಸ್ ಪ್ರೊವೈಡ್ ಮಾಡಬೇಕು. ಹುಡ್ಕೋದವರು ಅನೇಕ ಯೋಜನೆಗಳನ್ನು ಮಾಡಿದ್ದಾರೆ. ಇವೊತ್ತು ವ್ಯವಸ್ಥಿತವಾಗಿ ಕೊಳಚೆ ಪ್ರದೇಶವನ್ನು ನಿರ್ಮೂಲನೆ ಮಾಡುವುದಕ್ಕೆ, ಈಗ್ಗೆ ೨೫-೩೦ ವರ್ಷಗಳಿಂದ ಏನು ಮಾಡಿದ್ದಾರೆ ಎಂಬುದನ್ನೂ ನಾವು ನೋಡಬೇಕು. ಕುಡಿಯುವ ನೀರು ಮತ್ತು ಬೀದಿ ದೀಪಗಳಿಗೆ ೮೮ ಲಕ್ಷ ರೂಪಾಯಿಗಳನ್ನು ನಮ್ಮ ಕಾಲದಲ್ಲಿ ಗಾಂಧಿಜಯಂತಿಯ ದಿನದಂದು ಪ್ರಾರಂಭ ಮಾಡಿ ಕೊಟ್ಟಿರುವುದನ್ನೂ ತಮ್ಮಗಮನಕ್ಕೆ ತರುತ್ತಿದ್ದೇನೆ.

೩—೩೦, ಪಿ. ಎಂ.

ಇದೆಲ್ಲಾ ಕೋರ್ಟಿನಲ್ಲಿದೆ, ಆದ್ದರಿಂದ ಇದರ ಬಗ್ಗೆ ಪ್ರಸ್ತಾಪ ಮಾಡುವುದು ಬೇಡ ಎಂದು ತಾವು ಹೇಳಿದ್ದೀರಿ. ಮೊಟ್ಟಮೊದಲನೆಯದಾಗಿ ಹೇಳುವುದಾದರೆ ಯಾವ ಕಾಲದಲ್ಲೂ ಕೂಡ ಬುಲ್ಡೋಜಿಂಗ್ ಆಗಿರಲಿಲ್ಲ. ದಿವಂಗತ ದೇವರಾಜ ಅರಸ್ ಅವರ ಕಾಲದಲ್ಲಿ ಆಗಲಿಲ್ಲ. ಗುಂಡೂರಾವ್ ಅವರ ಕಾಲ ದಲ್ಲಿ ಆಗಲಿಲ್ಲ. ಆದರೆ ತಮ್ಮ ಕಾಲದಲ್ಲಿ ಬುಲ್ಡೋಜಿಂಗ್ ಆಗಿದೆ. ಇದರಿಂದ ಬಡವರು ಯಾವರೀತಿ ಮಣ್ಣುಪಾಲಾಗಿ ಬೀದಿಗೆ ಬಿದ್ದರು ಎಂಬುದು ಪತ್ರಿಕೆಗಳಲ್ಲೂ ಬಂದಿದೆ. ಬಡವರ ಬಗ್ಗೆ ಈ ಸರ್ಕಾರಕ್ಕೆ ಈ ರೀತಿಯ ಭಾವನೆ ಇದೆಯೇನೋ ಎಂಬ ಪ್ರಶ್ನೆಯನ್ನು ಮಾನ್ಯ ಉಪಾಧ್ಯಕ್ಷರ ಮೂಲಕ ನಾನು ತಮಗೆ ಕೇಳಬಯಸುತ್ತೇನೆ, ೧೯೭೬ರಲ್ಲಿ ಇಂಪ್ರೂವ್‌ಮೆಂಟ್ ಬೋರ್ಡ್‌ಗಳನ್ನು ಮಾಡಿದರು. ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಎಲ್ಲಿದೆ ಆ ಪಟ್ಟಣ ವ್ಯವಸ್ಥಿತವಾಗಿ ಬೆಳೆಯಬೇಕು, ಲೇ ಔಟ್ ಚೆನ್ನಾಗಿ ಆಗಬೇಕು, ನೀರಿನ ಸರಬರಾಜು ಸರಿಯಾಗಿ ಆಗಬೇಕು ಎಂಬ ದೃಷ್ಟಿಯಿಂದ ರಾಜ್ಯದಲ್ಲಿ ೧೨ ಬೋರ್ಡ್‌ಗಳನ್ನು ಮಾಡಲಾಗಿದೆ. ಎಲ್ಲಾ ಕಡೆಗಳಲ್ಲಿ ಸೈಟುಗಳನ್ನು ಮಾಡತಕ್ಕದ್ದು, ವೀಕರ್ ಸೆಕ್ಷನ್‌ಗೆ ಶೇಕಡ ೫೦ ರಷ್ಟು ಎಸ್.ಸಿ.ಎಸ್.ಟಿ ಗೆ ಶೇಕಡ ೨೫ ರಷ್ಟು ಸಬ್ಸಿಡಿ ಕೊಡತಕ್ಕದ್ದು ಈ ಕೆಲಸಗಳನ್ನು ಮಾಡುವುದಕ್ಕೋಸ್ಕರ ೧೯೮೨—೮೩ರಲ್ಲಿ ೧ ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು. ಆದರೆ ೧೯೮೫—೮೬ರಲ್ಲಿ ತಾವು ಕೇವಲ ೧೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಈ ರೀತಿ ಮಾಡಿದರೆ ೧೨ ಬೋರ್ಡ್‌ಗಳು ಯಾವರೀತಿ ವ್ಯವಸ್ಥಿತವಾಗಿ ಕೆಲಸ ಮಾಡಬೇಕು ? ಅಭಿವೃದ್ಧಿ ಕಾರ್ಯಗಳನ್ನು ಹೇಗೆ ಮಾಡಬೇಕು ? ದುಡ್ಡೇ ಇಲ್ಲ. ೧೦ ಲಕ್ಷ ರೂಪಾಯಿಗಳು ಎಸ್ಟಾಬ್ಲಿಷ್‌ಮೆಂಟ್‌ಗೇ ಸಾಕಾಗುವುದಿಲ್ಲ. ಈ ರೀತಿ ಮಾಡುವ ಬದಲು ಅವುಗಳನ್ನು ಅಬಾಲಿಷ್ ಮಾಡಿದರೆ ಚೆನ್ನಾಗಿರುತ್ತದೆ. ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರತಕ್ಕ ಪಟ್ಟಣಗಳು ಅಭಿವೃದ್ಧಿ ಹೊಂದುವಾಗ ಕಾರ್ಯಕ್ರಮಗಳು ಏನು ನಡೆಯಬೇಕು ಅದಕ್ಕೆ ಹಣ ಇಟ್ಟಿಲ್ಲ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಸಣ್ಣ ಸಣ್ಣ ಪಟ್ಟಣಗಳ ಅಭಿವೃದ್ಧಿ ಕಾರ್ಯಕ್ರಮಕ್ಕೆ ೫೦ ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರದಿಂದ ಖರ್ಚು ಮಾಡಿದರೆ ಕೇಂದ್ರ ಸರ್ಕಾರದಿಂದ ೫೦ ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ, ೭ನೇ ಯೋಜನೆಯಲ್ಲಿ ೬ ಕೋಟಿ ೩೩ ಲಕ್ಷ ರೂಪಾಯಿಗಳು ನಿಗದಿಯಾಗಿತ್ತು. ಆದರೆ ೭ನೇ ಯೋಜನೆಯಲ್ಲಿ ಎಷ್ಟು ಹಣ ಎಂದು ಇನ್ನು ಇನ್‌ಕ್ಲೂಡ್ ಗಿಲ್ಲ. ೭ನೇ ಯೋಜನೆಯಲ್ಲಿ ಸೈಟುಗಳನ್ನು ಮಾಡುವುದಕ್ಕಾಗಲೀ, ಮಾರ್ಕೆಟ್ ಕಾಂಪ್ಲೆಕ್ಸ್ ಮಾಡುವುದಕ್ಕಾಗಲೀ, ಪಟ್ಟಣದ ಅಭಿವೃದ್ಧಿಗಾಗಲೀ ಯಾವರೀತಿ ಪ್ಲಾನ್ ಹಾಕಿಕೊಂಡಿದ್ದೀರಿ? ಎಷ್ಟು ಪಟ್ಟಣಗಳನ್ನು ಈ ಯೋಜನೆಯಲ್ಲಿ ಒಳಪಡಿಸಿಕೊಂಡಿದ್ದೀರಿ? ಯಾವ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ? ಇದು ಬಹಳ ಮುಖ್ಯವಾದ ಯೋಜನೆ. ಬಿ.ವಿ.ಕೆ. ಅಯ್ಯಂಗಾರ್ ರೋಡ್ ಬಗ್ಗೆ ಹಿಂದೆ ತಾವೇ ಒಂದು ಪ್ರಶ್ನೆ ಹಾಕಿ ಎಷ್ಟು ಕಾಂಪೆನ್‌ಸೇಷನ್ ಕೊಡಬೇಕಾಗುತ್ತದೆಂದು ಕೇಳಿದ್ದಿರಿ. ಖುದ್ದಾಗಿ ಹೋಗಿ ನಾವು ಇದನ್ನು ಇನ್‌ಸ್ಪೆಕ್ಷನ್ ಮಾಡಿದ್ದೆವು. ಕಾಂಪೆನ್‌ಸೇಷನ್ ಹೆಚ್ಚು ಬೇಕಾಯಿತು ಬಿ.ವಿ.ಕೆ. ಅಯ್ಯಂಗಾರ್ ರೋಡಿನಿಂದ ಮೈಸೂರು ರೋಡಿಗೆ ಹೋಗತಕ್ಕ ರಸ್ತೆಯ ಬಗ್ಗೆ ಯಾವ ರೀತಿ ಕೆಲಸ ಮಾಡುತ್ತಿದ್ದೀರಿ ಎಂಬುದನ್ನು ತಾವು ಹೇಳಬೇಕು. ಸರ್ಕ್ಯುಲರ್ ರೈಲ್ವೆ ಬಗ್ಗೆ ೧೯೮೨—೮೩ರಲ್ಲಿ ೧೦ ಲಕ್ಷ ರೂಪಾಯಿ ಖರ್ಚು ಮಾಡಿ ಪ್ಲಾನಿಂಗ್ ಮಾಡಿದ್ದರು. ಸರ್ಕ್ಯುಲರ್ ರೈಲ್ವೆ ಬಗ್ಗೆ ಪ್ರಧಾನ ಮಂತ್ರಿಗಳ ಜೊತೆ ಮಾತನಾಡಿದ್ದೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದರ ಬಗ್ಗೆ ತಾವು ಗಮನ ಕೊಡಬೇಕು. ಬೆಂಗಳೂರು ಮತ್ತು ಇತರ ಕಡೆಗಳಿಗೆ ಕಾಂಪ್ರೆಹೆನ್ಸೀವ್ ಡೆವಲಪ್‌ಮೆಂಟ್ ಪ್ಲಾನ್ ಮಾಡಬೇಕು. ಸುಭಾಷ್‌ನಗರದಿಂದ ಕೆಂಪೇಗೌಡ ರೋಡಿಗೆ ಹೋಗುವ ಜಾಗದಲ್ಲಿ ಪ್ರತಿದಿವಸ ಲಕ್ಷಗಟ್ಟಲೆ ಜನ ತಿರುಗಾಡುತ್ತಿದ್ದಾರೆ, ಅಲ್ಲಿ ತುಂಬಾ ಕಂಜೆಸ್ಟೆಡ್ ಜಾಗ ಇದೆ. ಟ್ರಾಫಿಕ್ ಡೈವರ್ಷನ್ ಮಾಡುವುದಕ್ಕೆ ಯಾವ ರೀತಿ ಕಾರ್ಯಕ್ರಮ ಮಾಡಿದ್ದೀರಿ ? ಬೆಂಗಳೂರು ನಗರದಲ್ಲಿ ಫ್ಲೈಓವರ್ ಬ್ರಿಡ್ಜ್ ಮಾಡುವುದಕ್ಕೆ ನಾವು ಕಾರ್ಯಕ್ರಮ ಮಾಡಿದ್ದೆವು. ಅದು ಈಗ ಯಾವ ಹಂತದಲ್ಲಿದೆ ಎಂಬುದು ಗೊತ್ತಾಗುತ್ತಿಲ್ಲ.

ಬೆಂಗಳೂರು ವಾಟರ್ ಸಪ್ಲೈ ಬೋರ್ಡ್ ಬಗ್ಗೆ ಹೇಳುವುದಾದರೆ ಕಾವೇರಿ ಮೊದಲನೆಯ ಹಂತದ ಯೋಜನೆಯನ್ನು ನಾವು ಮುಗಿಸಿದ್ದೇವೆ. ಕಾವೇರಿ ಎರಡನೇ ಹಂತದ ಯೋಜನೆ ಬಂದಾಗ ೮೦ರಲ್ಲಿ ಅದನ್ನು ಮುಗಿಸಿ ಸೌತ್ ಎಂಡ್ ಸರ್ಕಲ್‌ವರೆಗೆ ನೀರು ತಂದುಕೊಟ್ಟಿದ್ದೆವು. ೫೫ ಕೋಟಿ ರೂಪಾಯಿಗಳ ಯೋಜನೆಗೆ ನಾವು ಸಾಕಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ಬೆಂಗಳೂರು ನಗರದಲ್ಲಿ ತಲಾ ೬೭ ಲೀಟರ್ ನೀರು ಈಗ ಸಿಗುತ್ತಿದೆ. ನ್ಯಾಷನಲ್ ಅವ್‌ರೇಜ್ ಪ್ರಕಾರ ೨೦೦ ಲೀಟರ್

ಸಿಗಬೇಕು. ಬೆಂಗಳೂರು ಜನಸಂಖ್ಯೆ ತೆಗೆದುಕೊಂಡರೆ ೧೯೭೧ರಲ್ಲಿ ೧೬ ಲಕ್ಷ ಜನಸಂಖ್ಯೆ ಇದ್ದರೆ ೧೯೮೧ ರಲ್ಲಿ ೨೯ ಲಕ್ಷ ಇದೆ; ಈ ಮೂರು ವರ್ಷದಲ್ಲಿ ಇನ್ನೂ ಐದಾರು ಲಕ್ಷ ಜಾಸ್ತಿಯಾಗಿರಬೇಕು. ಆದ್ದರಿಂದ ಕಾಂಪ್ರಹೆನ್ಸೀವ್ ಡೆವಲಪ್‌ಮೆಂಟ್ ಪ್ಲಾನ್‌ನ್ನು ಮೊದಲು ಏನು ಮಾಡಿದ್ದೆವೋ ಅದರ ಬಗ್ಗೆ ತಾವು ಗಮನ ಹರಿಸಬೇಕು. ಆಗಿನ ಗ್ರೀನ್ ಬೆಲ್ಟ್ ಏರಿಯಾ ನಿಗದಿ ಮಾಡಿ ೩೮ ಲಕ್ಷ ಜನಸಂಖ್ಯೆ ಎಂದು ಅಂದಾಜಿಟ್ಟುಕೊಂಡು ಯೋಜನೆ ಮಾಡಿದ್ದೆವು ಈಗ ಎಲ್ಲಾ ಸೊಸೈಟಿಗಳ ಜೊತೆ ವ್ಯವಹರಿಸಿ ೪೫ ಸೊಸೈಟಿಗಳ ಜೊತೆ ಕಾಂಪ್ರಮೈಸ್ ಮಾಡಿಕೊಂಡು ಗ್ರೀನ್ ಬೆಲ್ಟ್ ಏರಿಯಾ ಎಕ್ಸ್‌ಟೆಂಡ್ ಆಗಿದೆ. ಇದರ ಪ್ರಕಾರ ತೆಗೆದುಕೊಂಡರೆ ಬೆಂಗಳೂರಿನ ಜನ ಸಂಖ್ಯೆ ಸುಮಾರು ೭೦ ಲಕ್ಷ ಆಗುತ್ತದೆ. ೧೯೮೩ರಲ್ಲಿ ಈ ಬಗ್ಗೆ ಎಚ್.ಯು.ಡಿ, ಇಲಾಖೆಯ ಸೆಕ್ರೆಟರಿಯಾವರು, ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಸೆಕ್ರೆಟರಿಯವರು ಮತ್ತು ಆರ್.ಡಿ.ಸಿ. ಇಲಾಖೆಯ ಸೆಕ್ರೆಟರಿಯವರು ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಕಾವೇರಿ ಎರಡನೆಯ ಹಂತದ ಯೋಜನೆ ಮುಗಿದರೂ ಕೂಡ ನೀರು ಕೊಡುವುದಕ್ಕೆ ಸಾಕಾಗುತ್ತಿಲ್ಲ. ಇವತ್ತು ಎಲ್ಲಾ ಕಡೆ ಅನ್ ಆಥರೈಸ್ಡ್ ಕಟ್ಟಡಗಳು ಬಂದಿವೆ. ಅದು ಬಿಟ್ಟು ಜನ ಗಣತಿ ಆಧಾರದ ಮೇಲೆ ತೆಗೆದುಕೊಂಡರೂ ಕೂಡ ೬೭ ಲೀಟರ್ ನೀರೂ ಕೂಡ ಬೆಂಗಳೂರಿನ ಜನತೆಗೆ ಮುಂದೆ ಸಿಗುವುದಿಲ್ಲ. ಕಾವೇರಿ ಮೂರನೇ ಹಂತದ ಯೋಜನೆ ಮುಗಿದ ಮೇಲೂ ೩೮ ಲಕ್ಷ ಜನರಿಗೆ ನೀರು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ೨೦೦೦ ಎ.ಡಿ.ಗೆ ಹೋದರೆ ಯಾವ ರೀತಿ ನೀರಿನ ವ್ಯವಸ್ಥೆ ಮಾಡಬೇಕು ಎಂಬುದನ್ನು ತಿಳಿದುಕೊಳ್ಳಬೇಕು. ಅದಕ್ಕಾಗಿ ಮೆಟ್ರೋಪೊಲಿಟನ್ ಡೆವಲಪ್ಮೆಂಟ್ ಅಥಾರಿಟಿ ಮಾಡಬೇಕು. ಬೆಂಗಳೂರು ಜಲ ಮಂಡಳಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಹೌಸಿಂಗ್ ಬೋರ್ಡ್, ಕಾರ್ಪೊರೇಷನ್ ಇವುಗಳಲ್ಲಿ ಕೋ-ಆರ್ಡಿನೇಷನ್ ಮಾಡುವುದಕ್ಕೆ ಮೆಟ್ರೊಪೊಲಿಟನ್ ಡೆವಲಪ್ಮೆಂಟ್ ಅಥಾರಿಟಿ ಪ್ರಯತ್ನ ಮಾಡಬೇಕು. ಇದು ಈಗಾಗಲೇ ಮದ್ರಾಸಿನಲ್ಲಿದೆ ಡೆಲ್ಲಿಯಲ್ಲಿದೆ, ಕಲ್ಕತ್ತದಲ್ಲಿದೆ ಬಾಂಬೆಯಲ್ಲಿದೆ. ಆದ್ದರಿಂದ ಬೆಂಗಳೂರಿಗೂ ಬೆಂಗಳೂರು ಮೆಟ್ರೊಪೊಲಿಟನ್ ಡೆವಲಪ್ ಮೆಂಟ್ ಅಥಾರಿಟಿ ಮಾಡಬೇಕು. ಎಲ್ಲಾ ಪಟ್ಟಣದ ಪ್ರದೇಶದಲ್ಲಿ ಜನಸಂಖ್ಯೆ ಯಾವ ರೀತಿ ಬೆಳೆಯುತ್ತಿದೆ ಎಂದರೆ ಕಲ್ಕತ್ತದಲ್ಲಿ ೧೯೬೧ ರಿಂದ ೧೯೭೧ ರವರೆಗೆ ಹತ್ತು ವರ್ಷಗಳಲ್ಲಿ ೨೨.೬ ಪರ್ಸೆಂಟ್ ಇದ್ದರೆ ೧೯೭೧ ರಿಂದ ೮೧ ರವರೆಗೆ ೩೦.೪ ಆಗಿದೆ. ಬಾಂಬೆಯಲ್ಲಿ ೧೯೬೧ ರಿಂದ ೧೯೭೧ರಲ್ಲಿ ೪೩.೮ ಜನಸಂಖ್ಯೆ ಇದ್ದರೆ ೧೯೭೧ರಿಂದ ೧೯೮೧ರಲ್ಲಿ ೩೭.೮ ಆಗಿದೆ. ಡೆಲ್ಲಿಯಲ್ಲಿ೧೯೬೧ರಿಂದ ೧೯೭೧ರವರೆಗೆ ೫೪.೬ ಪರ್ಸೆಂಟ್ ಆಗಿದ್ದರೆ ೧೯೭೧ ರಿಂದ ೧೯೮೧ ರವರೆಗೆ ಹತ್ತು ವರ್ಷಗಳಲ್ಲಿ ೫೬.೭ ಪರ್ಸೆಂಟ್ ಆಗಿದೆ. ಮದ್ರಾಸಿನಲ್ಲಿ ೧೯೬೧ ರಿಂದ ೭೧ ರವರೆಗೆ ೬೩ ಪರ್ಸೆಂಟ್ ಜನಸಂಖ್ಯೆ ಹೆಚ್ಚಾಗಿದ್ದರೆ ೧೯೭೧ ರಿಂದ ೧೯೮೧ ರವರೆಗೆ ೩೪.೯ ಪರ್ಸೆಂಟ್ ಆಗಿದೆ. ಬೆಂಗಳೂರಿನಲ್ಲಿ ೧೯೬೧ರಿಂದ ೧೯೭೧ರವರೆಗೆ ೩೭.೮ ಇದ್ದರೆ ೧೯೭೧ರಿಂದ ೧೯೮೧ರ ವರೆಗೆ ೭೬.೨ ಪರ್ಸೆಂಟ್ ಹೆಚ್ಚಾಗಿದೆ. ಇಂಡಿಯಾದಲ್ಲೇ ಬಹಳ ವೇಗದಲ್ಲಿ ಬೆಳೆಯುತಕ್ಕ ನಗರ ಎಂದರೆ ಬೆಂಗಳೂರು, ಈ ರೀತಿ ಬೆಳೆಯುತ್ತಿರುವ ನಗರಕ್ಕೆ ಮೆಟ್ರೋಪೊಲಿಟನ್ ಡೆವಲಪ್ಮೆಂಟ್ ಅಥಾರಿಟಿ ಬೇಕು, ಇಲ್ಲಿ ಕೋ-ಆರ್ಡಿನೇಟ್ ಮಾಡತಕ್ಕ ಸಂಸ್ಥೆಯ ಅಗತ್ಯ ಇದೆ. ಇಲ್ಲದಿದ್ದರೆ ಒಂದು ಗ್ಯಾಲನ್ ನೀರೂ ಕೂಡ ಸಿಗದಂಥ ಅವಸ್ಥೆ ಬರುತ್ತದೆ. ೨೪೦ ಕೋಟಿ ರೂಪಾಯಿಗಳ ಕಾವೇರಿ ಮೂರನೆಯ ಹಂತದ ಯೋಜನೆಗೆ ತಾವು ಫೌಂಡೇಷನ್ ಹಾಕಿದ್ದೀರಿ. ತಮಗೆ ಅವಕಾಶ ಸಿಕ್ಕಿದೆ. ತಾವು ಮಾಡಿ, ಕಾವೇರಿ ಎರಡನೇ ಹಂತದ ಯೋಜನೆ ಮುಗಿಸಿದಾಗ ನಾವು ಶಾಸಕರ ಜೊತೆ ತಿಪ್ಪಗೊಂಡನಹಳ್ಳಿ ಮತ್ತು ತೊರೆಕಾಡನಹಳ್ಳಿಗೆ ಹೋಗಿದ್ದೆವು. ಎರಡನೆಯ ಹಂತದ ಯೋಜನೆ ಮುಗಿದು ಬೆಂಗಳೂರು ನಗರಕ್ಕೆ ಮೂರನೇ ಹಂತದ ಯೋಜನೆ ಬೇಕು ಎಂದು ೨೪೦ ಕೋಟಿ ರೂಪಾಯಿಗಳ ಯೋಜನೆ ಮಾಡಿ ೧ ಕೋಟಿ ಟೋಕನ್ ಗ್ರ್ಯಾಂಟ್ ಕೊಟ್ಟಿದ್ದೆವು.

ಇವೊತ್ತು ಕೂಡ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದರ ಬಗ್ಗೆ ಕ್ಲೀಯರ್ ಆಗಿ ಇಲ್ಲ. ಬರೀ ಆಶ್ವಾಸನೆ ಕೊಟ್ಟಿದ್ದಾರೆ. ಬೇರೆ ಬೇರೆ ಕಾರ್ಪೊರೇಷನ್‌ನಿಂದ ಇದಕ್ಕೆ ಖರ್ಚು ಮಾಡುವುದಕ್ಕೆ ೩೦ ಕೋಟಿ ರೂಪಾಯಿಗಳ ಹಣ ತೆಗೆದುಕೊಳ್ಳಬೇಕೆನ್ನುವುದನ್ನು ಮಾಡಿದ್ದಾರೆ. ಇದಕ್ಕೆ ಫೌಂಡೇಷನ್ ಸ್ಟೋನ್ ಕೂಡ ಹಾಕಿದ್ದಾರೆ. ಬೆಂಗಳೂರನ್ನು ಗ್ರೀನ್ ಬೆಲ್ಟ್ ಏರಿಯಾ ಎಂದು ಮಾಡಿಕೊಂಡು ಸುಂದರ ನಗರವನ್ನಾಗಿ ಮಾಡಬೇಕೆಂದು ಇದ್ದಾರೆ. ಈ ಬೆಂಗಳೂರಿನ ಜನಸಂಖ್ಯೆ ೨೦೦೦ ಎ.ಡಿ.ಗೆ ೭೦ ಲಕ್ಷ ಜನಸಂಖ್ಯೆಯಾಗುತ್ತದೆ. ಅದು ಬರಬರುತ್ತಾ ೮ ಮಿಲಿಯನ್ ತನಕವೂ ಸಹ ಹೋಗಬಹುದು ಎನ್ನುವ ಸಂಶಯವನ್ನು ಎಕ್ಸ್‌ಪರ್ಟ್‌ಗಳು ವ್ಯಕ್ತಪಡಿಸಿದ್ದಾರೆ. ಬೆಂಗಳೂರಿನಲ್ಲಿ ನೀರು ತರಬೇಕಾದರೆ ೧೫೦೦ ಅಡಿಯಷ್ಟು ವಾಟರ್‌ನ್ನು ಪಂಪ್ ಮಾಡಬೇಕಾಗುತ್ತದೆ. ಬಾಂಬೆಯಲ್ಲಿ

ಈ ತರಹ ಇಲ್ಲ. ಅಲ್ಲಿ ಗ್ರಾವಿಟಿ ಇದೆ. ಅವರು ೫೭೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನೀರಿನ ವ್ಯವಸ್ಥೆ ಮಾಡಿದ್ದಾರೆ. ಅಲ್ಲಿ ನೀರಿನ ಕೊರತೆಯೂ ಇಲ್ಲ. ವಿದ್ಯುತ್ ಕೊರತೆಯೂ ಇಲ್ಲ. ಬೆಂಗಳೂರಿನಲ್ಲಿ ನೀರು ತರಬೇಕಾದರೆ ನಾನು ಮೊದಲೇ ಹೇಳಿದ ಹಾಗೆ ಇದು ರಾಕ್ ಏರಿಯಾ ೧೫೦೦ ಅಡಿಯಷ್ಟು ವಾಟರ್ ಪಂಪ್ ಮಾಡಿ ಮಾಡಬೇಕಾಗುತ್ತದೆ. ಬೆಂಗಳೂರಿನ ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಾ ಇದೆ. ಈ ಬೆಂಗಳೂರು ನಗರವನ್ನು ಸುಂದರ ನಗರವನ್ನಾಗಿ ಮಾಡಬೇಕೆಂದು ತಾವು ಯೋಜನೆ ಹಾಕಿಕೊಂಡಿದ್ದೀರಿ. ಇಂದು ಬೆಂಗಳೂರಿನ ರಾಜಾಜಿನಗರ, ಮಲ್ಲೇಶ್ವರಂ ಬಡಾವಣೆಯಲ್ಲಿ ರಾತ್ರಿ ೧-೧½ ಗಂಟೆಗೆ ಹೋಗಿ ನೀರನ್ನು ತರತಕ್ಕಂಥ ಪರಿಸ್ಥಿತಿ ಇದೆ. ಈ ನೀರಿನ ಬವಣೆ ಇನ್ನೂ ತಪ್ಪಿಲ್ಲ. ಮೇಲ್ಮನೆಯಲ್ಲಿ ತಾವು ಬೆಂಗಳೂರಿಗೆ ೨೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಹೇಮಾವತಿಯಿಂದ ನೀರನ್ನು ತರುತ್ತೇವೆಂದು ಹೇಳಿದ್ದೀರಿ. ಇನ್ನೊಂದು ಕಡೆ ಮಾನ್ಯ ದೇವೇಗೌಡರು ಅಲ್ಲಿ ಟನಲ್ ಇದೆ, ಅಲ್ಲಿಂದ ತರುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಮಾವತಿಯಿಂದ ಬೆಂಗಳೂರಿಗೆ ನೀರನ್ನು ತರುತ್ತೇವೆಂದು ಅಲ್ಲಿ ಹೇಳಿಲ್ಲ. ತಮಗೆ ಅಲ್ಲಿ ಹೇಳಿದ ನಿಜವಾದ ಸಂಗತಿ ಹೇಳುವುದಕ್ಕೆ ಬಯಸುತ್ತೇನೆ. ಮೇಲ್ಮನೆಯಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಒಂದು ಪ್ರಶ್ನೆಯನ್ನು ಕೇಳಿದ್ದರು. ಅದಕ್ಕೆ ನಾನು ಈ ರೀತಿ ಉತ್ತರ ಕೊಟ್ಟಿದ್ದೇನೆ. ಏನೆಂದರೆ ವಾಟರ್ ಡೆವಲಪ್‌ಮೆಂಟ್ ಆರ್ಗನೈಸೇಷನ್‌ನವರು ಈ ರೀತಿಯಾಗಿ ನಮಗೆ ಒಂದು ಪತ್ರವನ್ನು ಬರೆದಿದ್ದರು. ಆದರೆ ಅದರ ಬಗ್ಗೆ ನಾವು ಚಿಂತನೆಯನ್ನೇ ಮಾಡಿಲ್ಲ ಎಂದು ಉತ್ತರ ಹೇಳಿದ್ದೇನೆ ಈಗಲೂ ಹೇಳುತ್ತೇನೆ. ತಾವು ವಿಷಯ ತಿಳಿದುಕೊಂಡು ಮುಂದಕ್ಕೆ ಹೋಗಿ. Let him know the correct statement of facts. You can make any comments you want within the permissible limit and that is a different matter.

SRI DHARMA SINGH.—During my regime, I have not completed my Gulbarga Project and I hahe taken so much of interest for the speedy inplementation of Cauvery II Stage and in 1982. we have finished that project. Now you have eaid that Rs. 240 Crores will be spent for the Cauvery III Stage. You have extended the green belt and the population is growing. How are you going to solve problem ? ನಾನು ಮೊದಲೇ ಹೇಳಿದ ಹಾಗೆ ಬೆಂಗಳೂರಿನ ಜನಸಂಖ್ಯೆ ೨೦೦೦ ಎ.ಡಿ.ಗೆ ೭೦ ಲಕ್ಷಕ್ಕೆ ಬೆಳೆಯುತ್ತದೆ. ಅದಕ್ಕೋಸ್ಕರವಾಗಿ ಈಗ್ಗೆ ೩-೪ ದಿವಸಗಳ ಹಿಂದೆ ಮಾನ್ಯ ಮುಖ್ಯಮಂತ್ರಿಯವರು ಕೋರಮಂಗಲದ ಒಂದು ಕಾಂಪ್ಲೆಕ್ಸ್‌ನ ಉದ್ಘಾಟನಾ ಸಮಾರಂಭದಲ್ಲಿ ನಗರದಲ್ಲಿ ಬಹು ಅಂತಸ್ತಿನ ಕಟ್ಟಡಕ್ಕೆ ಪ್ರೋತ್ಸಾಹ ಕೊಡಬೇಕು ಎಂದು ಹೇಳಿದ್ದಾರೆ. ಇನ್ನು ಮುಂದೆ ಬೆಂಗಳೂರು ನಗರ ಬಹಳ ಬೆಳೆಯುವುದರಿಂದ ಸ್ಲಂ ಬೋರ್ಡ್, ಹೌಸಿಂಗ್ ಬೋರ್ಡ್, ವಾಟರ್ ಬೋರ್ಡ್ ಇವೆಲ್ಲಾ ಸೇರಿಕೊಂಡು ಕೋ-ಆರ್ಡಿನೇಟ್ ಆಗಿ ಕೆಲಸ ಮಾಡುವುದಕ್ಕೆ ಒಂದು ಸೂಪರ್‌ಬಾಡಿ ಎಂದರೆ ಬೆಂಗಳೂರು ಮೆಟ್ರೋ ಪಾಲಿಟನ್ ಅಥಾರಿಟಿಯನ್ನು ಮಾಡಬೇಕು ಎಂದು ಹೇಳುತ್ತೇನೆ. ಹಿಂದೆ ಶ್ರೀಮನಾಥ್ ಚಂದ್ರಶೇಖರಯ್ಯನವರು ಸಂಬಂಧಪಟ್ಟ ಮಂತ್ರಿಯಾಗಿದ್ದಾಗ ಅವರು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಈ ವಿಷಯವನ್ನು ರೆಫರ್ ಮಾಡಿದ್ದರು.

ಶ್ರೀ ಎ. ಲಕ್ಷ್ಮೀಸಾಗರ್.—ಅದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಆಗಲಿಲ್ಲ.

ಶ್ರೀ ಧರ್ಮಸಿಂಗ್.—ಮುಂದೆ ಏನು ಮಾಡುತ್ತೀರಿ ಇದರ ಬಗ್ಗೆ ಅದನ್ನಾದರೂ ಹೇಳಿ ?

ಶ್ರೀ ಎಂ.ಎಸ್. ಕೃಷ್ಣನ್.—ಒಮ್ಮೆ ಇದು ಇಲ್ಲಿಗೆ ಚರ್ಚೆಗೆ ಬಂದಿತ್ತು. ಇವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಬೇಕೆಂದು ಕೇಳಿಕೊಳ್ಳಲಾಗಿತ್ತು. ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಆಗಿದೆಯೋ ಇಲ್ಲವೇ ನೋಡಿ. ಈಗ ಇದರ ಬಗ್ಗೆ ಏನು ಮಾಡುತ್ತೀರಿ ಎನ್ನುವುದನ್ನಾದರೂ ಹೇಳಿ.

ಶ್ರೀ ಧರ್ಮಸಿಂಗ್.—ಇನ್ನೊಂದು ವಿಷಯ ಏನೆಂದರೆ ಹಿಂದೆ ನಾನು ಇದ್ದಾಗ ಇಬ್ರಾಹಿಂ ಸ್ಟ್ರೀಟ್‌ನಲ್ಲಿ ಚರಂಡಿ ನೀರು ವಾಟರ್‌ಪೈಪ್‌ಗೆ ಬಂದು ಅಲ್ಲಿನ ಜನರಿಗೆ ಜಾಂಡೀಸ್ ಶುರುವಾಗಿತ್ತು

ಆಗ ಅವರು ಹೈಕೋರ್ಟಿಗೆ ಹೋಗಿದ್ದರು. ಈ ವಿಚಾರ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲೂ ಬಂತು. ನಾನು ಆವಾಗ ಎಲ್ಲಾ ಶಾಸಕರನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡೆ. ಅಲ್ಲಿ ಓಲ್ಡ್ ಪೈಪ್ಸ್‌ನ್ನು ರೀಪ್ಲೇಸ್ ಮಾಡುವುದಕ್ಕೆ ೬೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನೂ ಅಷ್ಟು ಪೈಪ್ಸ್‌ಗಳನ್ನು ರೀಪ್ಲೇಸ್ ಮಾಡಬೇಕಾಗಿದೆ, ಕೇಳಿದರೆ ಹಣ ಇಲ್ಲ ಎಂದು ಹೇಳುತ್ತೀರಿ ಇವೊತ್ತಿನ ದಿವಸ ಬೆಂಗಳೂರಿಗೆ ಅತಿ ಮುಖ್ಯವಾಗಿ ಬೇಕಾಗಿರತಕ್ಕಂಥ ವಾಟರ್ ಸಪ್ಲೈ ಬಗ್ಗೆ ತಾವು ಹೆಚ್ಚು ಗಮನಿಸಬೇಕಾಗಿದೆ. ಈ ವಿಚಾರ ಕಾವೇರಿ ಥರ್ಡ್ ಸ್ಟೇಜ್ ಏನು ಮಾಡುತ್ತೀರೋ ಅದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ನಾನು ಮೊದಲೇ ಹೇಳಿದ ಹಾಗೆ ೨೦೦೦ ಎ.ಡಿ.ಗೆ ಬೆಂಗಳೂರು ಜನಸಂಖ್ಯೆ ೭೦ ಲಕ್ಷ ಆಗುತ್ತದೆ. ಈಗಿನಿಂದ ಈ ನೀರಿನ ಸಮಸ್ಯೆಯ ಬಗ್ಗೆ ಹೆಚ್ಚು ಗಮನಿಸದೇ ಹೋದರೆ ಮುಂದೆ ಏನು ಅನಾಹುತವಾಗುತ್ತದೆ ಎನ್ನುವುದನ್ನು ಏನೂ ಹೇಳುವುದಕ್ಕಾಗುವುದಿಲ್ಲ ಮುಂದೆ ಆಗತಕ್ಕಂಥ ದೊಡ್ಡ ಅನಾಹುತವನ್ನು ತಪ್ಪಿಸಿಕೊಳ್ಳುವುದಕ್ಕೆ ನೀವು ಏನು ವ್ಯವಸ್ಥೆ ಮಾಡುತ್ತೀರಿ ಹೇಳಿ ? ಈ ಬಗ್ಗೆ ದೊಡ್ಡ ಜವಾಬ್ದಾರಿ ನಿಮ್ಮ ಮೇಲೆ ಇದೆ,

ಉಪಾಧ್ಯಕ್ಷರು.—ತಮಗೆ ಭಾಷಣ ಮಾಡಲು ಕೊಟ್ಟಂಥ ಅವಧಿ ೭೫ ನಿಮಿಷ. ಈಗ ೧೦೫ ನಿಮಿಷವಾಗಿದೆ, ತಾವು ಬೇಗನೆ ಮುಗಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರು ಮಾತನಾಡುವಾಗ ಈ ಒಂದೂವರೆ ಗಂಟೆಯಲ್ಲಿ 'ಇವೊತ್ತು' ಎನ್ನುವ ಪದವನ್ನು ಎಷ್ಟು ಸಲ ಹೇಳಿದ್ದಾರೆ ಎನ್ನುವುದು ಗೊತ್ತಿದೆಯೋ ?

ಶ್ರೀ ಕರಿಗೌಡ.—ಅವರು ಇವೊತ್ತು ಇವೊತ್ತು ಎಂದು ಎಷ್ಟು ಸಾರಿ ಹೇಳಿದ್ದಾರೆ ಎನ್ನುವುದನ್ನು ನಾನು ಬರೆದು ಇಟ್ಟುಕೊಂಡಿದ್ದೇನೆ. ೪೪೬ ಸಾರಿ ಇವೊತ್ತು ಇವೊತ್ತು ಎನ್ನುವುದನ್ನು ಉಪಯೋಗಿಸಿದ್ದಾರೆ.

ಉಪಾಧ್ಯಕ್ಷರು.—ಅವರು ಇವೊತ್ತು ಇವೊತ್ತು ಎಂದು ಹೇಳುವುದಕ್ಕೆ ನನ್ನದೇನೂ ಅಡ್ಡಿ ಇಲ್ಲ.

(ಸಭೆಯಲ್ಲಿ ನಗು)

ಶ್ರೀ ಧರ್ಮಸಿಂಗ್.—ದಯವಿಟ್ಟು ಕ್ಷಮಿಸಬೇಕು. ನಾನು ಉಸ್ಮಾನಿಯಾ ಯೂನಿವರ್ಸಿಟಿಯ ಗ್ರಾಜುಯೇಟ್. ನಾನು ಇಷ್ಟರಮಟ್ಟಿಗೆ ಕನ್ನಡ ಮಾತನಾಡಿದ್ದಕ್ಕೆ ತಾವೆತಾ ಹೆಮ್ಮೆ ಪಡಬೇಕು. ನಾನು ಈವೊತ್ತೇ ಎಲ್ಲಾ ಆಗಬೇಕು ನಾಳೆಗಲ್ಲ ಅನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆ ವಿನಾ ಇನ್ನೇನೂ ಅಲ್ಲ. ಇನ್ನು ಒಂದು ಒಂದು ವಿಷಯ ಏನೆಂದರೆ ಟೌನ್ ಮುನಿಸಿಪಾಲಿಟಿ ಮತ್ತು ಕಾರ್ಪೋರೇಷನ್‌ನಲ್ಲಿ ಎಸ್.ಸಿ. ಮತ್ತು ಎಸ್.ಟಿ.ಯವರಿಗೆ ಅವರ ಕಲ್ಯಾಣಕ್ಕಾಗಿ ಟೋಟಲ್ ಬಡ್ಜೆಟ್ಟಿನಲ್ಲಿ ೧೮ ಪರ್ಸೆಂಟ್ ಖರ್ಚು ಮಾಡಬೇಕು ಎಂದು ಏನೂ ಇದೆ ಅದರಲ್ಲಿ ತಾವು ಎಷ್ಟು ಖರ್ಚು ಮಾಡಿದ್ದೀರಿ ಅದರ ಅಂಕಿ ಅಂಶಗಳನ್ನು ತಾವು ಈವೊತ್ತು ತರಿಸಿಕೊಂಡಬೇಕು. ತಾವು ಈವೊತ್ತು ಇವರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಿ ? ನಾವು ಇದ್ದಾಗ ಇವರ ಬಗ್ಗೆ ಒಂದು ಸೋಷಿಯಲ್ ಜಸ್ಟೀಸ್ ಕಮಿಟಿ ಎಂದು ಮಾಡಿದ್ದೆವು. ಅವರಿಗೆ ಸಾಮಾಜಿಕವಾಗಿ ನ್ಯಾಯ ಸಿಗಬೇಕು ಅಂತ ಮಾಡಿದ್ದೆವು. ಈ ಟೋಟಲ್ ಬಡ್ಜೆಟ್ಟಿನಲ್ಲಿ ಅಪ್ರೋಚ್ ರೋಡ್ ಆಗಲಿ, ಕಮ್ಯೂನಿಟಿ ಹಾಲ್ ಆಗಲಿ ಇದಕ್ಕೆ ಈ ಹಣವನ್ನು ಖರ್ಚು ಮಾಡತಕ್ಕಂಥಾದ್ದಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

ಅದಕ್ಕೆ ಪ್ರತ್ಯೇಕವಾದಂಥ ಹಣವನ್ನು ಕಲ್ಪಿಸಿಕೊಡಬೇಕಾದದ್ದು ಇದೆ. ಬೆಂಗಳೂರಿನಲ್ಲಿ ಮತ್ತು ಬೇರೆ ಕಡೆಗಳಲ್ಲೂ ಕೂಡ ಇದರ ಬಗ್ಗೆ ಹೆಚ್ಚಿನ ಗಮನಕೊಟ್ಟಿಲ್ಲ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು ಎಂದು ನಾನು ಹೇಳುತ್ತಾ ಇದ್ದೇನೆ. ಬಿ.ಡಿ.ಎ. ಬಗ್ಗೆ ಮಾನ್ಯ ವೀರಪ್ಪಮೊಯಿಲಿಯವರು ಮತ್ತು ಮಾನ್ಯ ಬಸವಲಿಂಗಪ್ಪನವರು ಮಾತನಾಡಬಹುದು. ಬಿಡಿಎ. ದು ೧೯೭೬ ರಿಂದ ಆಡಿಟ್ ಆಗಿಲ್ಲ. ಸೆಲ್ಫ್ ಫೈನಾನ್ಸ್ ಸ್ಕೀಮಿನಲ್ಲೂ ಕೂಡ ಅವ್ಯವಹಾರವಾಗಿದೆ ನಾನು ಇಷ್ಟು ಮಾತ್ರ ಹೇಳಬಲ್ಲೆ. ಸುಮ್ಮನೆ ಸೈಟ್ಸ್ ಮಾಡುತ್ತೇವೆ. ಎಲ್ಲಾ ಕಡೆ ಸೈಟುಗಳನ್ನು ಹಂಚುತ್ತೇವೆ ಎಂದು ಹೇಳುತ್ತಾರೆ ಇದರ ಜೊತೆಗೆ ಅವರಿಗೆ ಸಿವಿಕ್ ಅಮೆನಿಟೀಸ್ ಕೊಡುವುದರ ಬಗ್ಗೆಯೂ ತಾವು ಯೋಚಿಸಿ ಮಾಡಬೇಕು ವಾಟರ್ ಸಪ್ಲೈ ಕೂಡ ಮಾಡಬೇಕು. ಬಿಡಿಎ. ಆವರಣದಲ್ಲಿರತಕ್ಕ ಸ್ಲಮ್ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಇವೆಲ್ಲಾ ವಿಚಾರಗಳೂ ಕೂಡ ಬಿಡಿಎ. ಮೇಲೆ ಇದೆ. ಬಿಡಿಎ. ಸ್ಥಾಪನೆಯಾದಂದಿನಿಂದ ಇವೊತ್ತಿನವರೆಗೆ ಏನು ಸಮಸ್ಯೆಗಳು ...ಆಗಿವೆ, ಆ ಸಮಸ್ಯೆಗಳನ್ನು ತಿಳಿದು

ಅವನ್ನು ಪರಿಹಾರ ಮಾಡುವುದು. ವ್ಯವಸ್ಥಿತವಾಗಿ ಬಡಾವಣೆಗಳನ್ನು ಮಾಡುವುದು, ಬೆಂಗಳೂರು ನಗರದ ಸೌಂದರ್ಯವನ್ನು ಕಾಪಾಡಿಕೊಂಡು ಹೋಗುವುದು ಇವೆಲ್ಲಾ ಜವಾಬ್ದಾರಿ ಬಿಡಿಎ ಅವರ ಮೇಲಿದೆ. ೧೯೦೧ರಲ್ಲಿ ೨೮ ಕಿಲೋ ಮೀಟರ್ ರಸ್ತೆ ಇದ್ದರೆ ಈಪೊತ್ತು ೨೮೭೨ ಕಿಲೋಮೀಟರ್ ಇದೆ ಯೆಂದು ಬಿಡಿಎ. ಛೇರ್ಮನ್ ಹೇಳಿದ್ದಾರೆ. ಇಷ್ಟು ದೊಡ್ಡದಾಗಿ ಬೆಳೆದಿರತಕ್ಕ ಬೆಂಗಳೂರು ನಗರಕ್ಕೆ ಯಾವ ರೀತಿ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು ಎನ್ನುವುದನ್ನು ಅವರು ತಿಳಿದುಕೊಳ್ಳಬೇಕಾಗುತ್ತದೆ. ಬಿಡಿಎ. ನಲ್ಲಿ ಸೆಲ್ಫ್ ಫೈನಾನ್ಸಿಂಗ್ ಸ್ಕೀಂನಲ್ಲಿ ಕಾಂಟ್ರಾಕ್ಟ್ ಕೊಡುವುದರಲ್ಲಿ ಅವ್ಯವಹಾರವಾಗಿದೆ. ಇದರ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್ ಇದೆ, ಮಾನ್ಯ ವೀರಪ್ಪ ಮೊಯಿಲಿಯವರು ಇದರ ಬಗ್ಗೆ ಹೇಳುತ್ತಾರೆ. ಇದು ಮೆಟ್ರೋಪಾಲಿಟನ್ ಡೆವಲಪ್‌ಮೆಂಟ್ ಅಥಾರಿಟಿ ಇವತ್ತು ಇಗಲೇಬೇಕು. ವಾಟರ್ ಸಪ್ಲೈ ಆಗಲಿ, ಯಾವುದೇ ಆಗಲೀ ಕೋಆರ್ಡಿನೇಷನ್ ಇದ್ದರೆ ವ್ಯವಸ್ಥಿತವಾಗಿ ಕೆಲಸಕಾರ್ಯಗಳು ಆಗುತ್ತವೆ ಎಂದು ನಾನು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಾ ಇದ್ದೇನೆ. ಬೆಂಗಳೂರು ಕಾರ್ಪೊರೇಷನ್‌ನಲ್ಲಿ ಎಲೆಕ್ಟೆಡ್ ಬಾಡಿ ಇದೆ. ಅಲ್ಲಿರತಕ್ಕ ಕಾರ್ಪೊರೇಟರ್ಸ್ ಕೂಡ ಅದರ ಆಗುಹೋಗುಗಳ ಬಗ್ಗೆ ವಿಚಾರ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಆಕ್ಟ್ರಾಯ್ ತೆಗೆದುಹಾಕಿದ ಮೇಲೆ ೨೦–೨೩ ಕೋಟಿ ಆಕ್ಟ್ರಾಯ್‌ಗೆ ಕಾಂಪನ್ಸೇಷನ್ ಕೊಡುತ್ತಾ ಇದ್ದಾರೆ. ಬೆಂಗಳೂರು ನಗರ ಕಾರ್ಪೊರೇಷನ್ನಿಗೆ ಮೊದಲು ೪೦ ಕೋಟಿ ವರಮಾನ ಬರುತ್ತಿತ್ತು, ಈಗ ಅದು ಹೋಗಿಬಿಟ್ಟಿದೆ. ಅದಕ್ಕೋಸ್ಕರ ಎಲ್ಲಾ ಸೌಕರ್ಯಗಳನ್ನು ಕೊಡಲಿಕ್ಕೆ ಆಗುತ್ತಾ ಇಲ್ಲ. ೧೨೦೦ ಕಿಲೋಮೀಟರ್ ರಸ್ತೆಗಳ ಕೆಲಸ ಇದೆ. ಎಲ್‌ಐಸಿ. ಯಿಂದ ದುಡ್ಡನ್ನು ತೆಗೆದುಕೊಂಡು ಈ ರಸ್ತೆಗಳನ್ನು ವ್ಯವಸ್ಥೆ ಮಾಡಬಹುದು. ಎಲ್‌ಐಸಿ. ಯಿಂದ ಲೋನ್ ತೆಗೆದುಕೊಂಡು ೧೨೦೦ ಕಿಲೋಮೀಟರ್ ರಸ್ತೆಗಳನ್ನು ವ್ಯವಸ್ಥೆಗೊಳಿಸಲು ೧೯೮೨–೮೩ರಲ್ಲಿ ನಾವು ಪ್ರಾಜೆಕ್ಟ್ ಹಾಕಿದೆವು. ಅದರ ಬಗ್ಗೆ ಮಾನ್ಯ ಮಂತ್ರಿಗಳು ಕಾರ್ಪೊರೇಷನ್ ಮೇಯರ್, ಕಾರ್ಪೊರೇಟರ್ಸ್ ಜೊತೆಯಲ್ಲಿ ಸಮಾಲೋಚನೆ ಮಾಡಿ, ಬೆಂಗಳೂರಿನ ಬ್ಯೂಟಿಫಿಕೇಷನ್ ಮುಂತಾದ ವಿಷಯಗಳ ಬಗ್ಗೆ ಏನು ಆತಂಕ ವ್ಯಕ್ತಪಡಿಸುತ್ತಾ ಇದ್ದಾರೆ ಅದರ ಬಗ್ಗೆ ಸಮಾಧಾನಕರವಾಗಿ ತಾವು ಸೂಕ್ತ ಪರಿಹಾರ ಕಂಡುಹಿಡಿಯಬೇಕು ಎಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ. ಹೈರೈಸ್ ಬಿಲ್ಡಿಂಗ್ಸ್ ಬಗ್ಗೆ ಹೇಳಬೇಕಾಗಿದೆ. ಮೊದಲು ೮ ಅಂತಸ್ತಿನ ಕಟ್ಟಡ ಕಟ್ಟತಕ್ಕಂಥಾದ್ದನ್ನು ಅನುಸರಿಸಿಕೊಂಡು ಹೋಗುತ್ತಿತ್ತು. ನವೆಂಬರ್ ೧೯೮೧ರಲ್ಲಿ ನಾವು ಅದಕ್ಕೆ ತಡೆ ಮಾಡಿದೆವು. ಹೈರೈಸ್ ಬಿಲ್ಡಿಂಗ್ ಪರಿಸ್ಥಿತಿ ಏನಾಗಿದೆಯೆಂದರೆ, ಗ್ರೌಂಡ್ ಲೆವೆಲ್‌ನಲ್ಲೇ ನೀರು ಸಿಗುತ್ತಾ ಇರಲಿಲ್ಲ. ಇನ್ನು ಮೇಲಿನ ಅಂತಸ್ತುಗಳಲ್ಲಿ ನೀರು ಎಲ್ಲಿ ಸಿಗುತ್ತದೆ? ಬೆಂಗಳೂರು ನಗರ ಅತಿ ವೇಗದಿಂದ ಬೆಳೆಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಇಲ್ಲಿ ಕಟ್ಟಡಗಳನ್ನು ಕಟ್ಟುವುದಕ್ಕೆ ಯಾವ ತರಹ ಪರವಾನಗಿ ಕೊಡಬೇಕು, ೧೦೦ ಫೀಟ್ ಇದ್ದರೆ ಯಾವರೀತಿ ಪರವಾನಗಿ ಕೊಡಬೇಕು, ೪೦ ಫೀಟ್ ಇದ್ದರೆ ಯಾವರೀತಿ ಪರವಾನಗಿ ಕೊಡಬೇಕು, ಕಾರ್ ಪಾರ್ಕ್ ಆಗಲಿ, ಸೆಟ್ ಬ್ಯಾಕ್ ಆಗಲಿ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಆದೇಶಗಳನ್ನು ಕೊಡಬೇಕಾಗಿದೆ. ಪ್ಯಾಲೆಸ್ ಆರ್ಚರ್ಡ್‌ನಲ್ಲಿ ಒಬ್ಬರು ಸುಪ್ರೀಂಕೋರ್ಟಿಗೆ ಹೋಗಿದ್ದಾರೆ. ರೆಸಿಡೆನ್ಸಿ ಕಟ್ಟಡಗಳನ್ನು ಕಟ್ಟಿಸಿದ್ದಾರೆ. ನಾವೇ ಮೊದಲ ಸಲವಾಗಿ ೧೯೮೧ನೇ ನವೆಂಬರ್‌ನಲ್ಲಿ ಎಲ್ಲಾ ಬಹು ಅಂತಸ್ತುಗಳ ಕಟ್ಟಡಗಳನ್ನು ನಿಲ್ಲಿಸಿಬಿಟ್ಟೆವು. ೧೧೩ ಬಹು ಅಂತಸ್ತುಗಳ ಕಟ್ಟಡಗಳನ್ನು ಕಟ್ಟುವುದನ್ನು ನಿಲ್ಲಿಸಿದೆವು, ಅವರು ಕೋರ್ಟಿಗೆ ಹೋಗಿದ್ದರು. ಗಂಗಾರಾಂ ಕಟ್ಟಡದಲ್ಲಿ ಏನು ಅನಾಹುತವಾಗಿ ಜನರು ಸತ್ತು ಹೋದರು, ಆ ಒಂದು ಗಂಗಾರಾಂ ಕಟ್ಟಡದ ಪರವಾನಗಿ ಯಾವ ಕಾಲದಲ್ಲಿ ಆಯಿತು, ಎಷ್ಟು ಜನರು ಸತ್ತು ಹೋದರು? ಇದಕ್ಕೆ ದೇಸಾಯಿ ಎನ್‌ಕ್ವೈರಿ ಕಮಿಟಿಯನ್ನು ತಾವು ಅಪಾಯಿಂಟ್‌ಮೆಂಟ್ ಮಾಡಿದಿರಿ, ಈ ಕಮಿಟಿಯ ವರದಿ ಬಂದಿದೆಯೋ ಇಲ್ಲವೋ, ಬಂದಿದ್ದರೆ ಅದನ್ನು ಸದನದ ಮುಂದೆ ಇಡಬೇಕು. ಅದರಲ್ಲಿ ಯಾರು ತಪ್ಪು ಮಾಡಿದ್ದಾರೆ ಎಂದು ಹೇಳಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ನಾನು ಕೇಳಿಕೊಳ್ಳುತ್ತಾ ಇದ್ದೇನೆ. ಏಕೆಂದರೆ ಗಂಗಾರಾಂ ಕಟ್ಟಡ ತಮ್ಮ ಕಾಲದಲ್ಲಿ ಆಯಿತು, ನಮ್ಮ ಕಾಲದಲ್ಲಿ ಬೆಂಗಳೂರು ನಗರದಲ್ಲಿ ಎಲ್ಲೂ ಲೀಸ್ ಕೊಡಲಿಕ್ಕೆ ಹೋಗಿಲ್ಲ. ನಮ್ಮ ಕಾಲದಲ್ಲಿ ಹೈರೈಸ್ ಬಿಲ್ಡಿಂಗ್ಸ್ ಕಟ್ಟಲಿಕ್ಕೆ ಅವಕಾಶಕೊಟ್ಟಿಲ್ಲ. ನಮ್ಮ ಕಾಲದಲ್ಲಿ ಅದಕ್ಕೆ ನಾವೆಲ್ಲಾ ಕೇವಿಯಟ್ ಕೂಡ ಹಾಕಿಸಿದ್ದೆವು. ಅದಕ್ಕೆ ಮಾನ್ಯಮುಖ್ಯ ಮಂತ್ರಿಗಳು ಯಾವ ಕಾಲದಲ್ಲಿ ಪರ್ಮಿಷನ್ ಕೊಟ್ಟಿತ್ತು ಎಂದು ಸಂಶಯ ಬರತಕ್ಕಂಥ ರೀತಿಯಲ್ಲಿ ಹೇಳಿದ್ದಾರೆ. ಗಂಗಾರಾಂ ಕಟ್ಟಡದ ಅನಾಹುತವಾಗಿದೆ. ಈ ಬಗ್ಗೆ ಕರ್ನಾಟಕ ರಾಜ್ಯದ ಜನರಲ್ಲಿ ಸಂಶಯ ಬರತಕ್ಕಂಥ ರೀತಿಯಲ್ಲಿ ಮಾತಂಕತೆ ಮಾಡಿದ್ದಾರೆ. ಅದರ ನಿವಾರಣೆ ಸಲುವಾಗಿ ಸದನದ

ಮುಂದೆ ಆ ರಿಪೋರ್ಟ್ ಬರಬೇಕು, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇಷ್ಟು ವಿಷಯಗಳನ್ನು ಹೇಳಿದ್ದೇನೆ. ನಾನು ಇಲ್ಲಿಯವರೆಗೆ ಹೇಳಿದಂಥ ವಿಷಯಗಳನ್ನು, ಸಮಸ್ಯೆಗಳನ್ನು ಮಾನ್ಯ ಮಂತ್ರಿಗಳು ಹಸನ್ಮುಖರಾಗಿ, ತಾಳ್ಮೆಯಿಂದ ನೋಡಬೇಕು. ಮಾನ್ಯ ಲಕ್ಷ್ಮೀಸಾಗರ್‌ರವರು ಯಾವಾಗಲೂ ಹೀಗೆ ನೋಡುತ್ತಾ ಇರುತ್ತಾರೆ. ಅವರು ನೋಡುತ್ತಿರುವುದನ್ನು ನಾವು ನೋಡಿದರೆ ಎಲ್ಲಿ ತಿಂದುಬಿಡುತ್ತಾರೋ ಎನ್ನುವ ಹಾಗೆ ಕಾಣುತ್ತದೆ. ಆದುದರಿಂದ ಅವರು ಹಸನ್ಮುಖರಾಗಿ ತಾಳ್ಮೆಯಿಂದ ಸಮಾಧಾನವಾಗಿ ನೋಡಬೇಕು. ಎಲ್ಲಾ ಜನರಿಗೆ ಸಂಬಂಧಪಟ್ಟಂಥ ಸಮಸ್ಯೆಗಳನ್ನು ಪರಿಹಾರ ಮಾಡುವಂಥ, ಜನರ ದಿನನಿತ್ಯದ ಜೀವನಕ್ಕೆ ಸಂಬಂಧಪಟ್ಟಂಥ ಸಮಸ್ಯೆಗಳನ್ನು ಪರಿಹಾರ ಮಾಡುವಂಥ ಖಾತೆ ಅವರಿಗೆ ದೊರಕಿದೆ. ಅವರು ಚೆನ್ನಾಗಿ ಕೆಲಸ ಮಾಡಿದರೆ ಒಳ್ಳೆಯ ಹೆಸರು ಬರುತ್ತದೆ. ಇದನ್ನು ತಾವು ಮಾಡಿರಿ ಎಂದು ಕೇಳಿಕೊಂಡು, ತಾವು ಸಮಯ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ನಾರಾಯಣರಾವ್ (ಗಾಂಧಿನಗರ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ನಗರಾಭಿವೃದ್ಧಿ ಸಚಿವರು ಮಂಡಿಸಿರುವ ೩೨, ೩೩, ೩೬, ೩೭ನೇ ಬೇಡಿಕೆಗಳನ್ನು ಬೆಂಬಲಿಸುತ್ತಾ ನಾನು ಕೆಲವು ಮಾತುಗಳನ್ನು ಆಡಬಯಸುತ್ತೇನೆ. ನಮ್ಮ ಸರ್ಕಾರದಲ್ಲಿ ನಗರಾಭಿವೃದ್ಧಿ ನಗರಸಭೆ, ಪುರಸಭೆಗಳ ಉಸ್ತುವಾರಿಯನ್ನು ನೋಡುತ್ತಿರುವ ಈ ಇಲಾಖೆ ಬಹಳ ಮುಖ್ಯವಾದುದು ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕಂದಾಯ ಇಲಾಖೆ ಮತ್ತು ಗ್ರಾಮಾಭಿವೃದ್ಧಿ ಇಲಾಖೆಗಳು ಹೀಗೆ ಜನಗಳ ಜೊತೆಯಲ್ಲಿ ನೇರವಾದ ಸಂಪರ್ಕ ಇಟ್ಟುಕೊಂಡಿರುತ್ತವೆಯೋ ಅದೇರೀತಿ ಜನಗಳ ಜೊತೆ ನೇರಸಂಪರ್ಕ ಇಟ್ಟುಕೊಂಡಿರುವುದು ನಗರಸಭೆ ಮತ್ತು ಪುರಸಭೆಗಳು ಹಾಗೂ ಈ ಇಲಾಖೆ. ಈ ಇಲಾಖೆಯ ಯಾವುದೇ ಕಾರ್ಯಗಳಾಗಲಿ ಅದರಿಂದ ನಮ್ಮ ಜನಗಳ ದಿನನಿತ್ಯದ ನಡವಳಿಕೆಗಳ ಮೇಲೆ ಎಫೆಕ್ಟ್ ಆಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ಯಾವ ಸರ್ಕಾರವಾಗಲಿ, ಆ ಸರ್ಕಾರದಲ್ಲಿ ಈ ಒಂದು ಇಲಾಖೆಯ ಕಾರ್ಯ ನಡವಳಿಕೆ ಏನಿದೆ ಅದು ಮುಖ್ಯವಾಗಿರುತ್ತದೆ. ಇದು ಚೆನ್ನಾಗಿ ನಡೆದರೆ ಜನಗಳಿಗೆ ಒಳ್ಳೆಯದಾಗುತ್ತದೆ, ಸರಿಯಾಗಿ ನಡೆಯದೇ ಹೋದರೆ ಜನಗಳಿಗೆ ಬಹಳ ತೊಂದರೆಯುಂಟಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಗರಸಭೆ ಮತ್ತು ಪುರಸಭೆಗಳ ವಿಚಾರವಲ್ಲಿ ಮಾನ್ಯ ಧರ್ಮಸಿಂಗ್‌ರವರು ಒಂದು ಮಾತನ್ನು ಹೇಳಿದರು. ಅದನ್ನು ಪೂರ್ತಿಯಾಗಿ ಹೇಳಲಿಲ್ಲ. ನಗರಕ್ಕೆ ವಲಸೆ ಬರುತ್ತಿರುವ ವಿಚಾರವನ್ನು ಬಿಟ್ಟು ನಗರದ ಬಗ್ಗೆ ಮಾತನಾಡುವುದಕ್ಕಾಗುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಇದರಲ್ಲೂ ಬೆಂಗಳೂರಿನ ವಿಚಾರವನ್ನು ತೆಗೆದುಕೊಂಡರೆ, ಇಲ್ಲಿಗೆ ಬೇರೆ ಕಡೆಗಳಿಂದ ಜನ ವಲಸೆ ಬರುತ್ತಾರೆ. ಅದನ್ನು ತಡೆಯಬೇಕೋ ಬೇಡವೋ ಅಥವಾ ಇದೇ ತರಹ ನಗರವನ್ನು ಬೆಳೆಯುವುದಕ್ಕೆ ಬಿಡಬೇಕೋ, ವಲಸೆ ಬರುವುದಕ್ಕೆ ಬಿಡಬೇಕೋ ಬೇಡವೋ, ಎಂದು ಬಹಳ ಗಂಭೀರವಾದ ವಿಚಾರ ಇದೆ. ಈ ವಿಚಾರವನ್ನು ನಾವು ಕೂಲಂಕಷವಾಗಿ ವಿಮರ್ಶೆ ಮಾಡಿ, ಅದರ ಮೇಲೆ ಒಂದು ನಿರ್ಧಾರವನ್ನು ತೆಗೆದುಕೊಂಡು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ, ಮುಂದೆ ನಮ್ಮ ರಾಜ್ಯದಲ್ಲಾಗಲೀ, ದೇಶದಲ್ಲಾಗಲೀ ಗಂಭೀರವಾದ ಪರಿಸ್ಥಿತಿ ಬರಬಹುದೆಂದು ನಾನು ಅಂದುಕೊಂಡಿದ್ದೇನೆ. ಈ ವಿಷಯದಲ್ಲಿ ಸರ್ಕಾರ ಈಗಾಗಲೇ ತಮ್ಮ ನೀತಿಯನ್ನು ಸ್ಪಷ್ಟಪಡಿಸಿದ್ದಾರೆ. ಆದರೆ, ಆ ನೀತಿಯನ್ನು ಹೇಗೆ ಕಾರ್ಯರೂಪಕ್ಕೆ ತರಬೇಕು ಎನ್ನುವ ವಿಚಾರದಲ್ಲಿ ಸಾಕಷ್ಟು ಬೆಳಕು ಚೆಲ್ಲಲಿಲ್ಲ, ಮಾನ್ಯ ಸಚಿವರು ಈಗಲಾದರೂ ಇದನ್ನು ಕಾರ್ಯರೂಪಕ್ಕೆ ತರುವ ವಿಧಾನಗಳ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಪ್ರಜಾಪ್ರಭುತ್ವ ಒಂದು ಭದ್ರವಾದ ತಳಹದಿಯಲ್ಲಿ ನಿಲ್ಲಬೇಕಾದರೆ, ಹೇಗೆ ಕ್ರಮಬದ್ಧವಾಗಿ ಬಹಳ ಮುಖ್ಯವಾಗಿ, ಬಹಳ ಚೆನ್ನಾಗಿ ಕೆಲಸ ಮಾಡಬೇಕೋ ಅದೇ ತರಹ, ಈ ನಗರಸಭೆ ಮತ್ತು ಪುರಸಭೆಗಳು ಸಹ ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗಬೇಕು. ಯಾವಾಗ ನಗರಸಭೆ ಮತ್ತು ಪುರಸಭೆಗಳು ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತದೆಯೋ, ಆಗ ಈ ಪ್ರಜಾಪ್ರಭುತ್ವ ಭದ್ರವಾದ ತಳಹದಿಯ ಮೇಲೆ ನಿಂತಿರುತ್ತದೆ. ಭದ್ರವಾದ ತಳಹದಿಯ ಮೇಲೆ ನಿಲ್ಲಬೇಕಾದರೆ, ಏನು ಮಾಡಬೇಕೆಂಬುದನ್ನು ಯೋಚನೆ ಮಾಡಬೇಕಾಗಿದೆ. ಈ ನಗರಸಭೆಗಳು ಮತ್ತು ಪುರಸಭೆಗಳು ಯಾವ ಸ್ಥಿತಿಯಲ್ಲಿದ್ದರೆ, ಪ್ರಜಾಹಿತವನ್ನು ಚೆನ್ನಾಗಿ ಮಾಡಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ ಎಂಬುದು ಮುಖ್ಯವಾದ ವಿಷಯ. ಇದನ್ನು ವಿಚಾರ ಮಾಡುವಾಗ ನಮ್ಮ ಮನಸ್ಸಿಗೆ ಬರುವುದು ಹಣಕಾಸಿನ ಪರಿಸ್ಥಿತಿ.

ನಗರಸಭೆಗಳಲ್ಲೇ ಆಗಲೀ, ಪುರಸಭೆಗಳಲ್ಲೇ ಆಗಲೀ ಹಣಕಾಸಿನ ಪರಿಸ್ಥಿತಿ ಸುಸ್ಥಿತಿಯಲ್ಲಿದ್ದರೆ ಮಾತ್ರ ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಹಣಕಾಸಿನ ಪರಿಸ್ಥಿತಿ ಸರಿಯಾಗಿ ಇಲ್ಲದೇ ಹೋದರೆ, ಖಂಡಿತವಾಗಿ ಅವು ಸರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಈ ವಿಚಾರವನ್ನು ನೋಡಿದರೆ, ನಮ್ಮ ರಾಜ್ಯದಲ್ಲಿ ಬಹಳಷ್ಟು ನಗರಸಭೆಗಳು, ಪುರಸಭೆಗಳು ಹಣಕಾಸಿನ ಮುಗ್ಗಟ್ಟನ್ನು ಎದುರಿಸುತ್ತಿವೆಯೆಂದು ಹೇಳಿದರೆ ಅದು ಅತಿಶಯೋಕ್ತಿಯಲ್ಲವೆಂದು ನಾನು ಅಂದುಕೊಂಡಿದ್ದೇನೆ. ಈ ವಿಚಾರವನ್ನು ಅರಿತುಕೊಂಡೇ ನಮ್ಮ ಸರ್ಕಾರ ಒಂದು ಸಮಿತಿ ಮಾಡಿದೆ. ಆ ಸಮಿತಿ ವರದಿ ಸಹ ಬಂದಿದೆ. ಸರ್ಕಾರ ಅದನ್ನು ಕೂಲಂಕೂಷವಾಗಿ ಪರಿಶೀಲಿಸಬೇಕು. ಪುರಸಭೆಗಳ ಮತ್ತು ನಗರಸಭೆಗಳ ಹಣಕಾಸಿನ ಪರಿಸ್ಥಿತಿಯನ್ನು ಸರಿಯಾದ ತಳಹದಿಯ ಮೇಲೆ ನಿಲ್ಲುವಂತೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಈ ವಿಚಾರದಲ್ಲೂ ಸಹ ಸಚಿವರು ಸರ್ಕಾರದ ನಿಲುವು ಏನಿದೆ, ಅದರ ಬಗ್ಗೆ ಬೆಳಕನ್ನು ಚೆಲ್ಲುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಈ ನಗರಸಭೆಗಳ ಖರ್ಚು ಮತ್ತು ಆದಾಯವನ್ನು ನೋಡಿದರೆ, ಎರಡು ಅಂಶಗಳು ಎದ್ದು ಕಾಣುತ್ತವೆ. ಪರ್‌ಫಾರ್ಮೆನ್ಸ್ ಬಜೆಟ್ಟನ್ನು ನೋಡಿದರೆ ಎರಡು ಅಂಶಗಳು ಕಾಣುತ್ತವೆ. ಮೊದಲನೆಯ ಅಂಶ, ಖರ್ಚಿನಲ್ಲಿ ಎಲ್ಲಾ ನಗರಸಭೆಗಳು ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್‌ಗೆ ಹೆಚ್ಚು ಖರ್ಚು ಮಾಡಿದ್ದಾರೆ. ಎಲ್ಲಾ ಖರ್ಚುಗಳಿಗಿಂತಲೂ ಎಸ್ಟಾಬ್ಲಿಷ್‌ಮೆಂಟ್ ಖರ್ಚು ಹೆಚ್ಚು ಇದೆ. ಪುರಸಭೆಗಳ ವಿವರವನ್ನು ಇಲ್ಲಿ ಕೊಟ್ಟಿಲ್ಲ. ನಗರಸಭೆಗಳ ಖರ್ಚು ಏನಿದೆ, ಯಾವ ಯಾವ ಕಲಂಗಳಲ್ಲಿ ಯಾವ ಯಾವ ಖರ್ಚಾಗಿದೆಯೆಂದು ವಿವರವನ್ನು ಕೊಟ್ಟಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತೆಂದು ನನಗೆ ಅನ್ನಿಸುತ್ತದೆ. ಜನರಲ್ ಹೆಡ್ಡಿಂಗ್ಸ್‌ನಲ್ಲಿ ಸುಮಾರು ಖರ್ಚುಗಳನ್ನು ಹಾಕಿದ್ದಾರೆ. ಬೇರೆ ಬೇರೆ ಕಲಂಗಳ ವಿಷದವಾಗಿ ನೋಡಿದರೆ, ಯಾವ್ಯಾವ ಖರ್ಚಾಗಿದೆಯೆಂಬುದನ್ನು ಕೊಟ್ಟಿದ್ದರೆ, ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್‌ನಿಂದ ಎಫೆಕ್ಟ್ ಏನಾಗುತ್ತದೆ ಎನ್ನುವುದನ್ನು ಹೇಳುವುದಕ್ಕೆ ಸರಿ ಹೋಗುತ್ತಿತ್ತು. ಆ ವಿವರ ಇಲ್ಲದಿರುವುದರಿಂದ ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಖರ್ಚುಗಳು ಏನಿದೆ, ಅದರ ಮೇಲೆ ಸರಿಯಾಗಿ ಹತೋಟಿ ಇಟ್ಟುಕೊಳ್ಳದೇ ಹೋದರೆ ಮುಂದೆ ಕಷ್ಟವಾಗುತ್ತದೆ. ಆದ್ದರಿಂದ ಈ ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಏನಿದೆ, ಅವುಗಳ ಮೇಲೆ ಹತೋಟಿ ಇಡುವುದು ಅಗತ್ಯ. ಇದನ್ನು ಬಿಟ್ಟರೆ ಪ್ರಜಾ ಹಿತಕ್ಕೆ ಧಕ್ಕೆ ಆಗುತ್ತದೆ. ನಗರಸಭೆ ವಿಚಾರ ತೆಗೆದುಕೊಂಡರೆ, ಗುಲ್ಬರ್ಗ ನಗರಸಭೆ ಮತ್ತು ಬೆಳಗಾಂ ನಗರಸಭೆಗಳಲ್ಲೂ ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಜಾಸ್ತಿ ಇದೆ. ಬೆಳಗಾಂ ನಗರಸಭೆಯಲ್ಲಿ ೧೧೧೯.೯೩ ಲಕ್ಷ ಇದೆ. ಅದೇ ತರಹ ಡ್ರಿಂಕಿಂಗ್ ವಾಟರ್ ಸಪ್ಲೈ ಆಗಲೀ, ಎಸೆನ್‌ಷಿಯಲ್ ಸರ್ವೀಸ್ ಆಗಲಿ, ಬಹಳಷ್ಟು ಕಡಿಮೆ ಖರ್ಚುಗಳನ್ನು ಮಾಡಿದ್ದೇವೆ. ಬೆಂಗಳೂರು ಕಾರ್ಪೊರೇಷನ್‌ನಲ್ಲೂ ಸಹ ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಜಾಸ್ತಿ ಇದೆ. ೧೨೦೬.೯೧ ಲಕ್ಷ ಆಗಿದೆ. ಬೇರೆ ವಾಟರ್ ಸಪ್ಲೈಗಾಗಲೀ ಅಥವಾ ಎಜುಕೇಷನ್‌ಗಾಗಲೀ, ಪಿ. ಡಬ್ಲ್ಯು. ಡಿ.ಗಾಗಲೀ ಬೇರೆ ಖರ್ಚುಗಳಾಗಲೀ ಕಡಿಮೆಯಾಗಿವೆ. ಎಸ್ಟಾಬ್ಲಿಷ್‌ಮೆಂಟ್ ಚಾರ್ಜ್‌ಗಳನ್ನು ಹತೋಟಿ ಇಲ್ಲದೆ, ಹಾಗೆ ಬಿಟ್ಟರೆ ಜನಹಿತ ಕಾರ್ಯಗಳಿಗೆ ಅದರಿಂದ ಧಕ್ಕೆಯಾಗುತ್ತದೆ. ನಾವು ಖರ್ಚು ಮಾಡಬೇಕಾದ ದುಡ್ಡು ಕಡಿಮೆ ಉಳಿಯುತ್ತದೆ. ಆಗ ಖಂಡಿತವಾಗಿ ಜನಗಳಿಗೆ ಇದರಿಂದ ತೊಂದರೆಯಾಗುತ್ತದೆ. ನಾವು ಅದನ್ನು ಗಮನದಲ್ಲಿಟ್ಟುಕೊಂಡು ಈಗಲೇ ಮುಂಜಾಗರೂಕತಾ ಕ್ರಮವನ್ನು ಅನುಸರಿಸಬೇಕೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನೊಂದು ಮುಖ್ಯವಾದ ವಿಷಯ ನನ್ನ ಗಮನಕ್ಕೆ ಬರುತ್ತದೆ. ರಿಪೋರ್ಟ್‌ಗಳನ್ನು ನೋಡಿದರೆ, ಎಲ್ಲಾ ನಗರಸಭೆಗಳು ಸಹ ತೆರಿಗೆಯನ್ನು ವಸೂಲು ಮಾಡುವುದರಲ್ಲಿ ಬಹಳಷ್ಟು ಹಿಂದೆ ಇವೆ. ಅದರಲ್ಲಿ ಸುಮಾರಾಗಿ ಮಂಗಳೂರು ನಗರಸಭೆ ಮಾತ್ರ ತೆರಿಗೆ ವಸೂಲಾತಿಯನ್ನು ಮಾಡಿದೆ. ಮಿಕ್ಕ ಎಲ್ಲಾ ನಗರಸಭೆಗಳು ಸಹ ಹಿಂದೆ ಉಳಿದಿವೆಯೆಂದು ಹೇಳಿದರೆ ಅದು ತಪ್ಪಾಗಲಾರದು. ಉದಾಹರಣೆಗೆ, ಬೆಂಗಳೂರು ನಗರ ಕಾರ್ಪೊರೇಷನ್ ತೆಗೆದುಕೊಂಡರೆ, ೧೧೮೬.೯೧ ಲಕ್ಷ ಇದೆ. ಕಲೆಕ್ಷನ್ ಆಗಿರುವುದು ೫೭೭.೨೦ ಲಕ್ಷ. ಬ್ಯಾಲೆನ್ಸ್ ೬೪೯.೭೨ ಲಕ್ಷ ಇದೆ. ಕಲೆಕ್ಷನ್ ಆದ್ದಕ್ಕಿಂತ ಬ್ಯಾಲೆನ್ಸ್ ಇರುವುದು ಜಾಸ್ತಿಯಾಗಿದೆ. ಮಾರ್ಕೆಟ್ಸ್‌ನಲ್ಲೂ ಕೂಡ ಇದೇ ತರಹ ಇದೆ. ಬೆಳಗಾಂ ನಗರಸಭೆಯಲ್ಲಿ ೧೩೩.೦೪ ಲಕ್ಷ ಇದೆ. ಕಲೆಕ್ಷನ್ ಆಗಿರುವುದು ೫೨.೨೫ ಲಕ್ಷ ಬ್ಯಾಲೆನ್ಸ್ ಉಳಿದಿರುವುದು ೮೧.೭೯ ಲಕ್ಷ ಈ ತರಹ ತೆರಿಗೆಯನ್ನು ವಸೂಲು ಮಾಡಿದರೆ, ನಗರಸಭೆಗಳು ಖಂಡಿತವಾಗಿ ಹಿಂದೆ ಉಳಿಯುತ್ತವೆ. ಅವನ್ನು ಮೇಲಕ್ಕೆ ಎತ್ತುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇಲ್ಲದಿದ್ದರೆ, ವಸೂಲಾತಿ ಉದ್ದೇಶ ಸಫಲವಾಗಲಾರದೆಂದು ಅನ್ನಿಸುತ್ತದೆ. ಅದಕ್ಕೋಸ್ಕರ ವ್ಯವಸ್ಥಿತವಾದ ತೆರಿಗೆ ವಸೂಲಾತಿ ಕಾರ್ಯಕ್ರಮವನ್ನು

ಎಲ್ಲಾ ನಗರಸಭೆಗಳು ಕೈಗೊಳ್ಳಬೇಕು. ಪುರಸಭೆಗಳು ಸಹ ಅದಕ್ಕಿಂತ ಹೆಚ್ಚು ಕೆಟ್ಟಿದೆಯೆಂದು ನನಗನ್ನಿಸುತ್ತದೆ. ತೆರಿಗೆ ವಸೂಲು ಮಾಡುವ ಕೆಲಸ ಬಹಳ ಅಪ್ರಿಯವಾದುದು. ಅಪ್ರಿಯವಾದ ಕೆಲಸ ಮಾಡುವುದರಲ್ಲಿ ಸಹ ಮುಂಜಾಗ್ರತೆ ವಹಿಸಿದರೆ ಒಳ್ಳೆಯದು. ನಗರ ಸಭೆಗಳು ಚೆನ್ನಾಗಿ ಕೆಲಸ ಮಾಡಿಕೊಂಡು, ನಗರದ ಸ್ವಚ್ಛತೆಯನ್ನು ಮತ್ತು ಬೇರೆ ಕಾಮಗಾರಿ ಕೆಲಸಗಳನ್ನು ಆಗಲ್ಲೀ ಚೆನ್ನಾಗಿ ಮಾಡಿಕೊಂಡು ಹೋದರೆ, ಜನಗಳು ಖಂಡಿತವಾಗಿ ತೆರಿಗೆ ಕೊಡುವುದಕ್ಕೆ ಹಿಂಜರಿಯುವುದಿಲ್ಲ, ಹಿಂದೇಟು ಹಾಕುವುದಿಲ್ಲ ಆದರೆ, ಯಾವಾಗ ನಗರಸಭೆ ಮತ್ತು ಪುರಸಭೆಗಳು ಚೆನ್ನಾಗಿ ಕೆಲಸ ಮಾಡದೇ, ಬರೀ ತೆರಿಗೆ ವಸೂಲು ಮಾಡುವುದು ನಮ್ಮ ಕೆಲಸವೆಂದು ತಿಳಿದುಕೊಳ್ಳುತ್ತಾರೆಯೋ ಆಗ ಜನರಲ್ಲೂ ಒಂದು ತರಹ ವಿರೋಧ ಭಾವನೆ ವ್ಯಕ್ತವಾಗುತ್ತದೆ. ಆಗ ತೆರಿಗೆಯನ್ನು ವಸೂಲು ಮಾಡುವುದು ಕಷ್ಟವಾಗುತ್ತದೆ. ತೆರಿಗೆ ವಸೂಲು ಮಾಡುವಲ್ಲಿ ಮತ್ತು ನಗರಸಭೆಯ ಇತರ ಕೆಲಸ ಕಾರ್ಯಗಳಲ್ಲೂ ಜೊತೆ ಜೊತೆಯಾಗಿ ಹೋದರೆ, ಅಪ್ರಿಯವಾದ ಕೆಲಸ ಸಹ ಸುಗಮವಾಗಿ ಆಗುತ್ತದೆಂದು ನನಗನ್ನಿಸುತ್ತದೆ.

ಈ ತೆರಿಗೆ ವಸೂಲಿ ವಿಚಾರದಲ್ಲಿ ಮತ್ತೊಂದು ವಿಚಾರವನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಯಾವುದೇ ಪುರಸಭೆಯಾಗಲಿ. ನಗರಸಭೆಯಾಗಲಿ. ಶೇಕಡಾ ೫೦ಕ್ಕಿಂತಲೂ ಜಾಸ್ತಿ ತೆರಿಗೆ ವಸೂಲಿ ಬಾಕಿ ಉಳಿದಿದ್ದರೆ, ಖಂಡಿತ ಅದರ ಕಾರ್ಯನಿರ್ವಹಣೆ ಸಮರ್ಪಕವಾಗಿ ಆಗಿಲ್ಲ ಎಂದು ಸರ್ಕಾರ ನಿಗದಿ ಮಾಡಬೇಕು. ಯಾವ ಯಾವ ಪುರಸಭೆಗಳು, ನಗರಸಭೆಗಳು ತೆರಿಗೆ ವಸೂಲಿಯಲ್ಲಿ ಹಿಂದುಳಿದಿರುತ್ತವೆ, ಅಂಥ ನಗರಸಭೆ ಪುರಸಭೆಗಳ ಕಾರ್ಯನಿರ್ವಹಣೆಯ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಿ, ವಿಚಾರಣೆಗೆ ಒಳಪಡಿಸಬೇಕೆಂದು ಸರ್ಕಾರದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇನ್ನು ಇವುಗಳ ಬಗ್ಗೆ ಡೈರೆಕ್ಟರ್ ಆಫ್ ಮುನಿಸಿಪಲ್ ಪಲ್ ಅಡ್ಮಿನಿಸ್ಟ್ರೇಷನ್ ಎಂದು ಒಂದು ಡೈರೆಕ್ಟರೇಟ್ ೧೯೭೦ರಲ್ಲಿ ರಚಿಸಿದ್ದಾರೆ. ನಗರಸಭೆಗಳು, ಪುರಸಭೆಗಳು ತೆರಿಗೆ ವಸೂಲಿಯಲ್ಲಿ ಹಿಂದುಳಿದರೆ, ಡೈರೆಕ್ಟರ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಅವರ ಗಮನಕ್ಕೆ ತೆಗೆದುಕೊಂಡು ಬಂದು ಅವುಗಳಿಗೆ ಸರಿಯಾದ ದಾರಿ ತೋರಿಸಿ. ಅವರು ಮಾಡಬೇಕಾದ ಕೆಲಸ ಏನು ಎಂದು ಹೇಳಿ, ಸರಿಯಾಗಿ ತೆರಿಗೆ ವಸೂಲಿ ಮಾಡತಕ್ಕ ಕಾರ್ಯವನ್ನು ಮಾಡಿದರೆ ಆಗ ಈ ಡೈರೆಕ್ಟರೇಟ್ ಸ್ಥಾಪನೆ ಮಾಡಿದ್ದಕ್ಕೂ ಸಾರ್ಥಕವಾಗುತ್ತದೆ. ಹಾಗೆಯೇ ನಗರಸಭೆಗಳಿಗೂ, ಪುರಸಭೆಗಳಿಗೂ ಇದರಿಂದ ಒಳ್ಳೆಯದು ಆಗುತ್ತದೆಂದು ನಾನು ಅಂದುಕೊಂಡಿದ್ದೇನೆ. ಇದನ್ನು ಸರ್ಕಾರದ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ತೆರಿಗೆ ವಸೂಲಿಯಲ್ಲಿ ಅಪ್ರಿಯ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಅನೈತಿಕ ವ್ಯವಹಾರ ಏನಿದೆ ಅದರಿಂದ ವಸೂಲಾತಿ ಸರಿಯಾಗಿ ಆಗುತ್ತಿಲ್ಲ. ಈ ಅಧಿಕಾರಿಗಳು ಸಿಬ್ಬಂದಿಗಳು, ಯಾವ ಯಾವ ನಗರಸಭೆ, ಯಾವ ಯಾವ ಪುರಸಭೆಗಳಲ್ಲಿ ಸರಿಯಾಗಿ ತೆರಿಗೆ ವಸೂಲಿ ಮಾಡುವುದಿಲ್ಲವೋ ಅವರುಗಳ ಮೇಲೆ ಸರಿಯಾದಂಥ ಕ್ರಮ ತೆಗೆದುಕೊಂಡರೆ ಖಂಡಿತ ಈ ವಸೂಲಿ ಕೆಲಸ ಬಹಳ ಸುಗಮವಾಗಿ ನಡೆಯುತ್ತದೆ ಎಂದು ನಾನು ಅಂದುಕೊಂಡಿದ್ದೇನೆ ಸರ್ಕಾರದವರು ಇದನ್ನು ಗಮನದಲ್ಲಿಟ್ಟುಕೊಂಡು ನಗರಸಭೆ, ಪುರಸಭೆಗಳಿಗೆ ಸರಿಯಾದಂಥ ಆದೇಶವನ್ನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ನಗರಸಭೆ. ಪುರಸಭೆಗಳು ತೆರಿಗೆ ವಸೂಲಿ ಒಂದೇ ಅಲ್ಲ, ಅವರು ತಮ್ಮ ವರಮಾನವನ್ನು ವೃದ್ಧಿ ಮಾಡಿಕೊಳ್ಳುವಲ್ಲಿ ಹೆಚ್ಚು ಆಸಕ್ತಿ ವಹಿಸಬೇಕೆಂದು ಹೇಳುತ್ತೇನೆ ಇಲ್ಲದೇ ಹೋದರೆ ನಗರಸಭೆಗಳಲ್ಲಿ ಏನೂ ಕೆಲಸ ಆಗುವುದಿಲ್ಲ, ಅವರಲ್ಲಿ ದುಡ್ಡು ಇರುವುದಿಲ್ಲ. ಅವರಲ್ಲಿ ಏನಾದರೂ ದುಡ್ಡು ಇದ್ದರೆ ಕೆಲಸ ಮಾಡಲಿಕ್ಕೆ ಆಗುತ್ತದೆ. ಆದ್ದರಿಂದ, ಅವರು ಹಣವನ್ನು ವೃದ್ಧಿ ಮಾಡಿಕೊಳ್ಳುವ ಬಗ್ಗೆ ಕೆಲವೊಂದು ವಿಚಾರಗಳನ್ನು ಹೇಳಲಿಕ್ಕೆ ನಾನು ಇಷ್ಟಪಡುತ್ತೇನೆ. ಮೊದಲು ನಗರಸಭೆಗಳು, ಪುರಸಭೆಗಳು ಮುಖ್ಯವಾಗಿ ಆಸ್ತಿ ತೆರಿಗೆ ಮೇಲೆ, ಆಕ್ಟ್ರಾಯಿ ತೆರಿಗೆ ಮೇಲೆ, ಅವಲಂಬಿಗಳಾಗಿದ್ದವು ಈಗ ಆಕ್ಟ್ರಾಯಿ ತೆರಿಗೆ ಹೊರಟು ಹೋಗಿದೆ ಇದಕ್ಕೆ ಕಾಂಪೆನ್‌ಸೇಷನ್‌ನ್ನು ಗ್ರಾಂಟ್ ರೂಪದಲ್ಲಿ ಕೊಡುತ್ತಾರೆ. ನಗರಸಭೆಗಳು, ಪುರಸಭೆಗಳು ತೆರಿಗೆಯ ಮೇಲೆ ಅವಲಂಬಿತವಾಗಿದ್ದುದು ಹಳೆಯ ಪದ್ಧತಿ. ಈಗ ನಗರಸಭೆಗಳು. ತೆರಿಗೆಯನ್ನು ವಸೂಲಿ ಮಾಡಲಿಕ್ಕೆ ಅವರ ಆದಾಯವನ್ನು ರೂಢಿಸಿಕೊಳ್ಳುವುದಕ್ಕೆ ಬೇರೆ ಬೇರೆ ವಿಧಾನಗಳನ್ನು ಕಂಡುಹಿಡಿಯಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಇದಕ್ಕೆ ನನ್ನ ಸಲಹೆ ಏನೆಂದರೆ, ಬಹಳಷ್ಟು ನಗರಸಭೆಗಳಲ್ಲಿ ಬಹಳ ಮುಖ್ಯ ಮುಖ್ಯವಾದ ಜಾಗಗಳು ಇರುತ್ತವೆ. ಆ ಖಾಲಿ ಜಾಗಗಳು ಏನಿವೆ ಅವು ಚಿನ್ನದ ಗಣಿ ಇದ್ದ ಹಾಗೆ ಎಂದು ಅಂದುಕೊಂಡಿದ್ದೇನೆ. ಬೆಂಗಳೂರಿನಲ್ಲಿರತಕ್ಕ ಖಾಲಿ ನಿವೇಶನಗಳು ಚಿನ್ನದ ಗಣಿ ಇದ್ದ ಹಾಗೆ. ಆ ಖಾಲಿ ನಿವೇಶನಗಳನ್ನು ಸರಿಯಾಗಿ ಸದುಪಯೋಗಪಡಿಸಿಕೊಂಡು, ಅದರಿಂದ ಸರಿಯಾದ ವರಮಾನ ಬರುವಂಥ

ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ತರಹ ಕಾರ್ಯಕ್ರಮವನ್ನು ಹಾಕಿಕೊಂಡರೆ ಅವರ ವರಮಾನವನ್ನು ವೃದ್ಧಿಪಡಿಸಿಕೊಳ್ಳಬಹುದು. ಇದನ್ನು ಎಲ್ಲಾ ನಗರಸಭೆಗಳ ಗಮನಕ್ಕೆ ತಂದರೆ ಬಹಳಷ್ಟು ಒಳ್ಳೆಯದಾಗುತ್ತದೆಂದು ತಿಳಿದುಕೊಂಡಿದ್ದೇನೆ. ಇನ್ನೊಂದು ವಿಚಾರ ಹೇಳಬೇಕೆಂದರೆ, ಅಡ್ವರ್‌ಟೈಸ್‌ಮೆಂಟ್ ಮೇಲೆ ತೆರಿಗೆ ಹಾಕುವುದು ಇದೆ. ಇವೊತ್ತು ಜಾಹಿರಾತು ಇಲ್ಲದೆ ಯಾವುದೇ ವ್ಯವಹಾರ ನಡೆಸಲಿಕ್ಕೆ ಆಗುವುದಿಲ್ಲ ಯಾವುದೇ ವಸ್ತುವಿನ ಬಗ್ಗೆ ಆಗಲಿ ಯಾವುದೇ ಕಾರ್ಯಕ್ರಮ ಆಗಲಿ, ಅದಕ್ಕೆ ಜಾಹಿರಾತು ಇದ್ದೇ ಇರುತ್ತದೆ ಆದ್ದರಿಂದ, ಜಾಹಿರಾತಿನ ಬಗ್ಗೆ ತೆರಿಗೆ ಹಾಕಿ ಸರಿಯಾದ ರೀತಿಯಲ್ಲಿ ತೆರಿಗೆ ವಸೂಲಿ ಮಾಡಿದರೆ ಖಂಡಿತವಾಗಿ ನಗರಸಭೆಯು ವರಮಾನವನ್ನು ವೃದ್ಧಿಮಾಡಿಕೊಳ್ಳಬಹುದು. ಬೆಂಗಳೂರಿನಲ್ಲಿ ಹತ್ತು ವರ್ಷದ ಹಿಂದೆ ಏನು ಜಾಹೀರಾತು ನೋಡುತ್ತಿದ್ದೆವು ಅದು ಈಗ ಒಂದು ನೂರರಷ್ಟು ಜಾಹಿರಾತು ಜಾಸ್ತಿಯಾಗುತ್ತಿದೆ. ಆದರೂ ಸಹ ನಮ್ಮ ವರಮಾನ ಏನಿದೆ ಅದು ಅಷ್ಟು ಮುಂದಕ್ಕೆ ಹೋಗಿಲ್ಲ. ಸರಿಯಾದ ರೀತಿಯಲ್ಲಿ ನಗರಸಭೆಗಳು ತೆರಿಗೆಯನ್ನು ವಸೂಲು ಮಾಡುತ್ತಿಲ್ಲ. ಆದ್ದರಿಂದ, ಸರ್ಕಾರದವರು ಇದರ ಬಗ್ಗೆ ಯೋಚನೆ ಮಾಡಿ ಎಲ್ಲಾ ನಗರಸಭೆಗಳಿಗೂ ಆದೇಶ ಕೊಡುವುದು ಸೂಕ್ತ ಆದಷ್ಟು ಬೇಗ ಜಾಹಿರಾತಿನ ಬಗ್ಗೆ ಯಾವರೀತಿ ತೆರಿಗೆ ಹಾಕಿದರೆ ಒಳ್ಳೆಯದಾಗುತ್ತದೆ ಆ ರೀತಿ ತೆರಿಗೆ ಹಾಕಿ ವಸೂಲಿ ಮಾಡುವ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಮತ್ತೊಂದು ವಿಚಾರ ತಿಳಿಸಬೇಕೆಂದರೆ, ಮೋಟರ್ ವೆಹಿಕಲ್ಸ್ ಟ್ಯಾಕ್ಸ್ ನಗರಸಭೆಗೆ ಕೊಡತಕ್ಕದ್ದು ಏನಿದೆ ಇದು ಬಹಳ ಕಡಿಮೆಯಾಗಿದೆ. ಅದರ ಬಗ್ಗೆ ಈಗಾಗಲೇ ಸಮಿತಿಯವರು ತನ್ನ ವರದಿಯಲ್ಲಿ ಹೆಚ್ಚು ಭಾಗಾಂಶ ಕೊಡಬೇಕೆಂದು, ವರದಿ ಕೊಟ್ಟಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆ ಹಣ ಕೊಡುವುದರಲ್ಲಿ ಜಾಸ್ತಿ ಮಾಡಿದರೆ ನಗರಸಭೆಗಳಿಗೆ ಅನುಕೂಲವಾಗುತ್ತದೆ. ಬೆಂಗಳೂರಿನಲ್ಲಿ ಸಾಕಷ್ಟು ರಸ್ತೆಗಳಿವೆ. ಆ ರಸ್ತೆಗಳಿಗೆ ನಗರ ಸಭೆಯವರು ಸಾಕಷ್ಟು ಖರ್ಚು ಮಾಡುತ್ತಿದ್ದಾರೆ. ಅದರ ಪ್ರಯೋಜನ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್‌ನಿಂದ ಪಡೆದುಕೊಳ್ಳುತ್ತಾರೆ. ಈಗ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್‌ನಿಂದ ಬರತಕ್ಕ ಹಣದಿಂದ ಬಹು ಭಾಗ ಕಡಿಮೆ ಹಣವನ್ನು ನಗರಸಭೆಗೆ ಕೊಡುತ್ತಿದ್ದಾರೆ ಅದನ್ನು ಸಾಕಷ್ಟು ಜಾಸ್ತಿ ಮಾಡಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಬೇರೆ ಬೇರೆ ತೆರಿಗೆಗಳನ್ನು ರೂಢಿಸಿಕೊಳ್ಳುವುದು ಅಷ್ಟೇ ಅಲ್ಲ, ಆ ತೆರಿಗೆಗಳನ್ನು ವಸೂಲಿ ಮಾಡತಕ್ಕ ವಿಧಾನ ಏನಿದೆ ಅದನ್ನು ಸಹ ಪರಿಷ್ಕೃತ ಮಾಡಬೇಕು. ಈಗ ಇರತಕ್ಕ ಹಳೆಯ ವಿಧಾನದಿಂದ ಜನರಿಗೆ ತೊಂದರೆಯಾಗುತ್ತದೆ. ಆಸ್ತಿ ತೆರಿಗೆ ಹಾಕತಕ್ಕದ್ದರಲ್ಲಿ ಹಿಂದೆ ಇದ್ದ ರೀತಿಯಲ್ಲಿಯೇ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಆಸ್ತಿಗಳ ಮೌಲ್ಯದ ಬಗ್ಗೆ ತೀರ್ಮಾನ ಮಾಡಿ ತೆರಿಗೆ ಹಾಕತಕ್ಕ ಡಿಸ್ಕ್ರಿಷನರಿ ಪವರ್ ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ಇದೆ. ಈ ಆಸ್ತಿ ಮೌಲ್ಯಗಳನ್ನು ತೀರ್ಮಾನ ಮಾಡತಕ್ಕ ವಿಧಾನದಲ್ಲಿ ಬಹಳಷ್ಟು ಅಪಚಾರ ನಡೆಯುತ್ತಿದೆ ಎಂದರೆ ಅದು ತಪ್ಪಾಗಲಾರದು. ಇದರಿಂದ ನಗರಸಭೆಗಳಿಗೆ ಬರತಕ್ಕ ವರಮಾನ ಕಡಿಮೆಯಾಗುತ್ತಿದೆ, ಅಲ್ಲದೆ, ಜನರಿಗೂ ತೊಂದರೆಯಾಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು ಆದ್ದರಿಂದ, ಈ ವಿಧಾನವನ್ನು ತೆಗೆದುಹಾಕಿ ಪರಿಷ್ಕೃತವಾದಂಥ ಒಂದು ವಿಧಾನವನ್ನು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ, ಇದಕ್ಕೆ ಒಂದು ವಿಧಾನ ಪ್ರತಿಯೊಂದು ಭಾಗದಲ್ಲಿರತಕ್ಕ ನಿವೇಶನದ ಮೌಲ್ಯ, ಕಟ್ಟಡಗಳ ಮೌಲ್ಯ ಏನಿದೆ ಅದನ್ನು ಸರ್ಕಾರದವರೇ ತೀರ್ಮಾನ ಮಾಡಬೇಕು. ಈ ರೀತಿ ಸರ್ಕಾರದವರೇ, ನಿವೇಶನದ ಮತ್ತು ಕಟ್ಟಡಗಳ ಮೌಲ್ಯವನ್ನು ತೀರ್ಮಾನ ಮಾಡಿದರೆ, ರೆವಿನ್ಯೂ ಇನ್ಸ್‌ಪೆಕ್ಟರ್ ಅವರುಗಳ ಡಿಸ್ಕ್ರಿಷನರಿ ಪವರ್ ಏನಿದೆ ಅದು ಕಡಿಮೆಯಾಗುತ್ತದೆ. ಈ ತರಹ ವಿಧಾನವನ್ನು ಸರ್ಕಾರದವರು ಜಾರಿಗೆ ತಂದರೆ ಜನರಿಗೆ ಈಗ ಆಗತಕ್ಕ ಕಿರುಕುಳ ತಪ್ಪಿ, ಬಹಳ ಅನುಕೂಲವಾಗುತ್ತದೆ. ಬೇರೆ ಬೇರೆ ಕಡೆಗಳಲ್ಲಿ ರೇಟಿಂಗ್ ಆಕ್ಟ್ ತಂದು ಪ್ರತಿಯೊಂದು ಆಸ್ತಿಮೇಲೆ ಅಲ್ಲಿಯ ಸರ್ಕಾರದವರೇ ಮೌಲ್ಯ ನಿಗದಿಪಡಿಸುತ್ತಾರೆ, ಆ ರೀತಿ ಮಾಡುವುದರಿಂದ, ತೆರಿಗೆ ಹಾಕತಕ್ಕದ್ದು, ತೆರಿಗೆ ವಸೂಲು ಮಾಡತಕ್ಕದ್ದು ಬಹಳ ಸುಲಭವಾಗುತ್ತದೆ. ಆದ್ದರಿಂದ, ರೇಟಿಂಗ್ ಆಕ್ಟ್ ತರಲಿಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಮತ್ತೊಂದು ವಿಚಾರ ತಿಳಿಸಬೇಕೆಂದರೆ, ಆಸ್ತಿಮೌಲ್ಯವನ್ನು ತೀರ್ಮಾನ ಮಾಡತಕ್ಕದ್ದು, 5 ವರ್ಷಕ್ಕೊಮ್ಮೆ ಪರಿಷ್ಕೃತ ಮಾಡಿ, ಅದನ್ನು ಹೆಚ್ಚಿಸಬೇಕೆ ಕಡಿಮೆ ಮಾಡಬೇಕೇ ಎನ್ನುವ ಬಗ್ಗೆ ಅಧಿಕಾರವನ್ನು ಸರ್ಕಾರದವರೇ ಇಟ್ಟುಕೊಳ್ಳಬೇಕು. ಇದನ್ನು ಮಾಡಿದರೆ ಜನರಿಗೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ

ಇನ್ನು ನಗರಸಭೆಯವರು ಮಾಡಿಸತಕ್ಕ ಕಾಮಗಾರಿ ಕೆಲಸ ಮತ್ತು ಸ್ವಚ್ಛತೆ ಕೆಲಸಗಳಿಗೆ ಬಂದರೆ, ಈ ಎರಡೂ ಕೆಲಸಗಳಲ್ಲೂ ನಗರಸಭೆಗಳು ಸಂಪೂರ್ಣವಾಗಿ ಹಿಂದೆ ಬಿದ್ದಿವೆ ಎಂದು ಹೇಳಿದರೆ ತಪ್ಪಾಗಲಾರದು. ಕಾಮಗಾರಿ ಕೆಲಸದಲ್ಲಿ ಸಾಕಷ್ಟು ಒಳ್ಳೆಯ ಕೆಲಸಗಳು ನಡೆಯುತ್ತಿವೆ. ನಡೆಯುತಕ್ಕ ಕೆಲಸದಲ್ಲಿ ಸ್ವಲ್ಪ ಮಟ್ಟಿಗೆ ದಕ್ಷತೆ ಕಡಿಮೆಯಾಗಿದೆಯೆಂದರೆ ತಪ್ಪಾಗಲಾರದು. ಎಷ್ಟು ಬೇಗ ಕೆಲಸವಾಗಬೇಕೋ ಅಷ್ಟು ಬೇಗ ಕೆಲಸವಾಗುತ್ತಿಲ್ಲ. ಯಾವ ಯಾವ ಕೆಲಸಗಳನ್ನು ತೆಗೆದುಕೊಂಡಿರುತ್ತಾರೆ ಅವುಗಳನ್ನು ಕಾಲಕ್ಕೆ ಸರಿಯಾಗಿ ಮುಗಿಸಿದರೆ ಹೆಚ್ಚಿನ ಸೌಲಭ್ಯಗಳು ನಾಗರೀಕರಿಗೆ ದೊರೆಯುತ್ತವೆ. ನನ್ನ ಅನುಭವದ ಪ್ರಕಾರ ಹೇಳುವುದಾದರೆ. ಖಾಸಗೀ ಕಂಟ್ರಾಕ್ಟ್ ದಾರರಿಗೆ ಕೆಲಸಗಳನ್ನು ಟೆಂಡರ್ ಮುಖಾಂತರ ವಹಿಸಿಕೊಡುವಂಥ ಸರಳ ವಿಧಾನ ನಮ್ಮಲ್ಲಿ ಇಲ್ಲ. ಸರಳವಲ್ಲದ ವಿಧಾನ ಇರುವುದರಿಂದ ತೊಂದರೆಯಾಗುತ್ತದೆಂದು ನಾನು ಹೇಳುತ್ತೇನೆ. ಕೆಲವು ಸಂದರ್ಭದಲ್ಲಿ ಕಂಟ್ರಾಕ್ಟ್‌ದಾರರು ಉದ್ದೇಶಪೂರ್ವಕವಾಗಿ ಕಡಿಮೆ ಟೆಂಡರ್ ಹಾಕಿ ಕೆಲಸ ನಿಲ್ಲಿಸುವಂಥ ಸಂದರ್ಭವೂ ಉಂಟು. ಇಂಥ ಸಂದರ್ಭದಲ್ಲಿ ನಗರಸಭೆಗಳಿಗೆ ತಕ್ಷಣ ಕಂಟ್ರಾಕ್ಟ್ ರದ್ದು ಮಾಡಿ ಬೇರೆಯವರಿಗೆ ಕೊಡತಕ್ಕ ಅಧಿಕಾರವೂ ಇಲ್ಲ. ೩೦ ದಿವಸಗಳ ಮುಂಚಿತವಾಗಿ ನೋಟೀಸ್ ಕೊಟ್ಟು ನಂತರ ರದ್ದು ಮಾಡಬೇಕಾಗಿದೆ. ಅಷ್ಟುಹೊತ್ತಿಗೆ ಕೆಲಸ ನಿಧಾನವಾಗಿ ಹೋಗುತ್ತದೆ. ಟೆಂಡರ್ ಕರೆಯುವುದಾಗಲೀ, ಬೇರೆಯವರಿಗೆ ಕೆಲಸ ವಹಿಸಿಕೊಡುವ ವಿಚಾರವಾಗಲಿ ಸರ್ಕಾರದವರು ಪರಿಷ್ಕರಣ ಮಾಡಬೇಕೆಂದು ಸೂಚಿಸುತ್ತೇನೆ. ಇದೇ ಸಮಯದಲ್ಲಿ ಇನ್ನೊಂದು ಮಾತು ಹೇಳುವುದಾದರೆ ಕಾಮಗಾರಿ ಕೆಲಸ ಬೇರೆಯವರಿಗೆ ವಹಿಸಿಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಇವೊತ್ತು ನಗರಸಭೆಗಳ ವ್ಯಾಪ್ತಿಯಲ್ಲಿ ಹಳೇ ಕಾಲದ ಪದ್ಧತಿಯಲ್ಲಿಯೇ ಸ್ವಚ್ಛತೆ ಕಾರ್ಯನಡೆದುಕೊಂಡು ಹೋಗುತ್ತಿದೆ. ಇಂದು ಬೆಂಗಳೂರು ನಗರ ಬೃಹದಾಕಾರವಾಗಿ ಬೆಳೆದಿದೆ ಸ್ವಚ್ಛತೆ ಕಾರ್ಯ ವಿಧಾನವನ್ನು ಪರಿಷ್ಕರಣೆ ಮಾಡಿಲ್ಲ, ಕಸದ ಪೊರಕೆ ಹಿಡಿದುಕೊಂಡೇ ಸ್ವಚ್ಛತೆ ಮಾಡುವಂಥ ವ್ಯವಸ್ಥೆ ಇನ್ನೂ ಇದೆ. ಇದರಿಂದ ಶೀಘ್ರವಾಗಿ ಕೆಲಸ ನಡೆಯುತ್ತಿಲ್ಲ ಬೆಂಗಳೂರು, ಮಂಗಳೂರು ಬೆಳಗಾಂ, ಹುಬ್ಬಳ್ಳಿ, ಧಾರವಾಡ ಇಂಥ ನಗರಗಳಲ್ಲಿ ಮೆಕ್ಯಾನಿಕಲ್ ಸ್ವೀಪರ್ಸ್ ತಂದರೆ ಕೆಲಸವನ್ನು ಸುಲಭವಾಗಿ ಸ್ವಚ್ಛವಾಗಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ಸರ್ಕಾರದವರು ನಗರಸಭೆಗಳಿಗೆ ಸೂಕ್ತ ಆದೇಶ ಕೊಡಬೇಕೆಂದು ಹೇಳುತ್ತೇನೆ,

ಇನ್ನು ನಗರಾಭಿವೃದ್ಧಿ ಮಂಡಲಿಗಳ ಬಗ್ಗೆ ವರದಿಯಲ್ಲಿ ಹೇಳಿದ್ದಾರೆ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ನಗರಾಭಿವೃದ್ಧಿ ಮಂಡಲಿಗಳಿಂದ ಆಗುತ್ತಿವೆ. ಆದರೆ ಕೆಲವೊಂದು ದೂರುಗಳು ಕೇಳಿಬರುತ್ತಿವೆ. ಸೈಟುಗಳ ಬೆಲೆ ಜಾಸ್ತಿಯಾಗಿರುವುದರಿಂದ ಜನಗಳಿಂದ ಪ್ರತಿಭಟನೆ ಬರುತ್ತಿದೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಜನಸಾಮಾನ್ಯರಿಗೆ ಕಡಿಮೆ ಬೆಲೆಯಲ್ಲಿ ನಿವೇಶನ ಕೊಡುವುದಕ್ಕೆ ಸರ್ಕಾರದವರು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ಒಂದು ಸೈಟಿನ ಬೆಲೆ ೪೦,೦೦೦ ರೂಪಾಯಿಗಳಿಗೆ ಹೋಗಿದೆ ೪೦,೦೦೦ ರೂಪಾಯಿಗಳನ್ನು ಕೊಟ್ಟು ಎಷ್ಟು ಜನ ತೆಗೆದುಕೊಳ್ಳುವವರು ಇದ್ದಾರೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಸುಲಭ ಬೆಲೆಗೆ ಜನ ಸಾಮಾನ್ಯರಿಗೆ ಸೈಟುಗಳನ್ನು ಕೊಡುವ ಯೋಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಟ್ರಸ್ಟ್ ಬೋರ್ಡ್‌ನಲ್ಲಾಗಲೀ, ಬಿ.ಡಿ.ಎ. ನಲ್ಲಾಗಲೀ ಬರತಕ್ಕ ಸಿಬ್ಬಂದಿ ಖರ್ಚು ಸರಿದೂಗಿಸುವುದಕ್ಕಾಗಿ ಸೈಟುಗಳ ಬೆಲೆಯನ್ನು ಹೆಚ್ಚು ಮಾಡುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಈ ವಿಚಾರವನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಆದಷ್ಟು ಕಡಿಮೆ ಬೆಲೆಗೆ ಜನಸಾಮಾನ್ಯರಿಗೆ ಸೈಟುಗಳನ್ನು ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಟ್ರಸ್ಟ್‌ಬೋರ್ಡುಗಳು ಮತ್ತು ಬಿ. ಡಿ. ಎ. ನವರು ಜನರಿಗೆ ನಿವೇಶನಗಳನ್ನು ಕೊಡುತ್ತಾರೆಯೇ ಹೊರತು ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಡುತ್ತಿಲ್ಲ. ಬೆಂಗಳೂರು ನಗರದಲ್ಲಿ ಹತ್ತು ವರ್ಷಗಳ ಹಿಂದೆ ಹಂಚಿದಂಥ ನಿವೇಶಗಳಿಗೆ ಇದುವರೆವಿಗೂ ಸರಿಯಾದ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿಲ್ಲ ಇವೊತ್ತೂ ಕೂಡ ದೀಪದ ವ್ಯವಸ್ಥೆ ಕೆಲವು ಕಡೆಗಳಲ್ಲಿ ಇಲ್ಲ. ಒಳಚರಂಡಿ ವ್ಯವಸ್ಥೆ ಇಲ್ಲ ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ನಗರಸಭೆಗಳ ಗಮನಕ್ಕೆ ಮತ್ತು ಬಿ.ಡಿ.ಎ. ನವರ ಗಮನಕ್ಕೆ ಹಲವಾರುಬಾರಿ ತಂದಿದ್ದೇವೆ. ನಾಗರೀಕ ಸೌಲಭ್ಯಗಳನ್ನು ಕೊಡದೇ ಸೈಟುಗಳನ್ನು ಹಂಚಿಕೆ ಮಾಡುವುದನ್ನು ತಪ್ಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರಿಂದ ಜನಗಳಿಗೆ ಆಗತಕ್ಕ

ತೊಂದರೆಯನ್ನು ತಪ್ಪಿಸಬಹುದು. ಬರೀ ನಿವೇಶನ ಹಂಚುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದು ಸರ್ಕಾರದವರ ಗಮನಕ್ಕೆ ತರುತ್ತೇನೆ. ಬಿ. ಡಿ. ಎ. ವಿಚಾರದಲ್ಲಿ ಹೇಳುವುದಾದರೆ, ರೆವಿನ್ಯೂ ಸೈಟ್ಸ್ ಮತ್ತು ರೆವಿನ್ಯೂ ಹಳ್ಳಿಗಳನ್ನು ತೆಗೆದುಕೊಂಡಿದ್ದರೂ ಕೂಡ ಇವತ್ತಿನವರೆವಿಗೂ ಅವುಗಳು ರೆವಿನ್ಯೂ ಹಳ್ಳಿಗಳಾಗಿಯೇ ಉಳಿದುಕೊಂಡಿವೆ. ಅಲ್ಲಿನ ಜನಗಳಿಗೆ ಯಾವ ಸೌಲಭ್ಯವೂ ಇಲ್ಲ. ಅಭಿವೃದ್ಧಿ ಕರ ಮತ್ತು ಲೇಔಟ್ ಚಾರ್ಜ್ ಕೊಡುವುದಕ್ಕೆ ಅವರುಗಳು ಸಿದ್ಧವಾಗಿದ್ದರೂ ಯಾವ ಅನುಕೂಲವನ್ನು ಮಾಡಿಕೊಟ್ಟಿಲ್ಲ. ಸುಮಾರು ೬೩ ಹಳ್ಳಿಗಳನ್ನು ಕಾರ್ಪೊರೇಷನ್ ವ್ಯಾಪ್ತಿಗೆ ತೆಗೆದುಕೊಂಡಿದ್ದಾರೋ ಆ ಹಳ್ಳಿಗಳಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಗರಗಳಲ್ಲಿ ರೆವಿನ್ಯೂ ಸೈಟುಗಳನ್ನು ತೆಗೆದು ಕೊಂಡಿರುವವರ ಸಮಸ್ಯೆ ಬಹಳ ದೊಡ್ಡದಾಗಿದೆ. ಈ ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ, ಸರ್ಕಾರದವರು ರೆವಿನ್ಯೂ ಸೈಟುಗಳ ವಿಚಾರದಲ್ಲಿ ಒಂದು ನಿರ್ಧಾರ ತೆಗೆದುಕೊಂಡು ರೀಕನ್‌ವೇ ಮಾಡತಕ್ಕ ನಿರ್ಧಾರ ಮಾಡಬೇಕೆಂದು ಹೇಳುತ್ತೇನೆ. ರೆವಿನ್ಯೂ ಸೈಟುಗಳನ್ನು ಬಡವರು. ಮಧ್ಯಮವರ್ಗದವರು ಕೊಂಡಿದ್ದಾರೆ. ಅವರಿಗೆ ಪರಿಹಾರ ಕೊಡತಕ್ಕಂಥಾದ್ದು ಸೌಲಭ್ಯಗಳನ್ನು ಒದಗಿಸಿಕೊಡತಕ್ಕಂಥಾದ್ದು ಸರ್ಕಾರದ ಕರ್ತವ್ಯವೆಂದು ತಮ್ಮ ಮುಖಾಂತರ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ರಾಜ್ಯದಲ್ಲಿರತಕ್ಕ ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡಲು ಒಂದು ಮಂಡಲಿ ಇದ್ದು ಅದು ಹೇಗೆ ಕೆಲಸ ಮಾಡುತ್ತಿದೆ ಎನ್ನುವ ಬಗ್ಗೆ ಸರ್ಕಾರ ಗಮನಕೊಟ್ಟರೆ ಚೆನ್ನಾಗಿರುತ್ತದೆ. ಈ ವಿಚಾರದಲ್ಲಿ ನಗರದ ಶಾಸಕರ ಜೊತೆಗೆ ಚರ್ಚೆ ಕೂಡ ಮಾಡಲಾಗಿದೆ. ಕೊಳಚೆ ನಿರ್ಮೂಲನ ಮಂಡಲಿಯ ಕೆಲಸ ಚುರುಕಾಗಿ ನಡೆಯುತ್ತಿಲ್ಲ. ಬೆಂಗಳೂರು ನಗರದಲ್ಲಿ ೨೦೦ ಕೊಳಚೆ ಪ್ರದೇಶಗಳಿವೆ. ರೆಕಗ್ನೈಸ್ ಸ್ಲಂಗಳು ಇದರ ವ್ಯಾಪ್ತಿಯಲ್ಲಿ ಬರುತ್ತವೆ. ಬೋರ್ಡಿನ ಕೆಲಸಕಾರ್ಯ ಸರಿಯಾದ ರೀತಿಯಲ್ಲಿ ನಡೆಯದೇ ಇರುವುದರಿಂದ ಅವುಗಳು ಹಾಗೆಯೇ ಉಳಿದುಕೊಂಡಿವೆ.

೪–೩೦ ಪಿ.ಎಂ.

ಆದ್ದರಿಂದ ಜನಗಳಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಏನು ಸ್ಲಂ ಕ್ಲೀಯರೆನ್ಸ್ ಬೋರ್ಡ್ ಮಾಡಿದ್ದಾರೆ ಅದರಿಂದ ನಾವು ಎಷ್ಟು ಕೆಲಸವನ್ನು ನಿರೀಕ್ಷೆ ಮಾಡಿದ್ದೆವೋ ಅಷ್ಟು ಆಗಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇದಕ್ಕೆ ಎರಡು ಕಾರಣಗಳಿವೆ: ಒಂದನೆಯದು ಈ ಬೋರ್ಡ್‌ನಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲ. ಎರಡನೆಯದು, ಅದೇ ತರಹ ಅಲ್ಲಿ ಹಣದ ವ್ಯವಸ್ಥೆ ಸಹ ಸಾಕಷ್ಟು ಇಲ್ಲವೆಂದು ದೂರು ಇದೆ. ಈ ಎರಡು ವಿಷಯಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಬೋರ್ಡ್ ಸರಿಯಾದ ರೀತಿಯಲ್ಲಿ ಕೆಲಸ ಮಾಡುವ ಹಾಗೆ ಮಾಡಿದರೆ ಜನಗಳಿಗೆ ಒಳ್ಳೆಯದಾಗುತ್ತದೆ. ಬಡಬಗ್ಗರಿಗೆ ಕೊಳಚೆ ಪ್ರದೇಶದ ಜನರಿಗೆ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ಸುಲಭವಾಗುತ್ತದೆ.

ಅಧ್ಯಕ್ಷರು.— ಇವತ್ತು ಈ ಬೇಡಿಕೆಯನ್ನು ಮುಗಿಸಲೇಬೇಕು. ಮಾನ್ಯ ನಾರಾಯಣರಾಯರೇ ಈಗ ನಿಮ್ಮ ಭಾಷಣವನ್ನು ಮುಗಿಸಿಬಿಡಿ.

ಶ್ರೀ ಬಿ. ಬಸವಲಿಂಗಪ್ಪ.— ಎಲ್ಲಾ ತಮ್ಮ ಇಚ್ಛೆ ಪ್ರಕಾರ ನಡೆಯಲಿ.

ಅಧ್ಯಕ್ಷರು.—ನಿಮ್ಮೆಲ್ಲರ ಇಚ್ಛೆಯೇ ನನ್ನ ಇಚ್ಛೆ.

ಶ್ರೀ ಎಂ.ಎಸ್. ನಾರಾಯಣರಾವ್.—ಇನ್ನು ಬೆಂಗಳೂರು ಜಲಮಂಡಲಿ ಏನಿದೆ ಅದರ ವಿಚಾರವಾಗಿ ಹೇಳುವುದಾದರೆ, ಇದು ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿದರೆ ಅತಿಶಯೋಕ್ತಿಯೇನಲ್ಲ. ಬೆಂಗಳೂರು ನಗರ ಶಾಸಕರ ಅನಿಸಿಕೆ ಎಂದರೆ ಕಾರ್ಪೊರೇಷನ್, ಸ್ಲಂ ಬೋರ್ಡ್, ಕೆಇಬಿ, ಬಿಡಿಎ ಇವುಗಳಿಗೆ ಜಲಮಂಡಲಿಯನ್ನು ಹೋಲಿಸುವುದಕ್ಕಿಂತ ಹೆಚ್ಚಾಗಿ ಇಲ್ಲಿನ ಅಧಿಕಾರವರ್ಗ, ನೌಕರವರ್ಗ ಆಸ್ಥೆಯಿಂದ ಜನಗಳ ಸಮಸ್ಯೆಗಳಿಗೆ ಚೆನ್ನಾಗಿ ಸ್ಪಂಧಿಸಿದ್ದಾರೆ. ಪ್ರೋತ್ಸಾಹದಾಯಕ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬ ಅಭಿಪ್ರಾಯ ಇದೆ. ಇವತ್ತು ನಮ್ಮ ದೃಷ್ಟಿಯಲ್ಲಿ, ನೀರಿನ ಅಭಾವವುಂಟಾಗಿ, ಮಳೆಬಾರದೆ ತಿಪ್ಪಗೊಂಡನಹಳ್ಳಿ, ಕೆಆರ್‌ಎಸ್‌ಗಳಲ್ಲಿ ನೀರು ಇಲ್ಲದೇ ಇದ್ದರೂ ಅವರು ಕಷ್ಟಪಟ್ಟು ಚಾಕಚಕ್ಯತೆಯಿಂದ ಪರಿಸ್ಥಿತಿಯನ್ನು ಎದುರಿಸಿಕೊಂಡು ಹೋಗುವಲ್ಲಿ ಅಭಿನಂದನೆಗೆ ಅರ್ಹರಾಗಿದ್ದಾರೆಂದರೆ ತಪ್ಪಾಗಲಾರದು.

ಈ ವಿಚಾರದಲ್ಲಿ ಮಾತನಾಡುವಾಗ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಸರ್ಕಾರದ ಅಭಿನಂದನೆಗೆ ಜಲಮಂಡಲಿಯೂ ಅರ್ಹವಾಗಿದೆ. ಒಂದು ವಿಚಾರ ವಿನಂತಿಸಿಕೊಳ್ಳುತ್ತೇನೆ. ಬೆಂಗಳೂರು ನಗರದಲ್ಲಿ ಬೋರ್‌ವೆಲ್‌ಗಳನ್ನು ಹಾಕುವುದಕ್ಕೆ ಜಲಮಂಡಲಿಗೆ ಸರ್ಕಾರ ಏನು ದುಡ್ಡು ಕೊಟ್ಟಿದೆ ಅದನ್ನು ಸಾಲವಾಗಿ ಕೊಟ್ಟಿದ್ದಾರೆ. ಬೇರೆಲ್ಲಾ ಕಡೆ ಬೋರ್‌ವೆಲ್‌ಗಳನ್ನು ಹಾಕುವಾಗ ಸಾಲದ ರೂಪದಲ್ಲಿ ಕೊಟ್ಟಿಲ್ಲ. ಬದಲಿಗೆ ಸರ್ಕಾರವೇ ಈ ಹಣವನ್ನು ಖರ್ಚು ಮಾಡಿದೆ. ಆದರೆ ಬೆಂಗಳೂರು ನಗರದ ಜನತೆ ಮಾತ್ರ ಈ ಬೋರ್‌ವೆಲ್‌ಗಾಗಿ ಖರ್ಚಾಗಿರುವ ದುಡ್ಡನ್ನು ವಾಪಸ್ಸು ಕೊಡಬೇಕೇ? ಜಲಮಂಡಲಿಯವರು ಸರ್ಕಾರಕ್ಕೆ ವಾಪಸ್ಸು ಕೊಡಬೇಕೆ? ಆದ್ದರಿಂದ ಬೋರ್‌ವೆಲ್ ಖರ್ಚನ್ನು ಗ್ರಾಂಟನ್ನಾಗಿ ಜಲಮಂಡಲಿಗೆ ಪರಿವರ್ತಿಸಬೇಕೆಂದು ಕೋರುತ್ತೇನೆ. ಅಲ್ಲದೆ ಸಾಲದ ಮೇಲಿನ ಬಡ್ಡಿಯನ್ನೂ ಕೇಳುತ್ತಿದ್ದಾರೆ. ಆದ್ದರಿಂದ ಸರ್ಕಾರವು ಇದನ್ನು ಗಮನಕ್ಕೆ ತೆಗೆದುಕೊಂಡು ಸಾಲದ ಮೊಬಲಗು ಮತ್ತು ಬಡ್ಡಿ ಹಣ ಸೇರಿ ಒಟ್ಟು ಮೊಬಲಗಷ್ಟನ್ನೂ ಗ್ರಾಂಟ್ ಎಂದು ಪರಿಗಣಿಸಲು ನಾನು ಕೋರುತ್ತೇನೆ.

ಕಾವೇರಿ ೩ನೆಯ ಹಂತ ಏನಿದೆ ಆ ಕೆಲಸವನ್ನು ಆದಷ್ಟು ಬೇಗ ಸಮರ್ಪಕವಾಗಿ ಮುಗಿಸುವ ಹಾಗೆ ಸಹಾಯ ಮಾಡಬೇಕು. ಈಗ ಅದಕ್ಕಾಗಿ ಕೊಟ್ಟಿರುವ ದುಡ್ಡು ಸಾಕಾಗುವುದಿಲ್ಲ. ಆದಷ್ಟು ಬೇಗ ಜಾಸ್ತಿ‌ಜಾಸ್ತಿ ದುಡ್ಡು ಜಲಮಂಡಲಿಯವರಿಗೆ ಕೊಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥಿಸಿ ಕೊಳ್ಳುತ್ತೇನೆ.

ಇನ್ನೊಂದು ವಿಚಾರವನ್ನು ಮಾನ್ಯ ಧರ್ಮಸಿಂಗ್ ಅವರು. ಹೇಮಾವತಿ ಪ್ರೊಜೆಕ್ಟ್ ಖರ್ಚು ೨೪೦ ಕೋಟಿಯಾಗಿ ತೊಂದರೆಯಾಗುವುದೆಂದು, ಆದ್ದರಿಂದ ಆ ಪ್ರೊಜೆಕ್ಟ್ ಬೇಡ ಎಂದು ಹೇಳಿದರು. ಕಾವೇರಿ ನೀರನ್ನು ಬೆಂಗಳೂರಿಗೆ ತರಲು ಎಷ್ಟು ಖರ್ಚಾಗುವುದೋ ಅದಕ್ಕಿಂತ ಕಡಿಮೆ ಖರ್ಚಿನಲ್ಲಿ ಬೆಂಗಳೂರಿಗೆ ಹೇಮಾವತಿ ತರಬಹುದೆಂದು ತಜ್ಞರ ಅಭಿಮತ ಇದೆ.

ಶ್ರೀ ಧರ್ಮಸಿಂಗ್.—ಹೇಮಾವತಿ ತೆಗೆದುಕೊಳ್ಳಬಾರದೆಂದು ನಾನು ಹೇಳಲಿಲ್ಲ. ಅದಕ್ಕಾಗಿ ೨೪೦ ಕೋಟಿ ಏಕೆ ಖರ್ಚು ಮಾಡುವಿರಿ ಎಂದು ಹೇಳಿದ್ದೇನೆ ಅಷ್ಟೇ.

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್ ಅವರೇ ನಿಮ್ಮ ಅವಧಿಯಲ್ಲಿ ಮಾತನಾಡಿದ್ದೀರಿ. ಮತ್ತೆ ಮಾತನಾಡುವುದಿದ್ದರೆ ನಿಮಗೆ ಅವಕಾಶವಿರುವಾಗ ಮಾತನಾಡಿ.

ಶ್ರೀ ಎಂ. ಎಸ್. ನಾರಾಯಣರಾವ್.— ಆದ್ದರಿಂದ ಸರ್ಕಾರದವರು ಹೇಮಾವತಿ ನೀರನ್ನು ಬೆಂಗಳೂರಿಗೆ ಖಂಡಿತ ಜಾಗ್ರತೆ ಅಳವಡಿಸಬೇಕೆಂದು ಕೇಳುತ್ತೇನೆ. ಅಲ್ಲದೆ ಹೇಮಾವತಿ ನೀರು ಬೆಂಗಳೂರಿಗೆ ಬಂದರೆ ವ್ಯವಸಾಯಕ್ಕೆಲ್ಲಾ ನೀರು ಸಾಲದು, ಬೆಂಗಳೂರು ಎತ್ತರದಲ್ಲಿದೆ ಆದ್ದರಿಂದ ನೀರು ಹತ್ತುವುದಿಲ್ಲ ಎಂಬ ಸದಸ್ಯರೊಬ್ಬರ ಭಯಕ್ಕೆ ಕಾರಣವಿಲ್ಲ. ನೀರನ್ನು ಬೆಂಗಳೂರಿಗೆ ಕಡಿಮೆ ಖರ್ಚಿನಲ್ಲಿ. ಹೆಚ್ಚಿಗೆ ಗ್ರಾವಿಟೇಷನ್ ಇರುವುದರಿಂದ ಸಾಗಿಸಬಹುದು. ಇದರಿಂದ ವ್ಯವಸಾಯಕ್ಕೆ ಧಕ್ಕೆ ಯಾಗುವುದಿಲ್ಲ. ಬೆಳೆಯುತ್ತಿರುವ ಬೆಂಗಳೂರಿಗೆ ಕಾವೇರಿ ೩ನೇ ಹಂತವು ನೀರು ಪೂರೈಸಲು ಆಗ ದಿರುವುದರಿಂದ ಹೇಮಾವತಿ ಯೋಜನೆಯನ್ನು ಆದಷ್ಟು ಬೇಗ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ನಾನು ಇನ್ನು ಹೆಚು ಮಾತನಾಡುವುದಿಲ್ಲ. ಬೆಂಗಳೂರು ನಗರ ಸಭೆ ಕೆಲಸಕಾರ್ಯಗಳ ಬಗ್ಗೆ ಬಹಳಷ್ಟು ಹೇಳಬೇಕಾಗಿತ್ತು. ಕಾಲಾವಕಾಶ ಕಡಿಮೆ ಇರುವುದರಿಂದ ಕೇವಲ ಒಂದು ವಿಚಾರವನ್ನು ಹೇಳಿ ನನ್ನ ಭಾಷಣ ಮುಗಿಸುತ್ತೇನೆ. ಬೆಂಗಳೂರು ನಗರ ಸಭೆ ನಮ್ಮ ರಾಜ್ಯ ದಲ್ಲೇ ದೊಡ್ಡ ನಗರಸಭೆ. ಅದರ ಕೆಲಸದ ವ್ಯಾಪ್ತಿ ಸರ್ಕಾರದ ಇಲಾಖೆಯ ವ್ಯಾಪ್ತಿಗಿಂತ ಹೆಚ್ಚಾಗಿದೆ. ಆದರೆ ಅಲ್ಲಿ ಕೆಲಸಗಳನ್ನು ಎಷ್ಟು ಸಮರ್ಪಕವಾಗಿ ಆಗಬೇಕಾಗಿತ್ತೋ ಅಷ್ಟು ಸಮರ್ಪಕವಾಗಿ ಮಾಡು ತ್ತಿಲ್ಲ. ಜನಗಳಿಗೆ ತೊಂದರೆಯಾಗುತ್ತಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅಧಿಕಾರಿಗಳು ದಕ್ಷತೆ ಯಿಂದ ಕೆಲಸ ಮಾಡುವುದು ಹೆಚ್ಚಾಗಬೇಕು. ಇದಕ್ಕೆ ಒಂದೇ ಒಂದು ಕೊಡುತ್ತೇನೆ. ನನ್ನ ಕ್ಷೇತ್ರದಲ್ಲಿ ಒಂದು ಚಿಕ್ಕ ಬ್ರಿಡ್ಜ್ ಬಿದ್ದು ಹೋಯಿತು. ಅದು ಬಹಳ ಜನನಿಬಿಡವಾದ ಸ್ಥಳದಲ್ಲಿ ಇತ್ತು, ಬಹಳ ಮುಖ್ಯ ರಸ್ತೆ ಆದ್ದರಿಂದ ಆದಷ್ಟು ಬೇಗ ಕೆಲಸವಾಗಬೇಕಾಗಿತ್ತು. ಆ ಕೆಲಸ ಶುರುವಾಗಿ ಎಂಟೊಂಬತ್ತು ತಿಂಗಳು ಆದರೂ ಕೂಡ ಇನ್ನೂ ಕುಂಠಿತವಾಗಿದೆ. ಎಲ್ಲಾ ಅಧಿಕಾರಿಗಳಿಗೆ ತೋರಿಸಿ ದರೂ ಕೂಡ ಈ ಕೆಲಸವಾಗುತ್ತಿಲ್ಲ. ಇದೊಂದು ನಿದರ್ಶನ ಅಷ್ಟೇ.

ಬಹಳಷ್ಟು ಒಳ್ಳೆಯ ಕೆಲಸಗಳನ್ನು ಅಧಿಕಾರಿಗಳು ಮಾಡಿದ್ದಾರೆ. ೨೫ ವರ್ಷಗಳಿಂದ ಆಗದೇ ಇರುವ ಕೆಲಸಗಳನ್ನು ಅನೇಕ ಕಡೆ ಮಾಡಿದ್ದಾರೆ. ಇಂಟೀರಿಯರ್ ರೋಡ್‌ಗಳಿಗೆ ಅಸ್ಫಾಲ್ಟಿಂಗ್ ಮಾಡಿದ್ದಾರೆ. ಹೀಗೆ ಬೇಕಾದಷ್ಟು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಆದರೆ ದಕ್ಷತೆಯಿಂದ ಬೇಗನೆ ಕೆಲಸ ಮಾಡುವ ಹವ್ಯಾಸ ಬಹಳ ಕಡಿಮೆ ಇದೆ. ಇದನ್ನು ಬೆಳೆಸಿಕೊಂಡರೆ ಹೆಚ್ಚು ಸೌಕರ್ಯಗಳನ್ನು ಕಲ್ಪಿಸಿಕೊಟ್ಟಂತಾಗುತ್ತದೆಂದು ನಾನು ಹೇಳುತ್ತೇನೆ.

ಈ ಕೆಲವು ಮಾತುಗಳನ್ನು ಹೇಳಿ ಈ ಮಾನ್ಯ ಸಚಿವರು ಏನು ಬೇಡಿಕೆಯನ್ನು ಸಭೆಯ ಮುಂದೆ ಮಂಡಿಸಿದ್ದಾರೆ, ಅದಕ್ಕೆ ಬೆಂಬಲ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಸಿರಾ).—ಸನ್ಮಾನ್ಯ ಅಧ್ಯಕ್ಷರೆ ಇವೊತ್ತು ಸದನದ ಮುಂದೆ ಮಂಡಿಸಿರತಕ್ಕಂಥ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆಗೆ ಸಂಬಂಧಪಟ್ಟಂತಹ ಬೇಡಿಕೆಗಳು ಏನು ಇವೆ, ಅದರ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ, ಅದಕ್ಕಾಗಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ಅಭಾರಿಯಾಗಿದ್ದೇನೆ. ಈ ಕಾನೂನಿನ ಒಂದು ಪರಿಮಿತಿ, ಈ ಕಾನೂನಿನ ವ್ಯಾಪ್ತಿ ಮನುಷ್ಯನ ಜೀವನದಲ್ಲಿ ಎಷ್ಟರಮಟ್ಟಿಗೆ ಅಳವಡಿಸಿಕೊಂಡಿದೆ? ಇದರ ಪರಿಮಿತಿ ಏನು? ಈ ಸಮಾಜದ ಏಳಿಗೆ, ಈ ದೇಶದ ಏಳಿಗೆ, ಈ ರಾಜ್ಯದ ಏಳಿಗೆಯ ಬಗ್ಗೆ ಈ ಒಂದು ಕಾನೂನು ಎಷ್ಟರಮಟ್ಟಿಗೆ ತನ್ನ ಪಾತ್ರವನ್ನು ವಹಿಸುತ್ತಿದೆಂಬುದು ಅತಿ ಮುಖ್ಯವಾದುದು. ಇಂತಹ ಒಂದು ಮಹತ್ತರವಾದ ಒಂದು ಅಂಗದ ಜವಾಬ್ದಾರಿಯನ್ನು ಇವೊತ್ತು ನಮ್ಮ ಮಾನ್ಯ ಲಕ್ಷ್ಮೀಸಾಗರ್‌ರವರು ಹೊತ್ತಿದ್ದಾರೆ. ಇಂತಹ ಒಂದು ಬಹಳ ದೊಡ್ಡ ಜವಾಬ್ದಾರಿ ಹೊತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಮನುಷ್ಯನ ಜೀವನದಲ್ಲಿ ಕಾನೂನು ಅತಿಮುಖ್ಯವಾಗಿ ಬೇಕಾಗಿದೆ. ಅಂತಹ ಒಂದು ಕಾನೂನನ್ನು ಈ ಸದನವೇ ಮಾಡಬಹುದು. ನಾವೇ ಮಾಡಬಹುದು, ಯಾರೆ ಮಾಡಬಹುದು, ಅದು ಈ ದೇಶದಲ್ಲಿರತಕ್ಕಂತಹ ಜನತೆಯ ಆಶೋತ್ತರಗಳನ್ನು, ಅವರ ಬೇಡಿಕೆಗಳನ್ನು, ಅವರ ಸಮಸ್ಯೆಗಳನ್ನು ಪ್ರತಿಬಿಂಬಿಸುವಂತಹ ಕಾನೂನು ಆಗಿರಬೇಕು. ಸರ್ವೇಸಾಧಾರಣವಾಗಿರತಕ್ಕಂತಹ ಸಂಸಾರದಲ್ಲೂ ಈ ಕಾನೂನು ಎಷ್ಟು ಅತಿ ಮುಖ್ಯವಾದುದು ಎನ್ನುವುದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾವು ಮಾರುಕಟ್ಟೆಗೆ ಹೋಗುತ್ತೇವೆ. ಅಥವಾ ನಮ್ಮ ಹೆಂಗಸರೂ ಮಾರುಕಟ್ಟೆಗೆ ಹೋಗುತ್ತಾರೆ, ತರಕಾರಿಯನ್ನು ಕೊಂಡುಕೊಂಡು ಬರುತ್ತಾರೆ. ಅದು ಏತಕ್ಕೋಸ್ಕರ ಎಂದರೆ, ನಮ್ಮ ಸಂಸಾರಕ್ಕೋಸ್ಕರ. ಆದರೆ ಕಾನೂನೂ ಏನು ಹೇಳುತ್ತದೆಂದರೆ, ಮಾರುಕಟ್ಟೆಗೆ ಹೋಗಿರತಕ್ಕಂತಹ ಹೆಂಡತಿ ಏಜೆಂಟು ಎಂದು ಹೇಳುತ್ತದೆ. ಅದೇ ರೀತಿ ಒಂದು ಸಂಸಾರದಲ್ಲಿ ನಾಯಿಯೊಂದನ್ನು ಸಾಕಿರುತ್ತಾರೆ. ಆ ರೀತಿ ಸಾಕಿದಂತಹ ನಾಯಿ ಬೇರೆ ಯಾರನ್ನಾದರೂ ಕಚ್ಚುತ್ತದೆ ಎಂದು ಇಟ್ಟುಕೊಳ್ಳೋಣ. ಆ ರೀತಿ ನಾಯಿ ಕಚ್ಚಿದಾಗ ಕಚ್ಚಿಸಿಕೊಂಡಂತಹವನು ಕೇಸು ಹಾಕಿದರೆ, ನಾಯಿಯ ಮಾಲೀಕನ ಮೇಲೆ ಸಿವಿಲ್ ಮೊಕದ್ದಮೆಯನ್ನು ಹೂಡಬಹುದು. ಆ ವ್ಯಕ್ತಿಗೆ ಆಗಿರತಕ್ಕಂತಹ ಡ್ಯಾಮೇಜಸ್‌ಗೆ ಜವಾಬ್ದಾರನಾಗುತ್ತಾನೆಂಬುದು ಪ್ರತಿಯೊಬ್ಬರಿಗೂ ಗೊತ್ತಿರತಕ್ಕಂತಹ ವಿಚಾರ. ಮನೆಯ ಒಳಗಡೆ ಇರಲಿ, ಅಥವಾ ಮನೆಯ ಹೊರಗಡೆ ಇರಲಿ, ಅಥವಾ ರಸ್ತೆಯಲ್ಲಿ ಪಾರ್ಕ್ ಮಾಡುತ್ತಾ ಇರಲಿ, ಈ ಒಂದು ಕಾನೂನಿನ ಜವಾಬ್ದಾರಿ ಅತಿ ಮುಖ್ಯವಾದುದು. ನಮ್ಮ ಜನಜೀವನವನ್ನು ಹಾಗೂ ಇಡೀ ರಾಷ್ಟ್ರದ ಜನ ಜೀವನವನ್ನು ಕೂಡ ಒಂದು ಮಾರ್ಗದರ್ಶನದಿಂದ ಕೊಂಡೊಯ್ಯುತ್ತದೆ. ತಪ್ಪು ದಾರಿಯಲ್ಲಿ ನಡೆದಾಗ ಅದಕ್ಕೆ ರಿಸ್ಟ್ರಿಕ್ಟ್ ಮಾಡುವಂತಹ ಅಧಿಕಾರ ಅದಕ್ಕೆ ಇದೆ. ಈ ರೀತಿಯ ಕಾನೂನುಗಳನ್ನು ಈ ಸದನದಿಂದ ಮಾಡುತ್ತೇವೆ. ಏತಕ್ಕೋಸ್ಕರ ಮಾಡುತ್ತೇವೆ ಎಂದರೆ ಒಳ್ಳೆಯ ರೀತಿಯಾಗಿ ಕೆಲಸಗಳನ್ನು ಮಾಡಬೇಕೆಂಬ ಸದುದ್ದೇಶದಿಂದ ಮಾಡುತ್ತೇವೆ. ಈ ಒಂದು ಕಾನೂನಿನ ಸೌಕರ್ಯ ಎಷ್ಟು ಇದೆ ಎಂಬುದನ್ನು ತಿಳಿಯಪಡಿಸುವಂಥದ್ದು ಮತ್ತು ಅದನ್ನು ಕಾರ್ಯರೂಪಕ್ಕೆ ತರತಕ್ಕಂತಹ ಅಧಿಕಾರಿಗಳಾಗಲಿ, ಮಂತ್ರಿಗಳಾಗಲೀ ಅಥವಾ ಈ ಸದನವೇ ಆಗಲಿ, ಈ ಸದನದಲ್ಲಿರತಕ್ಕಂತಹ ಸದಸ್ಯರೇ ಆಗಿರಲಿ, ಅವರ ಮೇಲೆ ಅತ್ಯಂತ ಮಹತ್ತರವಾದ ಜವಾಬ್ದಾರಿ ಇದೆ. ಇಂತಹ ಭವ್ಯವಾದ ಹಾಗೂ ಮಹತ್ತರವಾದ ಕಾನೂನನ್ನು ಇವೊತ್ತು ಸಾಮಾನ್ಯ ಜನತೆಗೆ ತಿಳಿಯಪಡಿಸದಿದ್ದರೆ ನಿಜವಾಗಿಯೂ ಜನತೆಗೆ ನಾವು ದ್ರೋಹ ಬಗೆದಂತಾಗುತ್ತದೆ ಇಂತಹ ಒಂದು ಮಹತ್ತರವಾದ ಕಾನೂನನ್ನು ಸದನದಲ್ಲಿ ಪಾಸು ಮಾಡಿದರೂ ಕೂಡ ನಾವು ಜನತೆಗೆ ತಿಳುವಳಿಕೆಯನ್ನು ಮಾಡಿಕೊಡುವುದಿಲ್ಲ. ಇದರ ಉಪಯೋಗ ಏನು ಎಂಬುದರ ತಿಳುವಳಿಕೆಯನ್ನು ಅವರಿಗೆ ಕೊಡುವುದಿಲ್ಲ. ತಿಳುವಳಿಕೆ ಕೊಡದಿದ್ದಾಗ ಏನಾದರೂ ತಪ್ಪಾದರೂ ಕೂಡ Ignorance of law has no excuse ಎಂದು ಹೇಳುತ್ತಾರೆ. ಈ ಸದನದಲ್ಲಿ

ನಾವು ಕೆಲವೊಂದು ಕಾನೂನುಗಳನ್ನು ಮಾಡುತ್ತೇವೆ. ಅವುಗಳನ್ನು ಜನತೆಗೆ ಕೊಡುತ್ತೇವೆ. ಅದರಿಂದ ಬರುವಂತಹ ಅನುಕೂಲಗಳನ್ನು ಪಡೆಯುವಂತಹ ಪರಿಜ್ಞಾನ ನಮ್ಮ ಜನತೆಗೆ ಇರುವುದಿಲ್ಲ. ಕಾರಣ ಆ ಒಂದು ವಿದ್ಯೆಯ ಜ್ಞಾನ ಇಲ್ಲದೇ ಇರುವುದರಿಂದ ಈ ರೀತಿಯ ಕಾನೂನುಗಳಿಂದ ಆಗತಕ್ಕಂತಹ ಉಪಯೋಗ ಏನು ಎಂಬುದು ಜನತೆಗೆ ಗೊತ್ತಾಗುವುದಿಲ್ಲ. ನಾವು ಕಾನೂನಿನ ತಿಳುವಳಿಕೆಯನ್ನು ಸಾಮಾನ್ಯ ಜನತೆಯ ಹತ್ತಿರ ಕೊಂಡೊಯ್ಯಬೇಕು. ಅದರ ಬಗ್ಗೆ ಒಂದು ಶಾಸನವಾಗಬೇಕು. ಆ ಶಾಸನದ ಮೂಲಕ ಜನತೆಗೆ ಅದನ್ನು ತಿಳಿಸಬೇಕು. ಬೇಕಾದಷ್ಟು ಫೋರಂಗಳು ಇವೆ. ಫ್ರೀ ಲೀಗಲ್ ಏಡ್ ಅಂತ ಇಟ್ಟುಕೊಂಡಿದ್ದಾರೆ. ಇದರ ವ್ಯಾಪ್ತಿಯನ್ನು ಇನ್ನೂ ಕೂಡ ದೊಡ್ಡದನ್ನಾಗಿ ಮಾಡಬೇಕು. ನಾವು ಯಾವುದೇ ಕಾನೂನುಗಳನ್ನು ಮಾಡಿದಾಗಲೂ ಕೂಡ ಅವುಗಳನ್ನು ಫ್ರೀ ಲೀಗಲ್ ಏಡ್ ಮೂಲಕ ಜನತೆಗೆ ತಿಳಿಸುವಂತಹ ವ್ಯವಸ್ಥೆಯನ್ನು ಇನ್ನು ಮುಂದಾದರೂ ಮಾಡಬೇಕಾಗುತ್ತದೆ. ಅದರ ವ್ಯಾಪ್ತಿಯನ್ನು ವಿಸ್ತರಿಸದೆ ಹೋದರೆ ಬಡ ಜನರ ಆಶೋತ್ತರಗಳನ್ನು ಈಡೇರಿಸಿದಂತಾಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಕಾನೂನಿನ ಅವಶ್ಯಕತೆ ಎಷ್ಟರಮಟ್ಟಿಗೆ ಇದೆ ಎನ್ನತಕ್ಕಂತಹದ್ದು ನಮಗೆಲ್ಲರಿಗೂ ಗೊತ್ತಿದೆ. ಇಲ್ಲಿ ಒಂದು ಉದಾಹರಣೆಯನ್ನು ಹೇಳುವುದಾದರೆ, ಅನ್ ಆಥರೈಸ್ಡ್ ಕಲ್ಟಿವೇಸನ್ ಅನ್ನು ಯಾರ್ಯಾರು ಮಾಡಿದ್ದಾರೆ ಅವರಿಗೆ ಅದನ್ನು ರೆಗ್ಯುಲರೈಸ್ ಮಾಡಬೇಕೆಂಬ ಆದೇಶವನ್ನು ೧೯೮೧ನೇ ಇಸವಿಯಲ್ಲಿ ಹೊರಡಿಸಿದರು. ಅದರ ತಿಳುವಳಿಕೆ ನಮ್ಮ ಜನತೆಗೆ ಇಲ್ಲದೆ ನಮ್ಮ ಒಂದೇ ಒಂದು ತಾಲ್ಲೂಕಿನಲ್ಲಿ ಸುಮಾರು ೫೦೦ ಅರ್ಜಿಗಳು ಪೆಂಡಿಂಗ್‌ನಲ್ಲಿವೆ ಸುಮಾರು ೬ನೇ ಇಸವಿಯಿಂದಲೂ ಅವರು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ. ಅಂದಿನಿಂದಲೂ ಅವರ ಹೆಸರಿನಲ್ಲಿ ಪಹಣಿ ಇವೆ. ಅವರು ಟಿ.ಟಿ.ಯನ್ನು ಇಟ್ಟಿದ್ದಾರೆ. ಅವರಿಗೆ ಈ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದೆ ಅರ್ಜಿಯನ್ನು ಹಾಕಿಕೊಂಡಿಲ್ಲ. ಈ ರೀತಿಯಾಗಿ ಕಾನೂನಿನ ತಿಳುವಳಿಕೆ ಇಲ್ಲದೆ ಬಡ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಯಾವುದೇ ಫೋರಂ ಮೂಲಕವಾದರೂ ಕಾನೂನಿನ ತಿಳುವಳಿಕೆಯನ್ನು ಜನತೆಗೆ ಕೊಡುವಂತಹ ದಿಸೆಯಲ್ಲಿ ನಾವು ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ, Ignorance of law has no excuse ಎಂದು ಆಗಬಾರದು. ನಾವು Ignorance of law has no excuse ಅಂತ ಕೇವಲ ಅಧಿಕಾರಿಗಳಿಗೆ ಹೇಳುತ್ತೇವೆ. ಕಾರಣ ಯಾರು ಈ ಕಾನೂನನ್ನು ರಚನೆ ಮಾಡಿದ್ದಾರೆ, ಅವರಿಗೆ ಆ ಬಗ್ಗೆ ತಿಳುವಳಿಕೆ ಇರಬೇಕೆಂಬ ಉದ್ದೇಶದಿಂದ ಅವರಿಗೆ ಮಾತ್ರ ಇದು ಅನ್ವಯಿಸುತ್ತದೆ. ಸಾಮಾನ್ಯ ಜನರಿಗೆ ಇಗ್‌ನೋರೆನ್ಸ್ ಆಫ್ ಲಾ ವಿಲ್ ನಾಟ್ ಎನ್ ಎಕ್ಸ್‌ಕ್ಯೂಸ್ ಎಂಬುದು ಅನ್ವಯವಾಗುವುದಿಲ್ಲ ಎಂಬುದು ನನ್ನ ಭಾವನೆ. ಈ ಸರ್ಕಾರ ಬಡ ಜನತೆಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿ, ವೃದ್ಧಾಪ್ಯ ವೇತನ, ಅಂಗವಿಕಲರ ವೇತನ, ವಿಧವಾ ವೇತನ ಈ ರೀತಿ ಇನ್ನೂ ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಈ ಯೋಜನೆಗಳನ್ನು ಕೈಬಿಡಬಹುದು. ಅಥವಾ ಮುಂದುವರಿಸಿಕೊಂಡು ಹೋಗಬಹುದು. ಅಥವಾ ಮುಂದೆ ಯಾವುದೋ ಒಂದು ಕಾಲದಲ್ಲಿ ಅವುಗಳನ್ನೆಲ್ಲಾ ಕೈಬಿಡಬೇಕಾದ ಪರಿಸ್ಥಿತಿ ಬರಬಹುದು. ಆದ್ದರಿಂದ ಸೋಷಿಯಲ್ ಸೆಕ್ಯೂರಿಟಿ ಟ್ರಸ್ಟ್ ಅಂತ ಮಾಡಿ, ಆ ಟ್ರಸ್ಟ್‌ನಲ್ಲಿ ಈ ಯೋಜನೆಗಾಗಿ ಕೊಡುವಂತಹ ಹಣವನ್ನೆಲ್ಲಾ ಶೇಖರಣೆ ಮಾಡಿ, ಆ ಒಂದು ಟ್ರಸ್ಟ್ ಮೂಲಕ ಈ ಎಲ್ಲಾ ಕಾರ್ಯಕ್ರಮಗಳು ನಡೆಯುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಇದು ಕೇವಲ ಒಂದು ಸರ್ಕಾರ ಇದ್ದಾಗ ಜಾರಿಗೆ ತಂದಂತಹ ಕಾರ್ಯಕ್ರಮವನ್ನು ಮತ್ತೊಂದು ಸರ್ಕಾರ ಬಂದಾಗ ತೆಗೆದು ಹಾಕುವಂತಹ ವ್ಯವಸ್ಥೆಯಾಗಬಾರದು. ಯಾವುದೇ ಒಂದು ಕಾಲದಲ್ಲಾದರೂ ಸಮಸ್ಯೆಯನ್ನು ಒಂದೇ ದೃಷ್ಟಿ ಕೋನದಲ್ಲಿ ನೋಡುವಂತಾಗಬೇಕು. ಕೆಲವು ಲೇಬರರ್ಸ್ ಇದ್ದಾರೆ, ಅವರಿಗೆ ಹಲವಾರು ಸೌಲಭ್ಯಗಳನ್ನು ಕೊಟ್ಟಿದ್ದಾರೆ.

ಕೈಗಾರಿಕಾ ಕಾರ್ಮಿಕರು ಏನಿದ್ದಾರೆ ಅವರಿಗೆ ನಾವು ಹಲವಾರು ಸೌಲಭ್ಯಗಳನ್ನು ಕೊಟ್ಟಿದ್ದೇವೆ. ಆದರೆ ಕೃಷಿ ಕಾರ್ಮಿಕರಿಗೆ ಕೊಟ್ಟಿಲ್ಲ. ಅವರ ಸಂಘಟನೆಗೆ ಅವಕಾಶ ಮಾಡಿಕೊಟ್ಟಿಲ್ಲ. ಸಂಘಟನೆ ಹೇಗೆ ಮಾಡಬೇಕೆಂಬ ಮಾರ್ಗದರ್ಶನ ಮಾಡಿಲ್ಲ. ಆದೇ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಹಲವಾರು ಸೌಲಭ್ಯಗಳು ಇವೆ. ನಿವೃತ್ತರಾದ ಮೇಲೂ ಕೆಲವು ಸೌಲಭ್ಯಗಳು ಇವೆ. ಅದೇ ಕೃಷಿ ಕಾರ್ಮಿಕರಿಗೆ ಇಡೀ ದೇಶದ ಒಂದು ಭಾರವನ್ನು ಹೊತ್ತಿರತಕ್ಕ ಅವರಿಗೆ ಯಾವ ಸೌಲಭ್ಯಗಳನ್ನು ನಾವು ಒದಗಿಸಿಲ್ಲ. ಅವರಿಗೂ ನಿವೃತ್ತಿ ವಯಸ್ಸನ್ನು ಗೊತ್ತುಮಾಡಿ, ಮತ್ತು ನಿವೃತ್ತರಾದ ಮೇಲೆ ಒಳ್ಳೆಯ ಸೌಲಭ್ಯಗಳನ್ನು ಕಲ್ಪಿಸಿಕೊಡಿ, ಒಳ್ಳೆಯ ವಾತಾವರಣವನ್ನು ಕಲ್ಪಿಸಿಕೊಡಿ. ಬಡವರ ಮಕ್ಕಳನ್ನು, ಅನಾಥ ಮಕ್ಕಳನ್ನು ಮುದುಕರನ್ನು ಅಂಗ ವಿಕಲರನ್ನು ಸಮಾಜದಲ್ಲಿ ದುರ್ಬಲವಾಗಿ

ರುವವರನ್ನು ಸೋಷಿಯಲ್ ಸೆಕ್ಯೂರಿಟಿ ಟ್ರಸ್ಟಿಗೆ ಸೇರಿಸಿ ಸರ್ಕಾರ ಅದಕ್ಕೆಬೇಕಾದ ಸಹಾಯಧನವನ್ನು ಕೊಡಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ. ಇವತ್ತು ಕೋರ್ಟುಗಳಲ್ಲಿ ಕೇಸುಗಳ ಪೆಂಡೆನ್ಸಿ ಬಹಳ ಇದೆ. ಪೆಂಡೆನ್ಸಿ ಬಗ್ಗೆ ಲಕ್ಷ್ಮೀಸಾಗರ್‌ರವರು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಸಿವಿಲ್ ಕೋರ್ಟಿನಲ್ಲಿ, ಹೈಕೋರ್ಟಿನಲ್ಲಿ ಹೀಗೆ ಯಾವ್ಯಾವ ಕೋರ್ಟಿನಲ್ಲಿ ಎಷ್ಟೆಷ್ಟು ಕೇಸುಗಳು ಪೆಂಡಿಂಗ ಇವೆ ಎಂಬ ಬಗ್ಗೆ ಒಂದು ಪಟ್ಟಿಯನ್ನೇ ಕೊಟ್ಟಿದ್ದಾರೆ. ಅವರು ವಕೀಲರಾಗಿದ್ದವರು, ಆದ್ದರಿಂದ್ ಅವರಿಗೆ ಇದರ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ. ಈ ಪೆಂಡೆನ್ಸಿ ಕೇಸುಗಳು ಎಷ್ಟು ಜಾಸ್ತಿಯಾಗುತ್ತವೆ ಅಷ್ಟೇ ನಾವು ಬಡಜನರಿಗೆ ಇನ್‌ಜಸ್ಟೀಸ್ ಮಾಡುತ್ತಿದ್ದೇವೆಂದು ನನ್ನ ಭಾವನೆ. ಹೇಗೆಂದರೆ, ನಾವು ಇದನ್ನು ಎಷ್ಟು ನಿಧಾನ ಮಾಡುತ್ತೇವೆ. ಅಷ್ಟೂ ಒಬ್ಬ ಕ್ಲೈಯಿಂಟ್ ಮಾಹಿತಿ ಒದಗಿಸುವುದರಲ್ಲಿ ನಿಧಾನವಾಗುತ್ತದೆ. ತಕ್ಷಣ ಮಾಹಿತಿ ಒದಗಿಸಬೇಕೆಂದರೆ ಒದಗಿಸುತ್ತಾನೆ. ಕೇಸು ಡಿಲೇ ಆದಾಗ ಮಾಹಿತಿ ಒದಗಿಸತಕ್ಕ ಅವಕಾಶವನ್ನು ಆತ ಕಳೆದುಕೊಂಡಿರುತ್ತಾನೆ. ಉದಾಹರಣೆಗೆ ಸಮನ್ಸ್ ಕಳುಹಿಸುತ್ತೇವೆ. ಅದರಲ್ಲಿ ಹಲವಾರು ಪ್ರೊಸೀಜರ್‌ಗಳನ್ನು ಇಟ್ಟುಕೊಂಡಿದ್ದೇವೆ. ಅಮೀನ್ ಮೂಲಕ, ಟಾಂಟಾಂ ಮೂಲಕ, ರಿಜಿಸ್ಟರ್ ಪೋಸ್ಟ್ ಮೂಲಕ, ಪತ್ರಿಕೆಯಲ್ಲಿ ಪ್ರಕಟಣೆ ನೀಡುವ ಮೂಲಕ ಸಮನ್ಸ್ ಮಾಡುತ್ತೇವೆ. ಈ ಪ್ರೊಸೀಜರಲ್ ಆಸ್ಪೆಕ್ಟನ್ನು ಕಂಡೋನ್ ಮಾಡಬೇಕಾಗಿದೆ. ಅಮೀನ್‌ನ ಮೂಲಕ ಕಳುಹಿಸುವುದರಲ್ಲಿ ಅರ್ಥವಿಲ್ಲ. ರಿಜಿಸ್ಟರ್ಡ್ ಪೋಸ್ಟ್ ಮಾಡಬಹುದು. ನಂತರ ಪೇಪರ್ ಪಬ್ಲಿಸಿಟಿ ಕೊಡಬಹುದು ಅಥವಾ ಟಾಂಟಾಂ ಮಾಡಬಹುದು. ಈ ರೀತಿಯಾದ ಪ್ರೊಸೀಜರಲ್ ಆಸ್ಪೆಕ್ಟ್‌ನಿಂದ ಕ್ಲೈಯಂಟ್ಸಿಗೆ ಬಹಳ ತೊಂದರೆಯಾಗುತ್ತಿದೆ. ಅವರು ಸ್ಟ್ಯಾಂಪ್ ಫೀಜ್ ಕೊಡುತ್ತಾರೆ. ಆದ್ದರಿಂದ ಅವರಿಗೆ ಯಾವ ರೀತಿಯ ತೊಂದರೆ ಆಗಬಾರದೆಂದು ಹೇಳುತ್ತೇನೆ. ಕೋರ್ಟ್‌ಗಳಲ್ಲಿ ಐ.ಎಸ್. ಹಾಕಿಕೊಂಡು ಕುಳಿತುಕೊಳ್ಳುತ್ತಾರೆ. ವರ್ಬಲ್ ಇಂಟರ್‌ಪ್ರಿಟೇಷನ್ ಹಲ್ ಮಾಂಡೇಟರಿ ಮೇಲೆ ತಿಂಗಳಾನುಗಟ್ಟಲೆ ವಾದ ಮಾಡುತ್ತಾರೆ. ಕೇಸು ಇರತಕ್ಕದ್ದೇ ಬೇರೆ, ತೀರ್ಮಾನ ಮಾಡತಕ್ಕದ್ದೇ ಬೇರೆ ಆಗುತ್ತದೆ. ಅದಕ್ಕೆ ತೆಗೆದುಕೊಳ್ಳತಕ್ಕ ಕಾಲ ೧೫–೨೦ ನಿಮಿಷ ಅಷ್ಟೆ. ಆದರೆ ಐ.ಎಸ್. ಹಾಕಿಕೊಂಡು ಕುಳಿತುಕೊಳ್ಳುವುದರಿಂದ ಕಾಲದ ವ್ಯಯವಾಗುತ್ತದೆ. ಮೇಯಿನ್ ಕೇಸ್ ಬಗ್ಗೆ ಕಾಲಮಿತಿಯನ್ನು ಕಡಿಮೆ ಮಾಡುತ್ತಾರೆ. ಈ ರೀತಿ ಐ.ಎಸ್. ಮತ್ತಿತರ ಅಡಚಣೆಗಳು ಏನು ಬರುತ್ತವೆ ಅವನ್ನು ಓರಲ್ ಆಗಿ ಸೆಟ್‌ರೈಟ್ ಮಾಡಬೇಕು. ಓರಲ್ ಆಗಿ ಡಿಸೈಡ್ ಮಾಡತಕ್ಕ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕೆಂದು ತಮ್ಮ ಮೂಲಕ ಕಾನೂನು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇಲ್ಲದ್ದರೆ ಇದರಿಂದ ಬಹಳ ಡಿಲೇ ಆಗುತ್ತದೆ. ಇವತ್ತು ಕೋರ್ಟಿನಲ್ಲಿ ಸ್ಟ್ಯಾಂಪ್ ಫೀಸ್ ತೆಗೆದುಕೊಳ್ಳುತ್ತಾರೆ ಆದರೆ ಕೋರ್ಟ್‌ನ ಪ್ರಿಮಿಸಸ್‌ನಲ್ಲಿ ಕ್ಲೈಯಂಟ್ಸ್‌ಗೆ ಬೇಕಾದ ಸೌಕರ್ಯಗಳನ್ನು ಮಾಡಿ ಕೊಟ್ಟಿಲ್ಲ. ಅವರು ಕೋರ್ಟಿಗೆ ಬಂದಾಕ್ಷಣ ಅಪರಾಧಿಗಳಲ್ಲ. ಎವಿಡೆನ್ಸ್ ಕೊಡುವುದಕ್ಕೆ ಮತ್ತೊಂದಕ್ಕೆ ಕೋರ್ಟ್ ಹಾಲಿಗೆ ಬಂದಾಗ ಕುಳಿತುಕೊಳ್ಳುವುದಕ್ಕೆ ನಿಂತುಕೊಳ್ಳುವುದಕ್ಕೆ ಯಾವುದೇ ರೀತಿಯ ಸೌಕರ್ಯ ಇಲ್ಲ. ಮಳೆ ಬಂದರೆ ಎಲ್ಲರೂ ಕೋರ್ಟ್ ಹಾಲಿಗೆ ನುಗ್ಗುತ್ತಾರೆ. ಇದರಿಂದ ಕೋರ್ಟ್‌ಗೆ ಸ್ಯಾಂಕ್ಟಿಟಿ ಇರುವುದಿಲ್ಲ. ಅವರಿಗೆ ದೊಡ್ಡ ಸೌಲಭ್ಯ ಒದಗಿಸಿಕೊಡಿ ಎಂದು ಕೇಳುವುದಿಲ್ಲ. ಲ್ಯಾವೆಟ್ರಿ, ಮಳೆ-ಬಿಸಿಲು ಬಂದಾಗ ಕುಳಿತುಕೊಳ್ಳುವುದಕ್ಕೆ ಷೆಲ್ಟರ್. ಅವರು ತಂದ ಊಟವನ್ನು ಮಾಡುವುದಕ್ಕೆ ಮಿನಿಮಂ ಫೆಸಿಲಿಟೀಸ್ ಅದನ್ನು ಕೋರ್ಟ್ ಪ್ರಿಮಿಸಸ್‌ನಲ್ಲಿ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು Accident Claims Tribunal ಎಂದು ಮಾಡುತ್ತಿದ್ದಾರೆ. ಅದರ ಕೆಲಸಗಳನ್ನು ನಾವು ಇವೊತ್ತು ಜಿಲ್ಲಾ ನ್ಯಾಯಾಧೀಶರುಗಳಿಗೆ ಕೊಟ್ಟಿದ್ದೇವೆ. ಅವರು ತಮ್ಮ ಕೆಲಸದ ಜೊತೆಗೆ ಇದರ ಕೆಲಸಗಳನ್ನು ಮಾಡಬೇಕಾಗುತ್ತದೆ. ಆದ್ದರಿಂದ, ಇದನ್ನು ವಿಭಾಗ ಮಾಡಿ ಒಬ್ಬ ಅಧಿಕಾರಿಯನ್ನು ನೇಮಿಸಿದರೆ ಒಳ್ಳೆಯದು ಅದರಿಂದ ಬೇರೆ ಕೇಸುಗಳನ್ನು ಇತ್ಯರ್ಥ ಮಾಡಬಹುದೆಂದು ತಮ್ಮ ಮೂಲಕ ಕಾನೂನು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇವೊತ್ತು ಇರತಕ್ಕ ಕೋರ್ಟ್ ಫೀ ಅನ್ನು ಕಂಪ್ಲೀಟ್ ಆಗಿ ಎಕ್ಸಮ್ಟ್ ಮಾಡಬೇಕು. ಅದು ಆಗದೆ ಇದ್ದರೆ ಮಹಾರಾಷ್ಟ್ರದಲ್ಲಿರುವ ಹಾಗಾದರೂ ಮಾಡಬೇಕು, ಅಲ್ಲಿ ಒಂದು ಮಿತಿ ಇದೆ. ಸೂಟ್ ವ್ಯಾಲ್ಯೂ ಎಷ್ಟೇ ಆಗಿರಲಿ ಆ ಮಿತಿಯಿಂದ ಮೇಲೆ ಹೋಗಬಾರದು ಸೂಟ್ ವ್ಯಾಲ್ಯೂ ೫ ಸಾವಿರ ರೂಪಾಯಿಗಳು ಆದರೆ ಕೋರ್ಟ್ ಫೀ ಸ್ಟ್ಯಾಂಪ್ ೧೦೦-೨೦೦ ರೂಪಾಯಿಗಳ ಮೇಲೆ ಹೋಗಬಾರದೆಂದು ಮಾಡಿದ್ದಾರೆ. ಆದರೆ ನಮ್ಮಲ್ಲಿ ಆ ರೀತಿ ಇಲ್ಲ. ಸೂಟ್ ವ್ಯಾಲ್ಯು ಎಷ್ಟೆಷ್ಟಿರುತ್ತದೋ ಅಷ್ಟೂ ಕೋರ್ಟ್ ಫೀ ಕೊಡಬೇಕಾಗುತ್ತದೆ. ಆದ್ದರಿಂದ, ಇಲ್ಲಿ ಮಿನಿಮಂ ಮತ್ತು ಮಾಕ್ಸಿಮಂ ರೇಟನ್ನು ಗೊತ್ತು ಮಾಡಬೇಕಾಗುತ್ತದೆ. ಸೂಟ್ ವ್ಯಾಲ್ಯು ಎಷ್ಟೇ ಆಗಿರಲಿ

ಅದನ್ನು ಗೊತ್ತು ಮಾಡುವುದು ಒಳ್ಳೆಯದು. ಈಗಲೂ ನಮಗೆ ಲಿಟಿಗೇಷನ್ ಬಹಳ ಕಾಸ್ಟ್ಲಿ ಆಗಿದೆ. ಎಷ್ಟು ದುಬಾರಿ ಆಗಿದೆ ಎಂದರೆ ಅದನ್ನು ಅಳೆಯುವುದಕ್ಕೆ ಸಾಧ್ಯವಿಲ್ಲ. ಈ ದಿಸೆಯಲ್ಲಿ ಸ್ವಲ್ಪವಾದರೂ ನಮ್ಮ ಜನರಿಗೆ ರಿಲೀಫ್ ಕೊಡಬಹುದೆಂಬ ಭಾವನೆಯಿಂದ ಕಾನೂನು ಮಂತ್ರಿಗಳಿಗೆ ಈ ಮಾತನ್ನು ಹೇಳುತ್ತಿದ್ದೇನೆ. ಮಹಾರಾಷ್ಟ್ರದಲ್ಲಿ ಅಳವಡಿಸಿರುವ ಪದ್ಧತಿಯನ್ನು ತಾವೂ ಇಲ್ಲಿ ಅಳವಡಿಸಿಕೊಳ್ಳಬಹುದು. ಉದಾಹರಣೆಗೆ ನಾವು ನ್ಯೂಸೆನ್ಸ್ ಕೇಸ್ ಹಾಕುತ್ತೇವೆ. ಅದು ಟ್ರಿಬ್ಯುನಲ್‌ನಲ್ಲಿ ತೀರ್ಮಾನವಾಗುತ್ತದೆ. ಆದರೆ ಅದಕ್ಕೆ ಡ್ಯಾಮೇಜ್ ಕ್ಲೈಂ ಮಾಡುವಾಗ ೨೦–೩೦ ಸಾವಿರ ರೂಪಾಯಿಗಳನ್ನು ಕ್ಲೈಂ ಮಾಡುತ್ತೇವೆ. ಅದಕ್ಕೆ ವ್ಯಾಲ್ಯೂಯೇಷನ್ ಕಟ್ಟದೆ ಕ್ಲೈಂ ಮಾಡಬಾರದು. ಈ ರೀತಿ ಸನ್ನಿವೇಶಗಳು ಬಹಳ ಇವೆ, ಆದ್ದರಿಂದ, ಕೋರ್ಟಿನಲ್ಲಿ ಈ ರೀತಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದರಿಂದ ಕ್ಲೈಯಿಂಟ್ಸ್‌ಗೆ ರಿಲೀಫ್ ಕೊಟ್ಟಂತಾಗುತ್ತದೆ. ರೆವಿನ್ಯೂ ಕೋರ್ಟುಗಳು ಏನಿವೆ ಅಲ್ಲಿ ತಹಶೀಲ್ದಾರರಿಗೆ ಜುಡಿಷಿಯಲ್ ಪವರ್ ಇದೆ, ಅಸಿಸ್ಟೆಂಟ್ ಕಮೀಷನರಿಗೆ ಜುಡಿಷಿಯಲ್ ಪವರ್ ಇದೆ, ಡಿವಿಜನಲ್ ಕಮೀಷನರಿಗೆ ಜುಡಿಷಿಯಲ್ ಪವರ್ ಇದೆ. ಅವರನ್ನು ಇವೊತ್ತು ಸಂಪೂರ್ಣವಾಗಿ ಡೆವಲಪ್‌ಮೆಂಟ್ ವರ್ಕ್ಸ್‌ಗೆ ಉಪಯೋಗಿಸಿಕೊಳ್ಳಬೇಕು ಆದ್ದರಿಂದ, ಅವರ ಜುಡಿಷಿಯಲ್ ವರ್ಕ್ ಏನಿದೆ ಅದನ್ನು ಸಿವಿಲ್ ಸೆಕ್ಷನ್ನಿಗೆ ವಹಿಸಿ ಸಿವಿಲ್ ಕೋರ್ಟ್‌ಗಳಲ್ಲಿ ತೀರ್ಮಾನಿಸತಕ್ಕ ಒಂದು ಪದ್ಧತಿಯನ್ನು ಅಳವಡಿಸಬೇಕೆಂದು ಕಾನೂನು ಸಚಿವರಿಗೆ ಸಲಹೆ ಮಾಡುತ್ತೇನೆ. ಇಲ್ಲದಿದ್ದರೆ ಇದರಿಂದ ಬಹಳ ತೊಂದರೆಯಾಗುತ್ತದೆ. ಎ.ಸಿ., ಡಿ.ಸಿ. ಯವರಿಗೆ ಅನೇಕ ಕಾರ್ಯಕ್ರಮಗಳು ಬರುತ್ತಿರುತ್ತವೆ.

೫.೦೦ ಪಿ. ಎಂ.

ಅಭಿವೃದ್ಧಿ ಕಾರ್ಯಗಳಿಗೆ ಅವರ ಗಮನವನ್ನು ಡಿವೋಟ್ ಮಾಡಲಿ. ಜ್ಯುಡಿಷಿಯಲ್ ಮ್ಯಾಟರ್ಸ್ ಎಂದರೆ ಕಾನೂನು ಪರಿಣತರು ತೀರ್ಮಾನ ಮಾಡತಕ್ಕ ವಿಚಾರಗಳು ಇರುವುದರಿಂದ ಅವನ್ನೆಲ್ಲಾ ಪೂರ್ತಿಯಾಗಿ ಸಿವಿಲ್ ಕೋರ್ಟಿನ ಜ್ಯುರಿಸ್ಡಿಕ್ಷನ್‌ಗೆ ಒಳಪಡಿಸಿ ಅಲ್ಲೇ ತೀರ್ಮಾನವಾಗುವಂತೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, ಫ್ಯಾಮಿಲಿ ಕೋರ್ಟ್ಸ್ ಬಗ್ಗೆ ಹೇಳಬೇಕೆಂದರೆ ಇದು ಬಹಳ ಮುಖ್ಯವಾದುದು. ನಮ್ಮ ದೇಶದಲ್ಲಿ ೫೦ ಪರ್ಸೆಂಟ್ ಮಹಿಳೆಯರಿದ್ದಾರೆ ೫೦ ಪರ್ಸೆಂಟ್ ಪುರುಷರಿದ್ದಾರೆ. ಆದ್ದರಿಂದ ಫ್ಯಾಮಿಲಿ ಕೋರ್ಟ್ ಮಾಡುವಾಗ ಮಹಿಳಾ ನ್ಯಾಯಾಧೀಶರನ್ನೇ ಹೆಚ್ಚಾಗಿ ಅಪಾಯಿಂಟ್ ಮಾಡಬೇಕು. ಕರ್ನಾಟಕದಲ್ಲಿ ಮಹಿಳೆಯರು ನ್ಯಾಯಾಧೀಶರೇ ಇಲ್ಲ. ಒಬ್ಬರು ನ್ಯಾಯಾಧೀಶರು ಮಾತ್ರ ಇರಬಹುದು. ಅದೂ ಸಿವಿಲ್ ಜಡ್ಜ್ ಕೆಪಾಸಿಟಿಯಲ್ಲಿ ಇದ್ದಾರೆ. ಅದು ಬಿಟ್ಟರೆ ನನಗೆ ತಿಳಿದ ಮಟ್ಟಿಗೆ ಬೇರೆ ಮಹಿಳಾ ನ್ಯಾಯಾಧೀಶರೇ ಇಲ್ಲ. ಮಹಿಳೆಯರಿಗೆ ಪ್ರಾತಿನಿಧ್ಯ ಕೊಟ್ಟಿಲ್ಲ. ನಮ್ಮ ದೇಶದಲ್ಲಿ ೫೦ ಪರ್ಸೆಂಟ್ ಮಹಿಳೆಯರು ಪ್ರತಿನಿಧಿಸುತ್ತಿದ್ದರೂ ಅವರಿಗೆ ಪ್ರಾತಿನಿಧ್ಯತೆ ಕೊಟ್ಟಿಲ್ಲ. ಮೆಟ್ರಿಮೋನಿಯಲ್ ಕೇಸಸ್, ಡೈವೋರ್ಸ್ ಕೇಸಸ್ restitution of conjugal rights ಇವುಗಳನ್ನು ಫ್ಯಾಮಿಲಿ ಕೋರ್ಟ್ಸ್‌ಗೆ ವಹಿಸಿಕೊಡಬೇಕು. ಇದರಿಂದ ಉತ್ತಮವಾಗಿ ದಕ್ಷತೆಯಿಂದ ಕೆಲಸ ಕಾರ್ಯಗಳು ನಡೆಯುತ್ತವೆ ಎಂಬುದನ್ನು ತಮ್ಮ ಮೂಲಕ ಕಾನೂನು ಮಂತ್ರಿಗಳಿಗೆ ಹೇಳಬಯಸುತ್ತೇನೆ. Pre-trial adjudication ಎಂದು ಹಿಂದೆ ಹಳೇ ಪದ್ಧತಿ ಇತ್ತು. ಪಂಚಾಯಿತಿ ಮೂಲಕ ಅಥವಾ ಬೇರೆ ಯಾವುದೇ ಸ್ವಂತ ಏಜೆನ್ಸಿ ಮೂಲಕ ಕೆಲವು ತೀರ್ಮಾನಗಳನ್ನು ಮಾಡಿಕೊಳ್ಳುತ್ತಿದ್ದರು. ಆದರೆ ನಾನು ಅದೇ ಪದ್ಧತಿಯನ್ನು ಜಾರಿಗೆ ತನ್ನಿ ಎಂದು ಹೇಳುವುದಿಲ್ಲ. ಪ್ರೀ ಟ್ರಯಲ್ ಅಡ್ಜುಡಿಕೇಷನ್ ಎಂದರೆ ನ್ಯಾಯಾಧೀಶರು ಯಾರು ಆ ಕೇಸನ್ನು ತೀರ್ಮಾನ ಮಾಡುವುದಕ್ಕೆ ಕುಳಿತುಕೊಳ್ಳುತ್ತಾರೋ ಅವರು ಪ್ರಿ ಟ್ರಯಲ್ ಅಡ್ಜುಡಿಕೇಷನ್‌ನಲ್ಲಿ ಅಪ್ಲಿಕೇಷನ್ ತೆಗೆದುಕೊಂಡು ಕಾಂಪ್ರಮೈಸ್ ಮಾಡುವುದಕ್ಕಾಗುತ್ತದೋ ಅಥವಾ ತೀರ್ಮಾನವಾದರೆ ಹೇಗಾಗಬಹುದು ಎಂಬ ಬಗ್ಗೆ ತಿಳುವಳಿಕೆ ಕೊಟ್ಟರೆ ಕೇಸುಗಳು ಬೇಗ ಇತ್ಯರ್ಥವಾಗುವುದಕ್ಕೆ ಅವಕಾಶವಾಗಬಹುದು. ಪ್ರೀ ಟ್ರಯಲ್ ಅಡ್ಜುಡಿಕೇಷನನ್ನು ಇದೇ ನ್ಯಾಯಾಧೀಶರಿಂದ ಮಾಡಿ ಅಥವಾ ಬೇರೆ ಏಜೆನ್ಸಿ ಮೂಲಕ ಮಾಡಿ ಒಟ್ಟಿನಲ್ಲಿ ಪ್ರೀ ಟ್ರಯಲ್ ಅಡ್ಜುಡಿಕೇಷನ್ ಇರಬೇಕು ಎಂಬುದು ನನ್ನ ಭಾವನೆ. ಮತ್ತು ರಿಟೈರ್ಡ್ ಜಡ್ಜ್‌ಗಳನ್ನು ಲೀಗಲ್ ಅಡ್ವೈಸರ್ ಆಗಿ ಕೆಲವರನ್ನು ಅಪಾಯಿಂಟ್ ಮಾಡುತ್ತಾರೆ. ಇದರಿಂದ ಹೊಸದಾಗಿ ಹೋಗಿರತಕ್ಕವರಿಗೆ ಬಹಳ ಅನ್ಯಾಯವಾಗುತ್ತಿದೆ. ರಿಟೈರ್ಡ್ ಆದ ಜಡ್ಜ್‌ಗಳು ಹೈಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡುತ್ತಾರೆ. ನಂತರ ಬೆಂಚ್ ಕ್ಲೈಮ್ ಮಾಡುತ್ತಾರೆ ಇದರಿಂದ ಮುಂದೆ ಬರತಕ್ಕ ತರುಣರಿಗೆ ಅನ್ಯಾಯವಾಗುತ್ತಿದೆ. ಬೇಕಾದರೆ ರಿಟೈರ್ಡ್ ಜಡ್ಜ್‌ಗಳು ಹೈಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡಿಕೊಳ್ಳಲಿ. ಆದರೆ ಅವರನ್ನು ಬೇರೆ ಕಡೆ ಲೀಗಲ್ ಅಡ್ವೈಸರ್

ಆಗಿ ಅಪಾಯಿಂಟ್ ಮಾಡಬಾರದು. ಈಗ ಫಸ್ಟ್ ಅಪಲೇಟ್‌ನಲ್ಲಿ ಕೇಸನ್ನು ರಿಮ್ಯಾಂಡ್ ಮಾಡುತ್ತಿದ್ದಾರೆ ಇದರ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ ಫಸ್ಟ್ ಅಪಲೇಟ್‌ನಲ್ಲಿ ರಿಮ್ಯಾಂಡ್ ಮಾಡುವುದರ ಬದಲು ಫಸ್ಟ್ ಅಪಲೇಟ್ ಕೋರ್ಟಿನಲ್ಲಿ ಟ್ರಯಲ್ ವರ್ಕ್ ಮಾಡಲಿ. ಯಾವ ಪಾಯಿಂಟ್ ಮೇಲೆ ಅವರು ರಿಮ್ಯಾಂಡ್ ಮಾಡುವುದಕ್ಕೆ ಹೊರಡುತ್ತಾರೋ ಅದೇ ಪಾಯಿಂಟ್ ಮೇಲೆ ಟ್ರಯಲ್ ನಡೆಸಿ ತೀರ್ಮಾನ ಕೊಡಲಿ. ಮತ್ತೆ ರಿಮ್ಯಾಂಡ್ ಮಾಡಿ ಎಲ್ಲಾ ಪಾಯಿಂಟ್ಸ್ ಮೇಲೆ ಎವಿಡೆನ್ಸ್ ಮಾಡುವುದಕ್ಕೆ ಪ್ರೊಸೀಜರಲ್ ಡಿಲೇ ಆಗುತ್ತದೆ. ಆದ್ದರಿಂದ First Appellate Courts shoule be vested with the trial of cases on particular facts. ಅದನ್ನು ದಯಮಾಡಿ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ತಾವು ಬೇಗ ಮುಗಿಸಿಬಿಡಿ.

ಶ್ರೀ ಮೂಡಲಗಿರಿಯಪ್ಪ.— ಇಷ್ಟು ಹೇಳಿ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ),— ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಮೂರು ಮುಖ್ಯ ಶಾಖೆಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಬಗ್ಗೆ ನಡೆಯುತ್ತಿದೆ. ಮೊದಲು ಸಂಸದೀಯ ವ್ಯವಹಾರದಿಂದ ಶುರು ಮಾಡಿಕೊಂಡು ಆಮೇಲೆ ನಗರಾಭಿವೃದ್ಧಿಗೆ ಬರಬೇಕೆಂದು ನಾನು ಯೋಚನೆ ಮಾಡಿದ್ದೇನೆ. ನಮ್ಮ ಸಂಸದೀಯ ವ್ಯವಹಾರಗಳ ಬಗ್ಗೆ ಹೇಳಬೇಕು ಎಂದರೆ ನನಗಾದರೂ ಕಂಡುಬರುವುದು ಶಾಸಕಾಂಗ ಮತ್ತು ಕಾರ್ಯಾಂಗವನ್ನು ಬೇರೆ ಮಾಡಿರುವುದು ಒಳ್ಳೆಯ ಕೆಲಸವಾಗಿದೆ. ಪ್ರಜಾಪ್ರಭುತ್ವ ಪದ್ಧತಿ ಆಧಾರದ ಮೇಲೆ ಇದನ್ನು ಮುಂದುವರೆಸಿಕೊಂಡು ಹೋಗುವ ಪ್ರಯತ್ನ ಏನು ನಡೆದಿದೆ ಅದು ಬಹಳ ಒಳ್ಳೆಯ ಕೆಲಸ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಆದರೆ ಆ ಚೌಕಟ್ಟಿನಲ್ಲಿ ನಾವು ಕೆಲಸ ಮಾಡಿಕೊಂಡು ಬರಬೇಕಾದರೆ ಒಂದೇ ಒಂದು ಅಂಶವನ್ನು ತಮಗೆ ಹೇಳಬೇಕಾಗಿದೆ. ಹಿಂದೆ ನಾನು ಕಳೆದ ಬಾರಿ ಮಾತನಾಡಿದಾಗಲೂ ಸಹ ಈ ಮನೆಯಲ್ಲಿರುವಂಥ ರಿಪೋರ್ಟರ್ಸ್ ಬಗ್ಗೆ ಮಾತನಾಡಿದ್ದೆ. ಇವರು ಬೆಳಿಗ್ಗೆಯಿಂದ ರಾತ್ರಿ ೯ರ ತನಕ ಕೆಲಸ ಮಾಡಬೇಕು. ಇವರಿಗೆ ಸರಿಯಾದ ಗ್ರೇಡ್ ಕೊಟ್ಟಿಲ್ಲ. ಇವರಿಗೆ ಸರಿಯಾದಂಥ ಗ್ರೇಡ್‌ಗಳನ್ನು ಪದೇ ಪದೇ ನಾನು ಈ ಸಭೆಯಲ್ಲಿ ಒತ್ತಾಯ ಮಾಡುತ್ತಿದ್ದೆ. ಆಗಲಿ ಎಂದು ಮಂತ್ರಿಗಳು ಒಪ್ಪಿಕೊಂಡಿದ್ದರು. ಈ ಮನೆಯಲ್ಲೂ ಒಪ್ಪಿಕೊಂಡಿದ್ದರು. ಆ ಕಡೆ ಮೇಲ್ಮನೆಯಲ್ಲೂ ಕೂಡ ಒಪ್ಪಿಕೊಂಡಿದ್ದರು. ಇವರನ್ನು ಕ್ಲಾಸ್–ಬಿ ಎಂದು ಕನ್‌ಸಿಡರ್ ಮಾಡಬೇಕು ಎಂದು ನಾನು ಹೇಳಿದ್ದೆ. ಬೇರೆ ಕಡೆ ಇವರನ್ನು ಗ್ರೇಡ್–೨ ಎಂದು ಕನ್‌ಸಿಡರ್ ಮಾಡುತ್ತಾರೆ. ನಮ್ಮಲ್ಲಿ ಕ್ಲಾಸ್–ಬಿ ಎಂದು ಹೇಳುತ್ತಾರೆ. ವಿಧಾನಮಂಡಲದ ವರದಿಗಾರರಿಗೆ ೧೦೫೦ ರಿಂದ ೧೯೫೦ ರೂಪಾಯಿಗಳ ಗ್ರೇಡ್ ಕೊಡಬೇಕು. ಬೇರೆ ಎಲ್ಲಾ ರಾಜ್ಯದಲ್ಲೂ ಈ ರೀತಿ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಮಾತ್ರ ಇದನ್ನು ಮಾಡಿಲ್ಲ. ಅದೇತಕ್ಕೆ ಮಾಡಿಲ್ಲವೋ ನನಗೆ ಗೊತ್ತಿಲ್ಲ. ಬಿಹಾರದಲ್ಲಿ ಇವರನ್ನು ಗ್ರೇಡ್–೧ ಎಂದು ಮಾಡಿದ್ದಾರೆ ಪಾರ್ಲಿಮೆಂಟಿನಲ್ಲೂ ಕೂಡ ಗ್ರೇಡ್–೧ ಎಂದು ಮಾಡಿದ್ದಾರೆ. ಇವರಿಗೆ ಪ್ರೊಮೋಷನಲ್ ಅವೆನ್ಯೂಸ್ ಕೂಡ ಇಲ್ಲ. ತಮಗೆ ಗೊತ್ತಿದೆ. ಇವರು ರಿಪೋರ್ಟರ್ ಆದರೆ ಸಾಯುವತನಕ ರಿಪೋರ್ಟರೇ. ಬದುಕುವುದು, ಸಾಯುವುದು ಎಲ್ಲಾ ರಿಪೋರ್ಟರ್ ಆಗಿಯೇ. ಅದನ್ನು ತಾವು ತಿಳಿದುಕೊಂಡು ಇವರಿಗೆ ನಾನು ಹೇಳಿದಂತೆ ಸರಿಯಾದ ಗ್ರೇಡ್ ಕೊಡಬೇಕು. ಇಷ್ಟು ಮಾತ್ರ ಹೇಳಬೇಕಾಗಿದೆ ಈ ವಿಷಯದಲ್ಲಿ. ಎರಡನೆಯದಾಗಿ ಈ ಸಭೆಯ ನಡವಳಿಕೆಗಳ ಬಗ್ಗೆ ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಚರ್ಚೆ ಮಾಡುತ್ತೇವೆ. ನನಗಾದರೂ ಅನ್ನಿಸುತ್ತದೆ ಒಂದು ದಿವಸದಲ್ಲಿ ಮೂರು ಇಲಾಖೆಯನ್ನು ಮುಗಿಸಬೇಕು ಎಂದರೆ ಬಹಳ ಕಷ್ಟ. ಇದರಿಂದ ತೊಂದರೆಯಾಗಿದೆ. ಎಷ್ಟೇ ಚರ್ಚೆ ಮಾಡಿದರೂ ಸಹ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದು ಇತ್ಯರ್ಥವಾಗುವುದಿಲ್ಲ. ಆದರೆ ತಾವು ನಮಗೆ ಸಹಕರಿಸಬೇಕು. ಏತಕ್ಕೆಂದರೆ ತಮ್ಮ ಸಹಾಯ ಇದ್ದರೆ ನಮಗೆ ಅದು ದೊಡ್ಡ ಸಹಾಯ. ಮುಖ್ಯವಾಗಿ ಲೇಬರ್ ಇಲಾಖೆ ಬಗ್ಗೆ ಯಾವಾಗಲೂ ಸಹ ಮೂರು ಗಂಟೆ ಕಾಲದಲ್ಲಿ ಚರ್ಚೆ ಮುಗಿಸಬೇಕಾಗಿದೆ. ಲೇಬರ್ಸ್ ಸೋಷಿಯಲ್ ವೆಲ್‌ಫೇರ್. ವಿಮೆನ್ ವೆಲ್‌ಫೇರ್ ಎಲ್ಲಾ ಒಂದು ದಿವಸದಲ್ಲಿ ಮುಗಿಸಬೇಕಾಗಿದೆ. ಇದರಿಂದ ಅನೇಕರಿಗೆ ಮಾತನಾಡುವುದಕ್ಕೆ ಆಗುವುದಿಲ್ಲ. ಎಲ್ಲಾ ಐದೈದು ನಿಮಿಷದಲ್ಲಿ ಮಾತನಾಡಬೇಕಾಗಿದೆ. ರೆವಿನ್ಯೂ ಡಿಪಾರ್ಟ್‌ಮೆಂಟಾಗಲೀ

ಬೇರೆ ಯಾವುದೇ ಡಿಪಾರ್ಟ್‌ಮೆಂಟ್ ಆಗಲಿ ಅದಷ್ಟು ಬೇಗ ಚರ್ಚೆ ಮುಗಿಯುತ್ತಿದೆ. ಹಿಂದೆ ದೇವರಾಜ ಅರಸ್ ಅವರ ಕಾಲದಲ್ಲಿ ತಮಗೂ ಗೊತ್ತಿರಬೇಕು ಈ ವಿಷಯುವನ್ನು ಮೂರು ದಿವಸಗಳ ಕಾಲ ಚರ್ಚೆ ಮಾಡಿದ್ದೇವೆ. ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ತಾವು ನಮ್ಮ ಸಹಾಯಕ್ಕೆ ಬರಬೇಕು. ಈ ಇಲಾಖೆಗಳ ಬಗ್ಗೆ ಹೆಚ್ಚು ದಿನಗಳಲ್ಲಿ ಚರ್ಚೆ ಮಾಡುವುದಕ್ಕೆ ಮುಂದಿನ ಸಾರಿಯಿಂದಲಾದರೂ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ಈ ಸಾರಿ ಏನೂ ಮಾಡುವ ಹಾಗಿಲ್ಲ, ಇನ್ನು ಬೇರೆ ವಿಷಯುಗಳ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ವೇಳೆ ಬಗ್ಗೆ ಚರ್ಚೆ ಮಾಡುವುದು ಒಳ್ಳೆಯದು ಎಂದು ಕಾಣುತ್ತದೆ. ೧೧ ರಿಂದ ೫ ಗಂಟೆವರೆಗೂ ಈಗ ಸಭೆ ಇಟ್ಟಿದ್ದೀರಿ. ಕೇರಳದಲ್ಲಿ ೮ ರಿಂದ ೧೨ರ ತನಕ ಇದೆ. ೧ ಗಂಟೆ ಅಥವಾ ಎರಡು ಗಂಟೆ ತನಕ ಮಾಡುತ್ತಾರೆ. ನಮ್ಮಲ್ಲಿ ಹಿಂದೆ ೧ ರಿಂದ ೬ ಗಂಟೆವರೆಗೆ ಹಿಂದು ಕುಳಿತುಕೊಳ್ಳುತ್ತಿದ್ದರು. ಆಗ ಸ್ವಲ್ಪಮಟ್ಟಿಗೆ ಬೆಳಿಗ್ಗೆ ಎಲ್ಲಾ ವ್ಯವಹಾರ ನಡೆಯುತ್ತಿತ್ತು ಮಧ್ಯಾಹ್ನ ಇಲ್ಲಿ ಈ ವ್ಯವಹಾರಗಳು ನಡೆಯುತ್ತಿತ್ತು. ಅಥವಾ ಬೆಳಿಗ್ಗೆ ವ್ಯವಹಾರ ನಡೆಸಿ ಮಧ್ಯಾಹ್ನ ಕಚೇರಿ ಕೆಲಸಗಳಿಗೆ ಬೇರೆ ಕೆಲಸಗಳಿಗೆ ಹೋಗುವುದಕ್ಕೆ ಅವಕಾಶ ಸಿಗುತ್ತಿತ್ತು. ಆ ತರಹ ಏನಾದರೂ ಯೋಚನೆ ಮಾಡುವುದು ಒಳ್ಳೆಯದು ಎಂದು ನನಗನ್ನಿಸುತ್ತದೆ. ಇಷ್ಟು ಮಾತ್ರ ನಾನು ಈ ಶಾಸನಸಭೆ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕಾನೂನು ವ್ಯವಸ್ಥೆಯ ಬಗ್ಗೆ ಮಾನ್ಯ ಮಿತ್ರರು ಹೇಳಿದ್ದಾರೆ. ಒಂದು ನನ್ನ ಗಮನಕ್ಕೆ ಬಂದಿರುವುದು ಎಂದರೆ ಈ ವರದಿ ಪ್ರಕಾರ ೧೯೮೮ ರಲ್ಲಿ ೨೧ ಸುಗ್ರೀವಾಜ್ಞೆಗಳನ್ನು ಹೊರಡಿಸಿದ್ದಾರೆ. ಕಳೆದ ವರ್ಷ ಅಥವಾ ಅದರ ಹಿಂದಿನ ವರ್ಷ ನೋಡಿದರೆ ಇಷ್ಟೊಂದು ಸುಗ್ರೀವಾಜ್ಞೆಗಳನ್ನು ಹೊರಡಿಸಿರಲಿಲ್ಲ. ಇಷ್ಟೊಂದು ಸುಗ್ರೀವಾಜ್ಞೆಗಳನ್ನು ಹೊರಡಿಸುವ ಅವಶ್ಯಕತೆ ಇತ್ತೇ ಎಂಬುದು ನನ್ನ ಮುಖ್ಯವಾದ ಪ್ರಶ್ನೆ. ನಿನ್ನೆಯ ದಿವಸ ಇದರ ಬಗ್ಗೆ ಚರ್ಚೆ ನಡೆದಿದೆ. ಮಾನ್ಯ ಮಾವಲಂಕರ್ ಅವರಿಗೂ ನೆಹರೂ ಅವರಿಗೂ ನಡೆದಂಥ ಚರ್ಚೆ ಬಗ್ಗೆ ಹೇಳಿದರು. ಅದು ಪತ್ರಿಕೆಯಲ್ಲೂ ಬಂದಿದೆ. ತಾವೂ ಸಹ ಓದಿದ್ದೀರಿ ಎಂದು ನಾನು ನಂಬಿದ್ದೇನೆ. ಅದರ ಆಧಾರದ ಮೇಲೆ ನೋಡಿದರೆ ಪ್ರಜಾಪ್ರಭುತ್ವದ ಯುಗದಲ್ಲಿ, ಪದ್ಧತಿಯಲ್ಲಿ ತುರ್ತು ಆಜ್ಞೆಗಳನ್ನು ಹೆಚ್ಚು ತೆಗೆದುಕೊಂಡು ಬರುವುದು ಸರಿಯಾದುದಲ್ಲ. ಅದರ ಬದಲು ನೇರವಾಗಿ ಶಾಸನಸಭೆಯಲ್ಲೇ ಇದನ್ನು ತೆಗೆದುಕೊಂಡು ಬರಬೇಕು ಎಂಬ ಅಭಿಪ್ರಾಯವನ್ನು ಅವರೆಲ್ಲರೂ ಕೊಟ್ಟಿದ್ದಾರೆ. ನಾನು ತುರ್ತು ಆಜ್ಞೆಗಳನ್ನು ಮಾಡಲೇಬಾರದು ಎಂದು ಹೇಳುವುದಿಲ್ಲ. ಅವಶ್ಯಕವಿದ್ದರೆ ಮಾಡಲಿ. ಆದರೆ ಎಲ್ಲವೂ ತುರ್ತು ಆಗುವುದಿಲ್ಲ. ಆದ್ದರಿಂದ ಇದನು ಯೋಚನೆ ಮಾಡಿ ಮಾಡಬೇಕು. ಈ ೨೧ ಕಾನೂನುಗಳ ಬಗ್ಗೆ ಈ ರೀತಿ ಯೋಚನೆ ಮಾಡಿ ಮಾಡಿದ್ದಾರೆಯೋ ಎಂಬ ಬಗ್ಗೆ ಪುನರ್‌ಪರಿಶೀಲನೆ ಮಾಡಬೇಕೆಂದು ನನ್ನ ಅಭಿಪ್ರಾಯ.

ಇವತ್ತು ಜನರಿಗೆ ನ್ಯಾಯ ಬೇಗ ದೊರಕಿದರೆ ಬಹಳ ಒಳ್ಳೆಯದು. Justice delayed is justice denied ಎಂಬುದು ತಮಗೆ ಗೊತ್ತೇ ಇದೆ. ತಾವು ಕೊಟ್ಟಿರುವ ವರದಿಯನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಜಸ್ಟೀಸ್ ಡಿಲೇಡ್ ಎಷ್ಟು ಆಗುತ್ತದೆ ಎಂದು ಹೇಳಿದ್ದಾರೆ. ಇದರಲ್ಲಿ ಪುಟ ೧೯ರಲ್ಲಿ ಕೊಟ್ಟಿದ್ದಾರೆ. ನಾನು ಅದನ್ನು ಪೂರ್ತಿ ಓದುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಎಷ್ಟು ಕೇಸ್‌ಗಳು ಉಳಿದಿವೆ ಎಂದು ಹೇಳಿದ್ದಾರೆ. In District and Sessions Judges Court the pendency is as follows. Original suits-16,428, Execution cases,-2665 Motor Vehicles Claims cases-15,101 ಹೀಗೆ ಎಲ್ಲಾ ಲೆಕ್ಕಾಚಾರ ಹಾಕಿದರೂ ಸುಮಾರು ಹತ್ತಿರ ಹತ್ತಿರ ೧ ಲಕ್ಷ ಬರಬಹುದು ಅಥವಾ ಅದಕ್ಕಿಂತ ಜಾಸ್ತಿ ಆಗಬಹುದು. ಎಷ್ಟು ವರ್ಷಗಳಿಂದ ಈ ಕೇಸ್‌ಗಳು ಇವೆಯೋ ನಮಗೆ ಅರ್ಥವಾಗುತ್ತಿಲ್ಲ. ಆದರೆ ಕೇಸ್‌ಗಳು ಪೆಂಡಿಂಗ್ ಮಾತ್ರ ಇವೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಿ? ತಾವು ನೇರವಾಗಿ ಅವರಿಗೆ ಹೋಗಿ ಹೇಳುವುದಕ್ಕೆ, ನ್ಯಾಯಾಂಗಕ್ಕೆ ಒತ್ತಾಯ ಮಾಡುವ ಪರಿಸ್ಥಿತಿ ಇಲ್ಲದೇ ಇರಬಹುದು. ಆದರೂ ಕೂಡಾ ನಾವು ಜವಾಬ್ದಾರಿಯನ್ನು ಕಳೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅದಷ್ಟು ಜಾಗ್ರತೆ ಇವನ್ನು ಇತ್ಯರ್ಥ ಮಾಡುವ ವ್ಯವಸ್ಥೆಯನ್ನು ನ್ಯಾಯಾಂಗವೂ ಕೂಡಾ ಮಾಡುವ ಜವಾಬ್ದಾರಿ ಇದೆ. ಮಾನ್ಯ ಮಂತ್ರಿಗಳು ಇದಕ್ಕೆ ಹೆಚ್ಚಿನ ರೀತಿಯಲ್ಲಿ ಅವಕಾಶವನ್ನು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನೊಂದು ಒಳ್ಳೆಯ ಅಂಶ ಏನೆಂದರೆ, ಲೀಗಲ್ ಏಡ್ ಸ್ಕೀಮ್ ಇದೆ. ಇದು

ಬಹಳ ಒಳ್ಳೆಯದು ಇದೆ. ಆದರೆ ನನಗೆ ಬಂದಿರುವ ವರ್ತಮಾನದ ಪ್ರಕಾರ ೮ ಸಾವಿರ ಮತ್ತು ಅದಕ್ಕಿಂತಲೂ ಕಡಿಮೆ ವರಮಾನ ಇರುವವರಿಗೆ ಮುಫತ್ತಾಗಿ ಕಾನೂನು ಅನುಕೂಲ ಕೊಡುತ್ತೇವೆಂದು, ಲಾಯರ್‌ರವರ ಸಹಾಯ ಕೊಡುತ್ತೇವೆಂದು ಹೇಳುತ್ತಾರೆ. ಇದು ತೋರಿಕೆಗೆ ಬಹಳ ಚೆನ್ನಾಗಿ ಇದೆ. ಸುಮಾರು ೧,೨೦೦ ಜನ ಏನೋ ಈ ಒಂದು ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಏಕೆ ಇದರ ಬಗ್ಗೆ ರಾಜ್ಯದ ಜನರು ಹೆಚ್ಚು ಅನುಕೂಲವನು ಪಡೆದುಕೊಳ್ಳುತ್ತಾ ಇಲ್ಲ? ಒಂದು, ಜನರಿಗೆ ಈ ವಿಷಯ ಗೊತ್ತಿಲ್ಲ. ಇವರು ಅದನ್ನು ಪಡೆದುಕೊಳ್ಳುವುದಕ್ಕೆ ಎಷ್ಟು ದೂರ ಪ್ರಚಾರವನ್ನು ತಾವು ಮಾಡಬೇಕೋ ಅದನ್ನು ತಾವು ಮಾಡಿಲ್ಲ ಎಂದು ನಾನು ಈ ಬಗ್ಗೆ ಟೀಕೆಮಾಡುತ್ತಿದ್ದೇನೆ ಹಾಗೂ ಹೆಚ್ಚು ಪ್ರಚಾರವನ್ನು ತಾವು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ನನಗೆ ತಿಳಿದಮಟ್ಟಿಗೆ ಈ ರೀತಿ ಲೀಗಲ್ ಏಡ್ ಕೇಸ್ ಬಂದಾಗ ಇದರಲ್ಲಿ ಬಡವರೇ ಹೆಚ್ಚು ಇರುತ್ತಾರೆ. ಯಾರಿಗೆ ಲಾಯರ್ ಫೀಸ್ ಕೊಡಲು ಶಕ್ತಿ ಇಲ್ಲವೋ ಅಂತಹವರಿಗೆ ಅನುಕೂಲ ಮಾಡುವುದಕ್ಕೆ ತಾವು ಸಹಾ ಸರಿಯಾದ ಲಾಯರ್ಸ್ ಕೊಡಬೇಕು. ಇವೊತ್ತು ಸರಿಯಾದ ಲಾಯರ್ಸ್ ಈ ಕೆಲಸಕ್ಕೆ ಬರುವುದಿಲ್ಲ. ಒಳ್ಳೆಯ ಪ್ರ್ಯಾಕ್ಟೀಸ್ ಇರುವ ಲಾಯರ್ ಇದಕ್ಕೆ ಬರುವುದಿಲ್ಲ. ಕನ್ನಡದಲ್ಲಿ ಫೂಟ್ ಲಾಯರ್ ಎಂದು ಏನು ಹೇಳುತ್ತೇವೆ ಅಂತಹವರು ಬಂದು ಇವರ ಕೇಸನ್ನು ನಡೆಸುವುದಕ್ಕೆ ಹೋಗುತ್ತಾರೆ. ಅವರು ಹಣಕ್ಕೋಸ್ಕರ ಬರುತ್ತಾರೆ. ಆದರೆ ಪ್ರಯೋಜನ ಏನು ಬಂತು? ಇದರಿಂದ ಜನರಿಗೆ ನ್ಯಾಯ ಸಿಕ್ಕುವುದಿಲ್ಲ. ಇದರ ಬಗ್ಗೆ ತಾವು ಸ್ವಲ್ಪ ಒಳ್ಳೆಯ ಲಾಯರ್‌ಗಳನ್ನು ನೇಮಿಸಬೇಕು. ಇಲ್ಲ, ಇಂತಹವರು ಈ ಬಗ್ಗೆ ಗಮನ ಕೊಟ್ಟನೆ ಸಮಾಜಕ್ಕೆ ಅನುಕೂಲವಾಗುತ್ತದೆಂದು ನಾನು ಹೇಳುತ್ತೇನೆ. ಈ ಬಗ್ಗೆ ಗಮನ ಕೊಟ್ಟು ಒಳ್ಳೆಯ ವ್ಯವಸ್ಥೆ ಮಾಡುವುದಕ್ಕೆ ತಾವು ಅವರಿಗೆ ತಿಳುವಳಿಕೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರೆಂದು ನಾನು ನಂಬಿದ್ದೇನೆ ಇನ್ನು ಲ್ಯಾಂಡ್ ರಿಫಾರ್ಮ್ಸ್ ಸೆಲ್ ಎಂದು ಏನು ಮಾಡಿದ್ದೀರಿ ಇದು ಬಹಳ ಒಳ್ಳೆಯದಿದೆ. ಇದು ಒಳ್ಳೆಯ ಕಾರ್ಯಕ್ರಮ ಎಂದು ನಾನು ಹೇಳುತ್ತೇನೆ.

ಇನ್ನು ನೇರವಾಗಿ ನಗರಾಭಿವೃದ್ಧಿ ವಿಷಯಕ್ಕೆ ಬರುತ್ತೇನೆ. ನಗರಾಭಿವೃದ್ಧಿ ಬಗ್ಗೆ ಮಾತನಾಡಬೇಕಾದರೆ ಬೇಕಾದಷ್ಟು ಇದೆ. ಆದರೆ ತಾವು ನನಗೆ ಕೊಟ್ಟಿರತಕ್ಕ ವೇಳೆ ೨೦ ನಿಮಿಷ ಮಾತ್ರ ಈ ನಗರಾಭಿವೃದ್ಧಿಯನ್ನು ಈ ದಿನದ ಈ ಚೌಕಟ್ಟಿನಲ್ಲಿ ಯಾವ ರೀತಿ ನೋಡಬೇಕು? ಇಂಥದಿನ ಪರಿಸ್ಥಿತಿಯಲ್ಲಿ, ಇಂದಿನ ಸಮಾಜದಲ್ಲಿ ನಗರಾಭಿವೃದ್ಧಿ ಮಾಡುವ ಕೆಲಸ ಅಷ್ಟು ಸುಲಭವಲ್ಲ. ನಗರಾಭಿವೃದ್ಧಿಗೆ ಒಂದು ಯೋಜನೆ ಇರಬೇಕು. ಅರ್ಬನ್ ಡೆವಲಪ್‌ಮೆಂಟ್ ಪಾಲಿಸೀ ಈ ಸರ್ಕಾರಕ್ಕೆ ಇರಬೇಕೆಂದು ನನ್ನ ಅಭಿಪ್ರಾಯ. ಇವೊತ್ತು ನಗರಕ್ಕೆ ಅನೇಕ ಜನ ವಲಸೆ ಬರುತ್ತಾರೆ. ಅವರಿಗೆ ಹೇಗೆ ಅನುಕೂಲ ಮಾಡಬೇಕು ಅಥವಾ ಮಾಡಬಾರದು ಎನ್ನುವ ಪ್ರಶ್ನೆ. ಬೆಂಗಳೂರು ನಗರ ಬೃಹದಾಕಾರವಾಗಿ ಬೆಳೆಯುತ್ತಿದೆ. ಇದನ್ನು ವರ್ಟಿಕಲ್ಲಾಗಿ ಬೆಳೆಸಬೇಕೇ ಅಥವಾ ಹಾರಿಜಾಂಟಲ್ ಆಗಿ ಬೆಳೆಸಬೇಕೇ? ಸಾರಿಗೆ ವ್ಯವಸ್ಥೆ ಯಾವ ರೀತಿ ಇರಬೇಕು? ನೀರಿನ ವ್ಯವಸ್ಥೆ ಯಾವ ರೀತಿ ಇರಬೇಕು ಹಾಗೂ ಮತ್ತಿತರ ವ್ಯವಸ್ಥೆ ಯಾವ ರೀತಿ ಇರಬೇಕು ಎಂಬುದನ್ನೆಲ್ಲಾ ಯೋಚನೆ ಮಾಡಬೇಕಾದರೆ ಯೋಜಿತವಾದ ರೀತಿಯಲ್ಲಿ ಒಂದು ಯೋಜನೆ ಇದ್ದರೆ ಮಾತ್ರ ನಗರವನ್ನು ಈ ಬೆಳೆಸುವುದಕ್ಕೆ ಸಾಧ್ಯ. ಈ ರೀತಿ ನಿಯೋಜಿತ ರೀತಿಯಲ್ಲಿ ಬೆಳೆಸುವುದಕ್ಕೆ ಹೋದಾಗ ಅನೇಕ ತೊಂದರೆ, ತಕರಾರುಗಳು ಬರುತ್ತವೆ. ಪಟ್ಟಭದ್ರ ಹಿತಾಸಕ್ತಿಗಳು ಇರತಕ್ಕ ಈ ಸಮಾಜದಲ್ಲಿ ತೊಂದರೆ ತಕರಾರು ಖಂಡಿತಾ ಬರುತ್ತವೆ. ಒಂದು ರಸ್ತೆ ಮಾಡಬೇಕಾದರೆ ಪಟ್ಟಭದ್ರ ಹಿತಗಳು ಅಡ್ಡ ಬರುತ್ತವೆ ಮನೆ ಕಟ್ಟಬೇಕಾದರೆ ಹಣ ಕೊಟ್ಟು ತಮಗೆ ಬೇಕಾದ ರೀತಿಯಲ್ಲಿ ಕಟ್ಟಿಕೊಳ್ಳುತ್ತಾರೆ. ಇಂತಹವುದ್ದೆಲ್ಲಾ ಆಗಿ ಗಂಗಾರಾಮ್ ದುರಂತದಂತಹ ದುರಂತಗಳನ್ನು ನೋಡಿದ್ದೇವೆ. ನಮ್ಮ ದೇಶದಲ್ಲಿ ಸುಮಾರು ೫೦ ಸಹಸ್ರ ಕೋಟಿಯಷ್ಟು ಕಪ್ಪು ಹಣ ಇದೆ ಎಂಬ ವಿಷಯವನ್ನು ನಾನು ಪತ್ರಿಕೆಯಲ್ಲಿ ಓದಿದೆ. ಇಂತಹ ಕಪ್ಪು ಹಣದಿಂದಾಗಿ ಲ್ಯಾಂಡ್ ವ್ಯಾಲ್ಯೂ ಜಾಸ್ತಿಯಾಗಿದೆ ಈ ಹಣದಿಂದ ಶ್ರೀಮಂತರು ಹೆಚ್ಚು ಹಣ ಕೊಟ್ಟು ಜಮೀನು ಪಡೆಯುತ್ತಾರೆ. ಅಲ್ಲಿ ಸಿನಿಮಾ ಮಂದಿರ, ಹೋಟೆಲ್ ಬಾರ್‌ಗಳನ್ನು ತೆರೆಯುತ್ತಿದ್ದಾರೆ. ಕಪ್ಪು ಹಣದ ಪ್ರಭಾವದಿಂದ ಇವುಗಳೇ ಎಲ್ಲೆಲ್ಲೂ ಎದ್ದು ನಿಲ್ಲುತ್ತಿವೆ. ಇವತ್ತು ದೊಡ್ಡ ದೊಡ್ಡ ಮನೆಗಳನ್ನು ಕಪ್ಪು ಹಣವಂತರೇ ಕಟ್ಟಿಸುತ್ತಿದ್ದಾರೆ. ಇದಕ್ಕೆ ನಾವು ಅವಕಾಶ ಮಾಡಿಕೊಡಬೇಕೇ ಎನ್ನುವುದು ಮೊದಲ ಪ್ರಶ್ನೆ. ಇದಕ್ಕೆ ಅವಕಾಶ ಕೊಡಬೇಕಾಗಿಲ್ಲ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ಏಕೆಂದರೆ ಅವರೂ ನಾವೂ ಒಂದೇ ಗರಡಿಯಲ್ಲಿ ಒಂದು ಕಾಲಕ್ಕೆ ಇದ್ದ ಜನ. ಈಗ ಅವರು ಬೇರೆ ಗರಡಿಗೆ ಹೋಗಿದ್ದಾರೆ. ಆದರೆ ಪ್ರಶ್ನೆ ಏನೆಂದರೆ, ಇವರ ಕೈಯಲ್ಲಿ ಇದನ್ನು

ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆಯೋ ಎಂಬುದು. ನಿಮ್ಮ ಕೈಯಲ್ಲಿ ಸಾಧ್ಯವಾಗುವುದಿಲ್ಲ ಎಂಬುದನ್ನು ಮಾತ್ರ ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಎಲ್ಲಿಯವರೆಗೆ ಬಂಡವಾಳ ಶಾಹೀ ವ್ಯವಸ್ಥೆ ಇರುತ್ತದೆಯೋ ಅಲ್ಲಿಯವರೆಗೆ ಯೋಜಿತ ರೀತಿಯಲ್ಲಿ ನಗರಗಳ ಬೆಳವಣಿಗೆ ನಡೆಯುತ್ತಿದೆಂದು ತಿಳಿದುಕೊಂಡಿದ್ದರೆ ಅದು ನಮ್ಮ ಭ್ರಮೆಯಾಗುತ್ತದೆಂದು ಹೇಳುತ್ತೇನೆ. ಸ್ಟ್ರಕ್ಚರಲ್ ಛೇಂಜಸ್ ಬರಬೇಕಾಗುತ್ತದೆ. ಇವತ್ತು ಸಮಾಜವಾದ ಜಾರಿಯಲ್ಲಿ ಬರಬೇಕು ಸಮಾಜವಾದದ ಪದ್ಧತಿಯಲ್ಲಿ ಮಾತ್ರ ಜನತೆಗೆ ಅನುಕೂಲ ಆಗುತ್ತದೆಂದು ಹೇಳುತ್ತೇನೆ. ನಾನು ಒಂದು ವಿಷಯವನ್ನು ಹೇಳಿದರೆ ಯಾರೂ ಕೂಡಾ ತಪ್ಪು ತಿಳಿದುಕೊಳ್ಳಬಾರದು. ಆ ಮನೆಯವರು ಕೆಲವರು ಯೂತ್ ಫೆಸ್ಟಿವಲ್‌ಗೆ ಹೋಗಿ ಬಂದರು. ವಿಶ್ವ ಯೋಜನಾ ಸಮ್ಮೇಳನಕ್ಕೆ ೫ ಜನ ಹೋಗಿದ್ದರು. ಎಂಎಲ್‌ಎಗಳೂ ಕೂಡಾ ಕೆಲವರು ಮಾಸ್ಕೋಗೆ ಹೋಗಿದ್ದರು. ಈ ಕಡೆಯ ಸದಸ್ಯರು ಕೂಡಾ ಹೋಗಿದ್ದರು. ಅವರನ್ನು ಕೇಳಿ ನೋಡಿ ಅಲ್ಲಿ ನಗರ ಯೋಜನೆ ಯಾವ ರೀತಿ ಇದೆ ಎಂದು? ಸಮಾಜವಾದ ದೇಶದಲ್ಲಿ ಅರ್ಬನ್ ಡೆವಲಪ್‌ಮೆಂಟ್ ಯಾವ ರೀತಿ ಇದೆ ಎಂಬುದು ನನಗೆ ಗೊತ್ತಿದೆ. ಕೆಲವು ಟೌನ್ ಡೆವಲಪ್‌ಮೆಂಟ್ ಅಧಿಕಾರಿಗಳು ಪೋಲೆಂಡ್‌ನಲ್ಲಿ ಇದ್ದು ಬಂದವರು ನಮ್ಮ ರಾಜ್ಯದಲ್ಲಿ ಇದ್ದಾರೆ, ಅವರನ್ನು ನೀವು ಕೇಳಿ. ಅಲ್ಲಿ ಇಂತಹ ಯಾವುದೇ ತೊಡಕು ತೊಂದರೆಗಳು ಬರುವುದಿಲ್ಲ. ಪಟ್ಟಭದ್ರಗಳ ತೊಂದರೆ ಸ್ಲಮ್ಸ್ ತೊಂದರೆ ಬರುವುದಿಲ್ಲ. ಅಲ್ಲಿ ಚೆನ್ನಾಗಿ ಎಲ್ಲಾ ನಡೆದುಕೊಂಡು ಹೋಗುವ ಪರಿಸ್ಥಿತಿ ಇದೆ. ಅದು ಇಲ್ಲಿ ಬರಬೇಕು ಅದು ಇಲ್ಲಿ ಬರಬೇಕಾದರೆ ಎಷ್ಟು ವರ್ಷಗಳಾಗುತ್ತವೆ ಎಂದು ಹೇಳುವುದಕ್ಕಾಗುವುದಿಲ್ಲ. ಸಂವಿಧಾನದ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗಿರುವುದರಿಂದ ಇವತ್ತು ನಗರಾಭಿವೃದ್ಧಿಯನ್ನು ಪ್ಲಾನ್ ರೀತಿಯಲ್ಲಿ ಮಾಡಬೇಕಾಗುತ್ತದೆ. ಈ ಬಗ್ಗೆ ಸದಸ್ಯರೆಲ್ಲರೂ ಹೇಳುತ್ತಾರೆ ಆದರೆ ಅದು ಆಗಿದೆಯೋ ಎಂದು ಪ್ರಶ್ನೆ ಹಾಕಿದರೆ ದೇಶದಲ್ಲಿ ಎಲ್ಲೂ ಇದು ಆಗಿಲ್ಲ ಎನ್ನುವ ಅಭಿಪ್ರಾಯವನ್ನು ಅನೇಕ ತಜ್ಞರು ಕೊಡುತ್ತಾರೆ. ನಾನು ಅದನ್ನೆಲ್ಲಾ ಓದುವುದಕ್ಕೆ ಹೋಗುವುದಿಲ್ಲ. "Urban Problems—Policy and perspectives" ಎಂದು ಇಲ್ಲಿ ಇದೆ. ಇದರಲ್ಲಿ ನಗರ ಯೋಜನೆ ಬಗ್ಗೆ ಓದಿದಂತಹ ಅನೇಕ ತಜ್ಞರು ಅನೇಕ ಅಂಶಗಳನ್ನು ಬರೆದಿದ್ದಾರೆ. ಇದರಲ್ಲಿ ಎಲ್ಲಾ ಹೇಳದೇ ಕೆಲವು ಭಾಗವನ್ನು ಮಾತ್ರ ನಾನು ಓದುವುದಕ್ಕೆ ಹೋಗುತ್ತೇನೆ.

> "Planned urban development holds the key to the solution of the urban problems and improvement of urban settlement. Urban plan has been prepared on merely long term land use plan unrelated to the nature of the urban areas, unrelated to its economic and social development prospects and protential. Planding standards are often unrealistic and unfeasible in the aspect of developmental activities and the plans are often not translated into concrete short term operational programmes and this underlies the need for integration of economic and physical planning at various levels. As far as the policy regarding slum is concerned the policy should be to improve and rehabilitate them rather than going for on regional aspects.

ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇದರ ಆಧಾರದ ಮೇಲೆ ಯೋಜನೆಗಳನ್ನು ನಿರೂಪಣೆ ಮಾಡಿದೆಯೇ? ಅದನ್ನು ಮಾಡಿಲ್ಲ ಎಂದು ನನ್ನ ಆರೋಪ. ಇದನ್ನು ಮಾಡಬೇಕೆಂದು ಈಗ ನಾನು ಹೇಳುತ್ತೇನೆ. ಆ ಒಂದು ಚೌಕಟ್ಟನ್ನು ನೋಡಬೇಕು. ಇವತ್ತು ಅದನ್ನು ಮಾಡಿದ್ದರೆ ಖಂಡಿತವಾಗಿ ಬೆಂಗಳೂರು ನಗರದಲ್ಲಿಯಾಗಲೀ ಅಥವಾ ರಾಜ್ಯದ ಇತರ ಭಾಗಗಳಲ್ಲಾಗಲೀ ಗುಡಿಸಲುಗಳನ್ನು ಒಡೆದುಹಾಕುವ ಪರಿಸ್ಥಿತಿ ಬರುತ್ತಿರಲಿಲ್ಲ, ಪೆಟ್ಟಿಗೆ ಅಂಗಡಿಗಳನ್ನು ಕೆಡುವ ಪರಿಸ್ಥಿತಿ ಬರುತ್ತಿರಲಿಲ್ಲ. ನಗರದ ಸೌಂದರ್ಯವನ್ನು ಕಾಪಾಡಬೇಕೆಂದರೆ ಇವರ ಕಣ್ಣಿಗೆ ಬೀಳುವುದು ಬರೀ ಪೆಟ್ಟಿಗೆ ಅಂಗಡಿಗಳು. ಈ ಅಂಗಡಿಗಳನ್ನು ತೆಗೆಯುವುದರಿಂದ ನಗರವನ್ನು ಪ್ಯಾರಿಸ್ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ದೇಶದಲ್ಲಿ

ಅಂತಹ ನಗರಗಳನ್ನು ಮಾಡಲು ಅವಕಾಶ ಇದ್ದರೆ ಮಾಡೋಣ ಆದರೆ ಮೂಲಭೂತವಾಗಿ ಗಮನಹರಿಸ ಬೇಕಾದ್ದಕ್ಕೆ ಜವಾಬ್ದಾರಿ ಇಲ್ಲ. ಇವತ್ತು ಯೋಜಿತ ರೀತಿಯಲ್ಲಿ ಖಂಡಿತವಾಗಿ ಕಾರ್ಯಕ್ರಮಗಳ ನಡೆಯುತ್ತಿಲ್ಲ. ನಾನು ಬೆಂಗಳೂರು ನಗರದ ಬಗ್ಗೆ ಮಾತ್ರ ಹೇಳುತ್ತೇನೆ. ಯಾವ ಆಸ್ತಿಪಾಸ್ತಿಗಳು ಬಿ.ಡಿ.ಎ ಗೆ ಸೇರಬೇಕು, ಕಾರ್ಪೊರೇಷನ್‌ಗೆ ಸೇರಬೇಕು, ನಗರಾಭಿವೃದ್ಧಿ ಮಂಡಲಿಗೆ ಸೇರಬೇಕು ಎಂಬುದನ್ನು ನೋಡಿ ಅವನ್ನು ಕಾಪಾಡಿಕೊಂಡು ಬಂದಿದ್ದಾರೆಯೇ ಬೆಂಗಳೂರು ನಗರದಲ್ಲಿ ಈ ಬಗ್ಗೆ ಲೆಕ್ಕ ಇಟ್ಟಿಲ್ಲ ಅನೇಕ ಕಡೆ ಈ ಆಸ್ತಿಗಳು ಪರಭಾರ ಆಗಿರುವುದರ ಬಗ್ಗೆ ತಪಾಸಣೆ ಮಾಡಿ ನೋಡಲಿ. ಒಳಗೊಳಗೇ ಮಂಜೂರಾತಿ ಕೊಟ್ಟು ಅನ್ಯಾಯ ನಡೆಸಿದ್ದಾರೆ ಎನ್ನುವ ಆಪಾದನೆ ನಿಮ್ಮ ಮೇಲಿದೆ. ಇದಕ್ಕೆ ಎರಡು ನಿದರ್ಶನಗಳು ಹೇಳುತ್ತೇನೆ. ನಿನ್ನೆ ದಿವಸ ರಘುಪತಿಯವರು ಬಂದಿರಲಿಲ್ಲ. ಮಾನ್ಯ ಗೋವಿಂದೇಗೌಡರು ಬಂದಿದ್ದರು. ನಮ್ಮ ಏರಿಯಾದಲ್ಲಿ ಶಿವನಹಳ್ಳಿ ಎನ್ನುವ ಒಂದು ಗ್ರಾಮ ಇದೆ.

ಅದರ ಸರ್ವೆ ನಂಬರ್ ೩. ಆ ಸರ್ವೆ ನಂಬರ್‌ನಲ್ಲಿರತಕ್ಕಂತಹ ಲ್ಯಾಂಡ್ ಗೋಮಾಳದ ಜಮೀನು. ಅದು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ ಸೇರಿದ್ದುದು, ಇದನ್ನು ಬೇರೆ ಯಾರೋ ಒಬ್ಬರು ಹೊಡೆಯಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಆ ಹಳ್ಳಿಯ ಜನ ಅನೇಕ ಸಾರಿ ಅಧಿಕಾರಿಗಳಲ್ಲಿ ಆ ಜಾಗ ಸರ್ಕಾರದ್ದು, ಆ ಜಾಗದ ಸುತ್ತಲು ತಂತಿ ಬೇಲಿಯನ್ನು ಹಾಕಿಸಿ ಎಂಬುದಾಗಿ ಹೇಳಿದ್ದಾರೆ. ಆದರೆ ಬೇರೆ ಯಾರೋ ಒಬ್ಬರು ದುಡ್ಡನ್ನು ಕೊಟ್ಟು ಅಧಿಕಾರಿಗಳನ್ನು ಸರಿ ಮಾಡಿಕೊಂಡು ಆ ಜಾಗವನ್ನು ಹೊಡೆಯ ಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಆದಕ್ಕೆ ತಾವು ದಯಮಾಡಿ ಅವಕಾಶ ಮಾಡಿಕೊಡಿ. ಇದು ನಿದರ್ಶನ.

ಅದೇ ರೀತಿ ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಇಂತಹದ್ದೇ ಒಂದು ಪ್ರಕರಣ ನಡೆಯುತ್ತಿದೆ. ಅಲ್ಲಿ ಯಾರೋ ಒಬ್ಬರು ದೊಡ್ಡವರು ಇದ್ದಾರೆ. ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ ಆ ಜಾಗ ಏನು ಇದೆ, ಪಾರ್ಕ್‌ಗಾಗಿ ಇಟ್ಟಿರುವಂತಹ ಜಾಗ. ಆಟದ ಮೈದಾನವನ್ನು ಅಲ್ಲಿ ಮಾಡಬೇಕೆಂದು ಇಟ್ಟಿರುವಂತಹ ಜಾಗ ಎಂಬುದಾಗಿ ಆ ಭಾಗದ ಜನ ಹೇಳುತ್ತಿದ್ದಾರೆ. ಆದರೆ ಯಾರೋ ಒಬ್ಬ ಮಾರ್ವಾಡಿಗೆ ಸಿನಿಮಾ ಮಂದಿರವನ್ನು ಕಟ್ಟಿಸುವುದಕ್ಕೆ ಆ ಜಾಗವನ್ನು ಕೊಟ್ಟಿದ್ದಾರೆ. ಏಕೆ ಕೊಟ್ಟಿದ್ದೀರಿ ? ಇದು ಸರಿಯೇ ಎಂದು ನಾನು ಕೇಳುತ್ತೇನೆ. ಅದರ ವ್ಯವಹಾರ ಎಲ್ಲಾ ಗೊತ್ತಿದೆ. ಅದರ ವಿವರವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅವರು ಈಗಾಗಲೇ ಅಲ್ಲಿ ಬೋರ್ಡನ್ನೂ ಕೂಡ ಹಾಕಿದ್ದಾರೆ. ಜನ ಕಂಗಾಲಾಗಿದ್ದಾರೆ, ಯೋಚನೆ ಮಾಡುವಂತಹ ಪರಿಸ್ಥಿತಿಯಲ್ಲಿದ್ದಾರೆ.

ಅನಂತರ ಶಂಕರಪುರ ಎಂಬುದಾಗಿ ನನ್ನ ಕ್ಷೇತ್ರದಲ್ಲಿಯೇ ಬರುತ್ತದೆ ಅದು ಕೂಡ ಬಿ.ಡಿ.ಎ. ಸಂಬಂಧಪಟ್ಟಂತಹ ಜಾಗ. ಬಿ.ಡಿ.ಎ.ನಲ್ಲಿ ಸಿ.ಎ. ಸೈಟುಗಳೆಂದು ಕೆಲವು ಇತ್ತು. ಅದನ್ನು ಜನ ಪಾರ್ಕ್ ಮಾಡಬೇಕೆಂದು ಕೇಳುತ್ತಿದ್ದಾರೆ. ಈಗ ಅದನ್ನು ಬೇರೆಯವರಿಗೆ ಕೊಡುವುದಕ್ಕೆ ಮೊನ್ನೆ ತೀರ್ಮಾನ ಮಾಡಿದ್ದಾರೆಂದು ಗೊತ್ತಾಗಿದೆ. ಈ ರೀತಿ ಮಾಡಿದ್ದಾರೋ ಏನೋ ಗೊತ್ತಿಲ್ಲ. ಆ ವ್ಯಕ್ತಿ ಯಾರಪ್ಪ ಎಂದರೆ, ಹೊಟ್ಟೆ ಪಕ್ಷದ ರಂಗಸ್ವಾಮಿ ಎಂದು ಇದ್ದಾರೆ ಅಂದರೆ ಅವರಿಗೆ. ಅವರ ಹೆಸರು ಗೊತ್ತಿಲ್ಲದ ಜನ ಯಾರೂ ಇಲ್ಲ. ತುಂಗಭದ್ರಾದಲ್ಲಿ ಒಂದು ಆಶ್ರಮವನ್ನೂ ಕೂಡ ಅವರು ಮಾಡಿದ್ದಾರೆ. ಅವರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆಂದು ಕೇಳಿದ್ದೇನೆ. ಒಂದು ವೇಳೆ ಆ ರೀತಿ ತೀರ್ಮಾನ ಮಾಡಿದ್ದರೆ ಅದನ್ನು ಬದಲಾವಣೆ ಮಾಡಿ ಅವರಿಗೆ ಆ ಸಿ.ಎ. ಸೈಟನ್ನು ಕೊಡ ಕೂಡದು ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಯಾವ ರೀತಿಯ ವ್ಯವಹಾರ ನಡೆದಿರಬಹುದೆಂಬುದನ್ನು ತಾವೇ ಯೋಚನೆ ಮಾಡಬೇಕು. ಈ ರೀತಿಯ ಅನ್ಯಾಯವನ್ನು ಇವರು ಮಾಡುವುದಕ್ಕೆ ಹೊರಟಿದ್ದಾರೆ. ಈ ರೀತಿಯ ಅನ್ಯಾಯ ಅವ್ಯವಹಾರ ನಡೆದಂತೆ ಕಟ್ಟಾಜ್ಞೆಯನ್ನು ಹೊರಡಿಸಿ ಅದನ್ನು ತಡೆಗಟ್ಟಬೇಕೆಂದು ನಾನು ಹೇಳುತ್ತಿದ್ದೇನೆ.

ನಂತರ ಅರ್ಬನ್ ಡೆವಲಪ್‌ಮೆಂಟ್ ಬಗ್ಗೆ ಮೂರು ಮುಖ್ಯವಾದ ಅಂಶಗಳನ್ನು ಗಮನಿಸ ಬೇಕಾಗಿದೆ. ಪ್ರಮುಖವಾದುದು ಯಾವುದೆಂದರೆ ಬೆಂಗಳೂರು ನಗರ ಮೇಲಕ್ಕೆ ಹೋಗಬೇಕೋ, ಅಥವಾ ಅಗಲವಾಗಿ ಬೆಳೆಯಬೇಕೋ ಎಂಬುದು. ಇದರ ಬಗ್ಗೆ ಹಲವಾರು ಸಲ ಚರ್ಚೆಯಾಗಿದೆ ಸಾರಿಗೆ ವ್ಯವಸ್ಥೆ ಹಾಗೂ ಮನೆಗಳ ವ್ಯವಸ್ಥೆ. ಇವೆರಡರ ಬಗ್ಗೆಯೂ ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವುಗಳ ಬೇಡಿಕೆ ಬಂದಾಗ ಮಾತನಾಡುತ್ತೇನೆ. ಈ ಮೂರು ವ್ಯವಸ್ಥೆಗಳನ್ನು ಸರಿಯಾಗಿ ಮಾಡಬೇಕಾದರೆ ಅವುಗಳಿಗೆ ಮುಖ್ಯವಾಗಿ ಹಣ ಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ

ಹೇಳುವುದಾದರೆ. ಇನ್ನು ಮುಂದೆ ಒಂದು ವೇಳೆ ಬೆಂಗಳೂರು ನಗರ ಬೆಳೆಯಬೇಕೆಂದಿದ್ದರೆ ಅದು ಮೇಲಕ್ಕೆ ಬೆಳೆಯಬೇಕೆ ವಿನಹ ಅಗಲವಾಗಿ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಈಗಾಗಲೇ ಗ್ರೀನ್ ಬೆಲ್ಟ್ ಎಂಬುದಾಗಿ ಮಾಡಿದ್ದೀರಿ. ಅದನ್ನು ಸರಿಯಾದ ರೀತಿಯಲ್ಲಿ ಮಾಡಿ. ಯಾವುದೇ ಕಾರಣದಿಂದ ಅದನ್ನು ಮುಂದೆ ಹಾಕುವಂತಹ ಕೆಲಸವನ್ನು ಮಾತ್ರ ದಯಮಾಡಿ ಮಾಡಬೇಡಿ ಎಂಬುದಾಗಿ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಾರಿಗೆ ವ್ಯವಸ್ಥೆಯ ಬಗ್ಗೆ ಹೇಳುವುದಕ್ಕಾಗುವುದಿಲ್ಲ ಅದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಅದಕ್ಕೆಲ್ಲಾ ಫಂಡ್ ಇರಬೇಕು. ಮಾನ್ಯ ನಾರಾಯಣರಾವ್ ರವರು ಹಾಗೂ ಧರ್ಮಸಿಂಗ್‌ರವರು ಫಂಡ್ಸ್ ರಿಸೋರ್ಸ್‌ಸ್ ಬಗ್ಗೆ ಮಾತನಾಡಿದ್ದಾರೆ. ಸರ್ಕಾರ ಶ್ರೀಮಾನ್ ಲಕ್ಷ್ಮಣರಾವ್‌ರವರ ನೇತೃತ್ವದಲ್ಲಿ ನೇಮಿಸಿದಂತಹ ಸಮಿತಿ ಯಾವ ರೀತಿಯ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ ಎಂಬುದು ನನಗಂತೂ ಗೊತ್ತಿಲ್ಲ. ನಗರಸಭೆ ಗಳಲ್ಲಿ ಹಾಗು ಪುರಸಭೆಗಳಲ್ಲಿ ಹಣ ಇಲ್ಲ. ಹಣದ ರಿಸೋರ್ಸಸ್ ಇಲ್ಲ ಏನು ಮಾಡಬೇಕು? ಅದಕ್ಕೆ ತಿರುಗಿ ಆಕ್ಟ್ರಾಯಿಯನ್ನು ಹಾಕಬೇಕೆಂದು ಕೆಲವರು ಹೇಳಿದ್ದಾರೆ. ಆದರೆ ತಕ್ಷಣದಿಂದ ಆಕ್ಟ್ರಾಯಿಯನ್ನು ಮತ್ತೊಮ್ಮೆ ಹಾಕುವಂತಹದ್ದು ಸಾಧುವಾದುದಲ್ಲ. ಆದರೆ ಆಕ್ಟ್ರಾಯಿಯನ್ನು ರದ್ದು ಮಾಡಿರುವುದರಿಂದ ಪರಿಹಾರವನ್ನು ಪುರಸಭೆಗಳಿಗೆ ಯಾವ ರೀತಿ ಕೊಡಬೇಕೆಂಬುದರ ಬಗ್ಗೆ ಯೋಚನೆ ಮಾಡಬೇಕೆಂದು ನಾನು ಹೇಳುತ್ತೇನೆ. ಅದೇ ರೀತಿಯಲ್ಲಿ ಮೋಟಾರು ವಾಹನ ತೆರಿಗೆಯಲ್ಲಿ ಹಾಗೂ ಇತರೆ ತೆರಿಗೆಗಳಲ್ಲಿ ಇನ್ನೂ ಒಂದು ಅಂಶ ಹೆಚ್ಚು ಹಣವನ್ನು ನಗರಸಭೆಗೆ ನಗರ ಪಾಲಿಕೆಗಳಿಗೆ ಹಾಗೂ ಪುರಸಭೆಗಳಿಗೆ ಕೊಟ್ಟರೆ ಅವರು ತಮ್ಮ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಬೆಂಗಳೂರು ನಗರ ಸಭೆಯ ಬಗ್ಗೆ ಹೇಳುವುದಾದರೆ, ಇವತ್ತು ಏನು ಹಣವನ್ನು ಖರ್ಚು ಮಾಡುತ್ತಿದ್ದೀರಿ, ಅದನ್ನು ಹಿಂದಿನ ವರ್ಷಗಳಿಂದ ಕಡಿಮೆ ಮಾಡಿದ್ದೀರಿ ಎಂಬುದಾಗಿ ಮಾನ್ಯ ಧರ್ಮಸಿಂಗ್‌ರವರು ಹೇಳಿದ್ದಾರೆ. ತಾವೇ ಒದಗಿಸಿರತಕ್ಕಂತಹ "ಗೃಹ ನಿರ್ಮಾಣ ಮತ್ತು ನಗರಾಭಿವೃದ್ಧಿ ಇಲಾಖೆಯ ನಿರ್ವಹಣಾ ಮುಂಗಡ ಪತ್ರ ೧೯೮೫-೮೬" ಇದರ ಪೇಜ್ ನಂ. ೧೩ ೧೪ ಹಾಗೂ ೧೫ರಲ್ಲಿ ಕೊಟ್ಟಿದ್ದೀರಿ. ದಯಮಾಡಿ ನೋಡಿ. ಬರುಬರುತ್ತಾ ಜಾಸ್ತಿ ಹಣವನ್ನು ಖರ್ಚು ಮಾಡುವ ಬದಲು ಕಡಿಮೆ ಖರ್ಚು ಮಾಡುತ್ತಿದ್ದೀರಿ. ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ಗೆ ಕಡಿಮೆ ಖರ್ಚು ಮಾಡುತ್ತಿದ್ದೀರಿ. ಬೆಂಗಳೂರು ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಗೆ ನೀರು ಸರಬರಾಜು ಮಾಡುವ ಸಲುವಾಗಿ ೧೯೮೪-೮೫ನೇ ಸಾಲಿನಲ್ಲಿ ೩೮೪ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ, ಈ ವರ್ಷ ಅಂದರೆ ೧೯೮೫-೮೬ನೇ ಸಾಲಿನಲ್ಲಿ ೩೬೦.೩೯ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ನಂತರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥಾ ಮಂಡಳಿಯ ಸಾಲಗಳಿಗೆ ಮಾರ್ಗೋಪಾಯಗಳು ಇದರಲ್ಲೂ ಕೂಡ ಕಡಿಮೆ ಮಾಡಿದ್ದೀರಿ. ಅದೇ ರೀತಿ ಕೊಳಚೆ ನಿರ್ಮೂಲನಾ ಮಂಡಳಿಗೆ ಅನುದಾನಗಳು ೧೯೮೪-೮೫ರಲ್ಲಿ ೧೭೫.೦೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ. ಈ ಸಾಲಿನಲ್ಲಿ ೧೧೧.೦೦ ಲಕ್ಷ ರೂಪಾಯಿಗಳಿಗೆ ಇಳಿಸಿದ್ದೀರಿ. ಅದೇ ರೀತಿ ಕೊಳಚೆ ನಿರ್ಮೂಲನಾ ಯೋಜನೆ ನಗರ ಕೊಳಗೇರಿಗಳ ಪರಿಸರ ಅಭಿವೃದ್ಧಿಗಾಗಿ ಹಿಂದೆ ೩೧೮.೦೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ, ಈ ಸಾರಿ ೨೭೦.೯೧ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ನಂತರ ಆಕ್ಟ್ರಾಯಿ ಪರಿಹಾರ ಸ್ವಲ್ಪ ಜಾಸ್ತಿ ಮಾಡಬೇಕು. ಅದರ ಬಗ್ಗೆ ಬಹಳ ಟೀಕೆಗಳಾಗಿವೆ. ನಂತರ ಟ್ರಸ್ಟ್ ಬೋರ್ಡ್ ಬಗ್ಗೆ (ಈಗಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ಕೆಲವೇ ಅಧಿಕಾರಿಗಳನ್ನು ಬಿಟ್ಟರೆ ಸುಮಾರು ಎಲ್ಲರೂ ಭ್ರಷ್ಟಾಚಾರ ಮಾಡುತ್ತಿದ್ದಾರೆ. ಅದನ್ನು ಭ್ರಷ್ಟಾಚಾರ ಡೆವಲಪ್‌ಮೆಂಟ್ ಅಥಾರಿಟಿ ಎಂದು ಹಿಂದೆ ಹೇಳಿದ್ದೆ. ನಾನೂ ಕೂಡ ಇದರ ಸದಸ್ಯನಾಗಿದ್ದೆ. ಆ ಒಂದು ಪ್ರಾಧಿಕಾರವನ್ನು ಬಡಾವಣೆಗಳನ್ನು ಮಾಡುವ ಸಲುವಾಗಿ ವ್ಯವಸ್ಥಿತವಾಗಿ ಬೆಳಸಬೇಕೆಂದು ಸಲಹೆಯನ್ನು ಮಾಡುತ್ತಿದ್ದೇನೆ. ಕಾರ್ಪೊರೇಷನ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದರೆ, ಅಲ್ಲಿರುವ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗುತ್ತದೆಯೋ ? ಆ ಧೈರ್ಯ ನಿಮಗೆ ಇದೆಯೋ ಎಂಬ ಪ್ರಶ್ನೆಯನ್ನು ನಿಮಗೆ ನಾನು ಹಾಕಬೇಕಾಗುತ್ತದೆ. ಒಬ್ಬರು ಒಳ್ಳೆಯ ಅಧಿಕಾರಿ ಅಲ್ಲಿ ಇದ್ದರು. ಅವರನ್ನು ಈಗ ವರ್ಗ ಮಾಡಿ ಬೇರೆ ಕಡೆಗೆ ಕಳುಹಿಸುತ್ತಿದ್ದೀರಿ. ಬರುವ ಅಧಿಕಾರಿ ಯಾವ ರೀತಿ ಇರುತ್ತಾರೋ ನನಗೆ ಗೊತ್ತಿಲ್ಲ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ. ಅದೇ ರೀತಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಮತ್ತೊಂದು ಸಮಸ್ಯೆ ಇದೆ. ಈ ರೆವಿನ್ಯೂ ಸೈಟ್ಸ್‌ಗಳ

ಪ್ರಶ್ನೆ ಬಹಳ ಮುಖ್ಯವಾದುದು. ಅದನ್ನು ಇತ್ಯರ್ಥ ಮಾಡಬೇಕಾಗಿದೆ. ಮತ್ತೆ ನೀವು ಬಡಾವಣೆಗಳನ್ನು ಮಾಡುವಾಗ ಮೊದಲು ರಸ್ತೆ, ನೀರು, ದೀಪ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಮಾಡಿ ನಂತರ ನಿವೇಶನಗಳನ್ನು ಅಲಾಟ್ ಮಾಡಿ. ಈಗ ಏನಾಗಿದೆ ಎಂದರೆ, ಮೊದಲು ನಿವೇಶನಗಳನ್ನು ಕೊಡುತ್ತೀರಿ, ನಂತರ ನೀರು, ದೀಪ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಮಾಡುತ್ತೀರಿ. ಇವೆಲ್ಲಾ ಬರುವವರಗೂ ನಿವೇಶನದಲ್ಲಿ ಮನೆಯನ್ನು ಕಟ್ಟಿಕೊಂಡಿರತಕ್ಕಂತಹವನು ಎಷ್ಟೋ ವರ್ಷಗಳ ಕಾಲ ಈ ಯಾವ ವ್ಯವಸ್ಥೆಯೂ ಇಲ್ಲದೆ ಇರಬೇಕಾಗುತ್ತದೆ. ಇದು ಆಗದ ಹಾಗೆ ನೋಡಿಕೊಳ್ಳುವುದು. ಮತ್ತೆ ನಿವೇಶನಗಳನ್ನು ಹಂಚುವ ಕ್ರಮದಲ್ಲಿ ಹಿಂದೆ ಬಿ.ಡಿ.ಎ. ಅಧ್ಯಕ್ಷರಾಗಿದ್ದಂತಹ ಶ್ರೀಮಾನ್ ಬಸವಯ್ಯನವರು ಒಳ್ಳೆಯ ಪದ್ಧತಿಯನ್ನು ಅನುಸರಿಸಿದ್ದರು. ಅದೇ ಪದ್ಧತಿಯನ್ನೇ ತಾವು ಅನುಸರಿಸಿಕೊಂಡು ಬರಬೇಕು. ಮತ್ತೆ ಬದಲಿ ಸೈಟುಗಳನ್ನು ಕೊಡುವಂತಹ ಸುಮಾರು ೧೨,೦೦೦ ಇವೆ. ಕಾರಣ ಬಿ.ಡಿ.ಎ. ನವರು ಬಡಾವಣೆಗಳನ್ನು ಮಾಡುವಾಗ ರಸ್ತೆಗೆ ಅಡ್ಡಲಾಗಿ ಬಂದಿರುವಂತಹ ನಿವೇಶನಗಳು ಹಾಗೂ ಮನೆಗಳು ಇವೆ. ಅವುಗಳಿಗೆ ಬದಲಿ ಸೈಟುಗಳನ್ನು ಕೊಡುವಂಥದ್ದು ಮುಖ್ಯವಾದುದು. ೧೯೭೧ನೇ ಇಸವಿಯಿಂದಲೂ ಈ ವ್ಯವಹಾರ ನಡೆಯುತ್ತಿದೆ. ಅನೇಕ ನಿದರ್ಶನಗಳು ಇವೆ. ಬೇಕಾದಷ್ಟು ಜನ ನನಗೆ ವಿವರಗಳನ್ನು ತಂದು ಕೊಟ್ಟಿದ್ದಾರೆ. ಆದ್ದರಿಂದ ದಯಮಾಡಿ ಇನ್ನು ಮುಂದೆ ಹೊಸದಾಗಿ ಬಡಾವಣೆಗಳನ್ನು ಮಾಡುವಾಗ ಶೇಕಡ ೫೦ ರಷ್ಟನ್ನಾದರೂ ಈ ರೀತಿ ಸೈಟುಗಳನ್ನು ಕಳೆದುಕೊಂಡಂತಹವರಿಗೆ ಕೊಟ್ಟು ಈ ಒಂದು ಸಮಸ್ಯೆಯನ್ನು ಮೊದಲು ನಿವಾರಣೆ ಮಾಡಬೇಕು. ನಗರದಲ್ಲಿ ಅಗ್ರಹಾರ ದಾಸರಹಳ್ಳಿ ಹಾಗೂ ಸಾಣೇ ಗುರುವನಹಳ್ಳಿಯ ಕೆರೆಗಳು ಇವೆ. ಅಲ್ಲಿಗೆ ಸಿವಿರೇಜ್ ವಾಟರ್ ಬಂದು ನೀರೆಲ್ಲಾ ಮಲಿನವಾಗಿದೆ. ಆದ್ದರಿಂದ ಆ ಕೆರೆಗಳನ್ನು ಬ್ರೀಚ್ ಮಾಡಿ ಚರಂಡಿ ಮೂಲಕ ಆ ನೀರು ಹರಿಯುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತಲೇ ಇದ್ದೇವೆ. ಆದರೆ ಇದುವರೆವಿಗೂ ಅದನ್ನು ಮಾಡಿಲ್ಲ. ದಯಮಾಡಿ ಆ ಕೆಲಸವನ್ನು ಕೂಡಲೇ ಮಾಡಿಕೊಡಬೇಕೆಂದು ಹೇಳುತ್ತೇನೆ. ನಂತರ ನೀರು ಸರಬರಾಜು ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ಸ್ನೇಹಿತರಾದ ಶ್ರೀಮಾನ್ ನಾರಾಯಣರಾವ್‌ರವರು ಕಾವೇರಿ ೩ನೇ ಹಂತದ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಕಾವೇರಿ ೩ನೇ ಹಂತದ ಯೋಜನೆಯನ್ನು ತೆಗೆದುಕೊಂಡಾಗೂ ಬೆಂಗಳೂರು ನಗರದ ನೀರಿನ ಸಮಸ್ಯೆ ತಪ್ಪುವುದಿಲ್ಲ. ರಾಜಾಜಿನಗರ ಏರಿಯಾದಲ್ಲಿ ೨ ದಿವಸಕ್ಕೊಮ್ಮೆ ನೀರನ್ನು ಬಿಡುತ್ತಾರೆ. ಮಳೆ ಕೂಡ ಬರಲಿಲ್ಲ. ಶಿವಬಾಲ ಯೋಗಿಯವರನ್ನು ಕರೆದುಕೊಂಡು ಹೋಗಿ ಮಳೆ ಬರುವುದಕ್ಕೆ ಜಪ ಮಾಡಿಸಿದಿರಿ. ಆದರೂ ಬರಲಿಲ್ಲ. ನಮ್ಮ ವಿಜ್ಞಾನ ಇಷ್ಟೊಂದು ಅಭಿವೃದ್ಧಿಯಾಗಿದ್ದರೂ ನಮ್ಮ ದೇಶದಲ್ಲಿ ಮಳೆ ಬರಿಸುವುದಕ್ಕೋಸ್ಕರ ಶಿವಬಾಲ ಯೋಗಿಗಳನ್ನು ಕರೆದುಕೊಂಡು ಹೋಗಿ ಜಪ ಮಾಡಿಸುತ್ತೀರಿ. ಬೇರೆ ರಾಷ್ಟ್ರದಲ್ಲಿ ವಿಜ್ಞಾನ ಎಷ್ಟು ಬೆಳೆದಿದೆ ಎಂದರೆ, ಮಳೆಯನ್ನು ನಿಲ್ಲಿಸುವಂತಹ ವಿಜ್ಞಾನ ಬೆಳೆದಿದೆ ಮೊನ್ನೆ ದಿವಸ ಮಾಸ್ಕೋ ನಗರದಲ್ಲಿ ಯಾವ ರೀತಿ ಮಳೆ ಬರುವಂತಹ ಪರಿಸ್ಥಿತಿಯಲ್ಲಿದ್ದಂತಹ ಮೋಡವನ್ನು ಚದುರಿಸಿ ಮಳೆಯು ೮ ದಿವಸಗಳ ಕಾಲ ಬಾರದ ಹಾಗೆ ಮಾಡಿದರು ಎಂಬುದಾಗಿ ಪತ್ರಿಕೆಯಲ್ಲೇ ಬಂದಿದೆ. ಅದನ್ನು ಯಾವ ರೀತಿ ತಡೆಗಟ್ಟಿದ್ದಾರೆಂಬುದು ಈ ರೀತಿ ಇದೆ.

"How the weather was managed is itself an interesting story. At the opening the weather was excellent, although the previous few days it had been very bad. it was the only factor of dissappointment as delegates arrived. But on the opening day the sun came out and the sky was beautiful blue. The weather was to a great extent manmade.

Soviet aviation and technique were used to disperse thunder clouds as special cartridges of silver iodied and three hundred kilos of granulated carbonid acid were scattered by plane at an attitude of 6000 meters at a distance of 40 kilometers from Moscow over the capital's surroundings. The operation to make sunny weather was successfully, the

cyclone which had brought thunder and rains was dispersed to the great joy of all.''

೫–೩೦ . ಎಂ.

ಕೊನೆಯದಾಗಿ ಇಷ್ಟು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕಾವೇರಿ ನಾಲ್ಕನೇ ಯೋಜನೆಯನ್ನು ದಯವಿಟ್ಟು ತನ್ನಿ. ಇದರ ಬಗ್ಗೆ ಈಗಲೇ ವ್ಯವಸ್ಥೆ ಮಾಡಿ, ಇನ್ನು ರಾಜಾಜಿನಗರಕ್ಕೆ ನಾಲ್ಕು ಕೋಟಿ ರೂಪಾಯಿಗಳ ವೆಚ್ಚದಲ್ಲಿ ೩೦ ಇಂಚ್ ಪೈಪ್ ಹಾಕಿರುವುದರಿಂದ ಜನರು ತಮಗೆ ಶಾಪ ಹಾಕುತ್ತಿರುತ್ತಾರೆ. ಅವರು ದಂಗೆ ಏಳುವ ಪರಿಸ್ಥಿತಿ ಬಂದರೂ ಬರಬಹುದು. ನಾಲ್ಕು ಕೋಟಿ ವೆಚ್ಚದ ಪ್ರಾಜೆಕ್ಟ್ ಏನು ಇದೆ ಆದರಿಂದ ನೀರು ತೆಗೆದುಕೊಂಡು ಬರುವುದಕ್ಕೆ ಏರ್ಪಾಡು ಮಾಡಿ. ಮೂವತ್ತೂರು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕೇತಮಾರನಹಳ್ಳಿಯಿಂದ ಸಿರಸಿ ಸರ್ಕಲ್‌ಗೆ ಸೇರಿಸಿ ನೀರನ್ನು ಸರಬರಾಜು ಮಾಡತಕ್ಕಂಥ ವ್ಯವಸ್ಥೆಯನ್ನು ಕೂಡಲೇ ಮಾಡಿ. ಇನ್ನು ಬೋರ್‌ವೆಲ್‌ಗಳನ್ನು ಜಾಸ್ತಿ ಮಾಡಿ. ತಾನು ೫೦ ಬೋರ್‌ವೆಲ್‌ಗಳನ್ನಾದರೂ ತೋಡಿಸಿ. ಪಿ.ಡಬ್ಲ್ಯೂ.ಡಿ. ಇಲಾಖೆ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅದು ಡೈನಮಿಕ್ ಆಗಿ ಕೆಲಸ ಮಾಡಬೇಕು. ಅಂಥ ಜನರನ್ನೇ ಅಲ್ಲಿಗೆ ನೇಮಿಸಬೇಕು. ಮಾನ್ಯ ಸಚಿವರು ನಮ್ಮ ಜೊತೆಯಲ್ಲಿ ಜಿಂದಾಬಾದ್ ಎಂದು ಬರುತ್ತಿದ್ದರು. ಈಗ ಏಕೋ ಸ್ವಲ್ಪ ಮೌನ್ಯರಾಗಿರುತ್ತಾರೆ. ಅವರು ಸ್ವಲ್ಪ ಡೈನಮಿಕ್ ಆಗಿ ಇರಬೇಕು. ಹಿಂದೆ ವಾಟರ್ ಸಪ್ಲೈ ಬೋರ್ಡ್‌ನಲ್ಲಿ ಮಾನ್ಯ ಮಗದಂ ಎಂದು ಚೇರ್‌ಮನ್‌ರಾಗಿದ್ದರು. ಅವರ ಬಗ್ಗೆ ಹೇಳಬೇಕಾಗಿಲ್ಲ. ಬೇರೆ ವಿಷಯ. ಅವರಂತೆ ಇನ್ನೊಬ್ಬರು ಗುಲಾಮ್ ಮಹಮದ್ ಎಂದು ಇರುತ್ತಾರೆ. ಅಂಥವರನ್ನು ಹಾಕಿದರೆ ಏನಾದರೂ ಪ್ರಯೋಜನವಾಗಬಹುದು. ಇಲ್ಲದಿದ್ದರೆ ವಾಟರ್ ಸಪ್ಲೈ ಬೋರ್ಡ್‌ಗೆ ಜನರು ಹಾಕತಕ್ಕಂಥ ಶಾಪಕ್ಕೆ ತಾವೂ ಕೂಡ ಗುರಿಯಾಗಬೇಕಾಗುತ್ತದೆಂದು ಇಷ್ಟು ಮಾತುಗಳನ್ನು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲ್).—ಮಾನ್ಯ ಅಧ್ಯಕ್ಷರೇ ನಗರಾಭಿವೃದ್ಧಿಯ ಬಗ್ಗೆ ನಮ್ಮ ಸ್ನೇಹಿತರು ಬಹಳವಾಗಿ ಮಾತನಾಡಿರುತ್ತಾರೆ ನಾನು ನ್ಯಾಯಾಂಗದ ಬಗ್ಗೆ ಸ್ವಲ್ಪ ಮಾತನಾಡಬೇಕೆಂಬ ಉದ್ದೇಶದಿಂದ ಎದ್ದು ನಿಂತಿದ್ದೇನೆ. ಈ ನ್ಯಾಯಾಂಗ ವ್ಯವಸ್ಥೆ ನಮ್ಮ ಸ್ನೇಹಿತರು ಹೇಳಿದಂತೆ ಇದು ಒಂದು ದೂರಂಬಾರದಂಥ ವ್ಯವಸ್ಥೆ. ಬಂಡವಾಳಶಾಹಿ ಮತ್ತು ಜಮೀನುದಾರರಿಗೆ ಅನುಕೂಲವಾಗುವಂಥ ವ್ಯವಸ್ಥೆ ಏನು ಇದೆ ಅದನ್ನು ಕಾಪಾಡುವುದಕ್ಕೆ ಇರತಕ್ಕಂಥ ಒಂದು ಇಲಾಖೆ ಎಂದು ಹೇಳಿದರೆ ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ನ್ಯಾಯಕ್ಕಾಗಿ ಕೋರ್ಟಿಗೆ ಎಳೆಯುತ್ತೇನೆಂದರೆ ಬಡವರು ಬೆಚ್ಚಿ ಬೀಳತಕ್ಕಂಥ ಒಂದು ವ್ಯವಸ್ಥೆ ನಮ್ಮಲ್ಲಿ ಇದೆ. ಈ ರೀತಿ ಇರತಕ್ಕಂಥ ವ್ಯವಸ್ಥೆಯಲ್ಲಿ ಯಾವ ರೀತಿಯಾಗಿ ನ್ಯಾಯ ಸಂಪಾದನೆ ಮಾಡುತ್ತೇವೆಯೋ ಅದು ನಿಜವಾಗಿಯೂ ಅರ್ಥವಾಗುತ್ತಿಲ್ಲ. ಮುನ್ಸೀಫ್ ಕೋರ್ಟಿಗೆ ಹೋದರೆ ನಾಲ್ಕು ವರ್ಷ, ಸಿವಿಲ್ ಜಡ್ಜ್ ಕೋರ್ಟಿಗೆ ಹೋದರೆ ಮೂರು ವರ್ಷ. ಉಚ್ಚ ನ್ಯಾಯಾಲಯಕ್ಕೆ ಹೋದರೆ ಕನಿಷ್ಟ ಎಂಟು ವರ್ಷಗಳಾದರೂ ಬೇಕಾಗುತ್ತದೆ. ಇಲ್ಲಿಗೆ ನ್ಯಾಯಕ್ಕಾಗಿ ಹೋದರೆ ಅದು ತೀರ್ಮಾನವಾಗಿ ಬರುವುದರೊಳಗೆ ಯಾರು ಬದುಕಿರುತ್ತಾರೋ ಯಾರು ಸತ್ತಿರುತ್ತಾರೋ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಬಗೆ ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಚೆನ್ನಾಗಿ ತಿಳಿದಿರುತ್ತದೆ. ಎಲ್ಲರೂ ಹೇಳುತ್ತಾರೆ ಜಸ್ಟೀಸ್ ಕೇಸನ್ನು ಇತ್ಯರ್ಥಗೊಳಿಸುವಷ್ಟರಲ್ಲಿ ಬೇಜಾರುಬಿದ್ದು ಮುದುಕರಾಗಿ ರಾಜಿ ಮಾಡಿಕೊಂಡಿರತಕ್ಕಂಥ ಸಂದರ್ಭಗಳು ಅನೇಕ ಇರತ್ತವೆಂದು. ಅಕಸ್ಮಾತ್ ಅವರು ಸತ್ತು ಅವರ ಮಕ್ಕಳು ನಾವು ಏತಕ್ಕೆ ಕೋರ್ಟಿಗೆ ಅಲೆಯಬೇಕೆಂದು ರಾಜಿ ಮಾಡಿಕೊಳ್ಳೋಣ ಎನ್ನುವ ಪರಿಸ್ಥಿತಿಗೆ ಬಂದಿರತಕ್ಕಂಥ ನಿದರ್ಶನಗಳೂ ಇರುತ್ತವೆ. ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯಲೇಬೇಕು. ಯಾವುದೇ ಯಾವುದೇ ಒಂದು ಕೇಸನ್ನೂ ಉಚ್ಚ ನ್ಯಾಯಾಲಯದಲ್ಲಿ ಸರಿಪಡಿಸುತಾರೆಂದು ಕುಳಿತುಕೊಂಡಿರುವಾಗ ಅದು ಸೆಕೆಂಡ್ ಅಪೀಲ್ ಬಂದರೆ ಇನ್ನು ಎಂಟು ವರ್ಷಗಳಕಾಲ ಹಿಡಿಯುತ್ತದೆ. ಆದ್ದರಿಂದ ಈಗಿರತಕ್ಕಂಥ ಉಚ್ಚ ನ್ಯಾಯಾಧೀಶರುಗಳನ್ನು ಡಬ್ಬಲ್ ಮಾಡಿದರೆ ನಾಲ್ಕು ವರ್ಷಗಳಲ್ಲಿಯೇ ಕೇಸ್ ಇತ್ಯರ್ಥವಾಗಿ ಬರುತ್ತದೆ ಎನ್ನುವ ಆಶಯದಿಂದಿರಬಹುದು. ಅದನ್ನಾದರೂ ಮಾಡಬೇಕು. ಇದರ ಬಗ್ಗೆ ಸೆಂಟ್ರಲ್ ಗೌವರ್ನ್‌ಮೆಂಟ್ ಪರ್ಮಿಷನ್ ತೆಗೆದುಕೊಳ್ಳಬೇಕಾಗಿದ್ದರೆ ಪರ್ಮಿಷನ್ ತೆಗೆದುಕೊಂಡು ಯಾವ ರೀತಿಯಾದರೂ ಜಸ್ಟೀಸ್ ಸಂಖ್ಯೆಯನ್ನು ಜಾಸ್ತಿ ಮಾಡದೇ ಹೋದರೆ ನ್ಯಾಯ ವಿತರಣೆ

ಮಾಡುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಇವೊತ್ತಿನ ದಿವಸ ನ್ಯಾಯಾಂಗ ಎಂದರೆ ಒಂದು ಮೋಸದ ವ್ಯವಸ್ಥೆ, ಒಂದು ಅನ್ಯಾಯ ವ್ಯವಸ್ಥೆ ಎನ್ನುವ ಪರಿಸ್ಥಿತಿ ಬಂದಿದೆ.

ನಮ್ಮ ಕರ್ನಾಟಕದಲ್ಲಿ ನ್ಯಾಯಾಲಯದ ವ್ಯವಸ್ಥೆ ಯಾವ ರೀತಿ ಇದೆ ಎಂದರೆ ತಾಲ್ಲೂಕಿಗೆ ಒಂದು ನ್ಯಾಯಾಲಯವೂ ಇಲ್ಲ. ದುರಾದೃಷ್ಟವಶಾತ್ ನಮ್ಮ ತಾಲ್ಲೂಕಿಗೆ ಒಂದು ನ್ಯಾಯಾಲಯವನ್ನು ಕೊಟ್ಟಿಲ್ಲ. ಯಾವುದಾದರೂ ಒಂದು ಕೇಸ್ ತೆಗೆದುಕೊಂಡು ಹೋದರೆ ಅದು ತೀರ್ಮಾನವಾಗಬೇಕಾದರೆ ಕನಿಷ್ಟ ನಾಲ್ಕು ವರ್ಷಗಳಾದರೂ ಬೇಕಾಗುತ್ತದೆ. ನಮ್ಮ ಮುಳಬಾಗಲು ತಾಲ್ಲೂಕಿನವರು ಕೋಲಾರಕ್ಕೆ ಹೋಗಬೇಕಾಗಿರುತ್ತದೆ. ಇಲ್ಲಿಂದ ೩೦-೪೦ ಮೈಲಿಯಾಗುತ್ತದೆ. ಇದನ್ನು ತಪ್ಪಿಸಬೇಕು. ತಾಲ್ಲೂಕಿಗೆ ಒಂದು ನ್ಯಾಯಾಲಯವನ್ನಾದರೂ ಕೂಡಲೇ ಕೊಡಬೇಕು. ಇನ್ನು ಮುನ್ಸೀಫ್ ನ್ಯಾಯಾಲಯದಲ್ಲಿರ ತಕ್ಕಂಥ ಮುನ್ಸೀಫ್‌ರ್‌ಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಡತಕ್ಕಂಥ ವ್ಯವಸ್ಥೆ ಇರುತ್ತದೆ. ಇದು ಬಹಳ ಕಡಿಮೆ ಇರುತ್ತದೆ. ಕೆ ಎಸ್.ಆರ್‌ಟಿ.ಸಿ.ಯ ಒಬ್ಬ ಸೀನಿಯರ್ ಕಂಡಕ್ಟರ್ ತೆಗೆದು ಕೊಳ್ಳತಕ್ಕಂಥ ಸಂಬಳ 'ಎರಡು ಸಾವಿರ' ರೂಪಾಯಿಗಳ ಮೇಲ್ಪಟ್ಟು ಇರುತ್ತದೆ. ಮುನ್ಸೀಫರ್ ಆಗಬೇಕಾದರೆ ಅವರು ಬಿ.ಎ.ಬಿ.ಎಲ್. ಮಾಡಿರಬೇಕು. ಅವರು ಏನೆಂದರೆ ಒಂದು ಕಪ್ಪು ಕೋಟನ್ನು ಧರಿಸಿರುತ್ತಾರೆ, ತೆಳ್ಳನೆಯ ನಾಲ್ಕು ಗಜ ಗೌನ್ ಧರಿಸಿರುತ್ತಾರೆ. ಅವರನ್ನು ಕೇಳುವವರೇ ಇರುವುದಿಲ್ಲ. ಗ್ರಹಚಾರ ಇದನ್ನು ಬಿಟ್ಟು ಬಿಟ್ಟು ಹೇಗಬೇಕೆನಿಸಿರುತ್ತದೆ. ಇದನ್ನು ಅವರು ನೋಡಿಕೊಂಡು ಸಂತೋಷದಿಂದ ಇರಬೇಕು. ಸ್ವಲ್ಪ ಪ್ರಾಕ್ಟೀಸ್ ಇರತಕ್ಕಂಥವರು ಮುನ್ಸಿಫರ್‌ಆಗಿ ಬರುವುದೇ ಇಲ್ಲ. ಯಾವ ಗ್ರಹಚಾರ ಬೆಳಗಾಂಗೋ, ಧಾರವಾಡಕ್ಕೋ ಟ್ರಾನ್ಸ್‌ಫರ್ ಮಾಡುತ್ತಾರೆಂದು ಮುನ್ಸೀಫರ್ ಆಗಿ ಬರುವುದಕ್ಕೆ ಯಾರೂ ಇಷ್ಟಪಡುವುದೇ ಇಲ್ಲ. ಮೊನ್ನೆ ಸೆಷನ್‌ನಲ್ಲೂ ಕೂಡ ನಾನು ಅವರ ಸಂಬಳ ಸಾರಿಗೆಗಳನ್ನು ಜಾಸ್ತಿ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದೆ. ನಿಜವಾಗಿಯೂ ಕೂಡ ಅವರ ಕೆಲಸ ಅಮಾನುಷ. ಸಿವಿಲ್ ಜಸ್ಟೀಸ್ ಬಗ್ಗೆ ಹೇಳುವುದಾದರೆ ತಮಗೆ ಗೊತ್ತಿರುತ್ತದೆ. ಅವರ ಬಳಿ ಯಾವುದಾದರೂ ಬೇರೆ ವಿಷಯದ ಬಗ್ಗೆ ಮಾತನಾಡಲಿಕ್ಕೆ ಹೋದರೂ ಕೂಡ ಒಂದು ರೀತಿಯಾದ ಸೆಸ್ಷನ್, ಅವರು ಕಪ್ಪು ಬಟ್ಟೆಯನ್ನು ಧರಿಸಿ ವಕೀಲರೊಡನೆ ಕುಳಿತುಬಿಟ್ಟರೆ ಹನ್ನೆರಡು ಗಂಟೆಗಳಾದರೂ ಬಿಡುವು ಆಗುವುದಿಲ್ಲ. ಇಷ್ಟು ಕೆಲಸದ ಹೊರೆ ಇದ್ದರೂ ಅವರಿಗೆ ಒಂದು ಪ್ರಮೋಷನ್ ವ್ಯವಸ್ಥೆ ಇಲ್ಲ. ಸಿವಿಲ್ ಜಸ್ಟೀಸ್ ಕೋರ್ಟ್‌ನ್ನು ಎರಡು ತಾಲ್ಲೂಕುಗಳಿಗೆ ಒಂದನ್ನಾದರೂ ಮಾಡಿ ಡಿಮ್ಯಾಂಡ್ ಇಟ್ಟಿದ್ದೆವು. ಅದರ ಬಗ್ಗೆ ರಿಪೋರ್ಟ್ ಕೊಟ್ಟಿಲ್ಲ. ಡಿಲೇ ಮಾಡುವುದನ್ನು ಬಿಟ್ಟು ಕೇಸ್‌ಗಳ ಇತ್ಯರ್ಥ ವನ್ನು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಜಿಲ್ಲಾ ನ್ಯಾಯಾಧೀಶರಾಗಿ ಬಂದರೆ ಒಂದು ಸಂತೋಷ. ಅದು ಒಂದು ಗೌರವಯುತವಾದ ಕೆಲಸವೆಂದೇ ಜಿಲ್ಲಾ ನ್ಯಾಯಾಧೀಶರಾಗಿ ಕೆಲಸವನ್ನು ವಹಿಸಿಕೊಂಡರೆ ಅವರಿಗೆ ಒಂದು ತರಹದ ಕೆಲಸವಲ್ಲ. ಇಪ್ಪತ್ತು ತರಹದ ಕೆಲಸಗಳು. ಸೆಷನ್ ಟ್ರಯಲ್ಸ್ ಮತ್ತು ಎಂ.ಇ.ಇ ಟ್ರಯಲ್ಸ್ ಎಂದು ಇಬ್ಬರು ನ್ಯಾಯಾಧೀಶರನ್ನು ಇದರ ಬಗ್ಗೆ ನಿಮ್ಮ ಇಲಾಖೆ ಏನು ಮಾಡುತ್ತಿರುತ್ತದೆಯೋ ಗೊತ್ತಿಲ್ಲ. ಸಿವಿಲ್‌ನಲ್ಲಾದರೋ ಡಬ್ಬಲ್ ಇರುತ್ತಾರೆ. ಅವರು ಒಂದು ತೊಂದರೆ ಏನೆಂದು ಹೇಳಿದರೆ ನನಗೆ ಪ್ರಮೋಷನ್ ಕೊಡುವುದಿಲ್ಲ. ಪೋಲೀಸ್‌ನವರಿಗೆ ಡಿಸಿಪ್ಲಿನರಿ ಆಕ್ಷನ್ ಎಂದು ಹೇಳಿಕೊಂಡು ಏಳು ವರ್ಷ ಎಂಟು ವರ್ಷಗಳಾದರೂ ಯಾವ ರೀತಿ ಪ್ರಮೋಷನ್ ಕೊಡುವುದಿಲ್ಲವೋ ಇದೇ ರೀತಿಯಲ್ಲಿ ಈ ಮುನ್ಸೀಫರ್‌ಗಳಿಗೆ ಸಿವಿಲ್ ಜಡ್ಜ್‌ಗಳಾಗಿ ಪ್ರಮೋಷನ್ ಕೊಡುವುದಿಲ್ಲ. ಸರ್ಕಾರದವರು ಕೊಡತಕ್ಕಂಥ ಸಂಬಳಕ್ಕಿಂತ ಹತ್ತರಷ್ಟು ಸಂಪಾದನೆ ಮಾಡಬಹುದು, ನಿಮ್ಮ ಮುನ್ಸೀಫರ್ ಕೆಲಸ ಬೇಡವೆಂದು ಹೇಳುತ್ತಾರೆ. ಇಂಥ ಗೊಡ್ಡು ಬೆದರಿಕೆ ಗಳನ್ನು ಹಾಕುವ ಬದಲು ಅವರಿಗೆ ನ್ಯಾಯ ದೊರಕಿಸಿಕೊಟ್ಟು ಅವರಿಗೆ ಎಲ್ಲಾ ವಿಧವಾದ ಸೌಕರ್ಯ ಗಳನ್ನು ಕೊಡಬೇಕೆಂದು ಹೇಳುತ್ತೇನೆ. ಸಾವಿರಾರು ಎಂ.ವಿ.ಸಿ. ಕೇಸ್‌ಗಳು ಇರುತ್ತವೆ. ಆಕ್ಸಿಡೆಂಟ್ ಆಗಿ ಸತ್ತವರು, ಕೈಮುರಿದುಕೊಂಡವರು ಅಂಥವರಿಗಾದರೂ ಜಾಗ್ರತೆಯಾಗಿ ನ್ಯಾಯ ದೊರಕಬೇಕೆಂದರೆ ಜಸ್ಟೀಸ್‌ಗಳನ್ನು ಜಾಸ್ತಿ ಅಪಾಯಿಂಟ್ ಮಾಡಬೇಕು. ಕೋರ್ಟ್‌ಗಳನ್ನು ಜಾಸ್ತಿ ಮಾಡಬೇಕು. ಅವರಿಗೆ ಎಲ್ಲಾ ವಿಧವಾದ ಫೆಸಿಲಿಟೀಸ್‌ಗಳನ್ನು ಕೊಡಬೇಕು. ಇಲ್ಲದಿದ್ದರೆ ನ್ಯಾಯಾಂಗದ ಒಂದು ವ್ಯವಸ್ಥೆ ಏನು ಇರುತ್ತದೆ ಇದರಿಂದ ಜನತೆಗೆ ಯಾವ ವಿಧವಾದ ಒಂದು ಉಪಯೋಗವೂ ಆಗುವುದಿಲ್ಲ. ಇಲ್ಲಿ ಕೊಟ್ಟಿರತಕ್ಕಂಥ ರಿಪೋರ್ಟ್ ನೋಡಿದರೆ ಕನ್‌ಸಾಲಿಡೇಟ್ ಮಾಡಿ ಕೊಟ್ಟಿರತಕ್ಕಂಥ ಒಂದು ರಿಪೋರ್ಟ್ ಆಗಿರುತ್ತದೆ. ಬಹಳ ಬುದ್ಧಿವಂತರು. ಯಾರು ಇದನ್ನು ತಯಾರು ಮಾಡಿದರೋ ಗೊತ್ತಿಲ್ಲ. ಅಷ್ಟು ಸುಲಭವಾಗಿ ಗೊತ್ತಾಗುವಂತೆ ರಿಪೋರ್ಟ್‌ನ್ನು ತಯಾರು ಮಾಡಿರುವುದಿಲ್ಲ.

ಸುಮಾರು ೬೦ ಸಾವಿರ ಕೇಸ್‌ಗಳು ಎಷ್ಟು ವರ್ಷಗಳಿಂದ ಪೆಂಡಿಂಗ್ ಇದೆ ಎನ್ನುವುದನ್ನು ತಾವು ನೋಡಬೇಕು.

ಸಿವಿಲ್ ಮೊಕದ್ದಮೆಗಳು ಸುಮಾರು ೪ ಲಕ್ಷದ ೮೦ ಸಾವಿರ ಪೆಂಡಿಂಗ್ ಇವೆ. ಕ್ರಿಮಿನಲ್ ಮೊಕದ್ದಮೆಗಳು ಮೂರು ಲಕ್ಷ ಚಿಲ್ಲರೆ ಇವೆ. ಎಂ.ವಿ.ಸಿ. ಇಂಥಾದ್ದು ಉಳಿದ ಮಿಸಿಲೇನಿಯಸ್ ಕೇಸುಗಳು ಪೆಂಡಿಂಗ್ ಇರುವುದು ಸುಮಾರು ಐವತ್ತು ಸಾವಿರ. ಇದನ್ನು ನೋಡಿದರೆ ಎಂತಹ ಗಂಭೀರ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇದೆಯೆಂಬುದು ನಮಗೆ ಗೊತ್ತಾಗುತ್ತದೆ. ನಮ್ಮ ಈ ನ್ಯಾಯಾಂಗ ವ್ಯವಸ್ಥೆ ಬಗ್ಗೆ ನಗಬೇಕೋ ಅಳಬೇಕೋ ಎಂದು ಗೊತ್ತಾಗುವುದಿಲ್ಲ. ಇದನ್ನು ನ್ಯಾಯಾಂಗ ಎಂದು ಕರೆಯುವುದಕ್ಕೆ ನಾವು ತಲೆಬಾಗಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ತಾವು ಕೂಡ ಲಾಯರ್ ಆಗಿದ್ದವರು. ನಾನು ಕೂಡ ಲಾಯರ್ ಆಗಿದ್ದೇನೆ. ನ್ಯಾಯಾಲಯಕ್ಕೆ ಸಂಬಂಧಪಟ್ಟ ಹಾಗೆ ಒಂದು ಗಾಧೆ ಮಾತಿದೆ, ಗೆದ್ದವನು ಸೋತ ಸೋತವನು ಸತ್ತ ಎಂದು ಇದೆ. ಸೋತವನ ವಂಶ ಉದ್ಧಾರವಾಗುವುದಿಲ್ಲ. ರಣಹದ್ದುಗಳು ಕಾದಿದ್ದು ಅವನನ್ನು ತಿಂದುಹಾಕಿರುತ್ತವೆ, ಗೆದ್ದವನೋ, ಈ ಕೋರ್ಟಿನ ವ್ಯವಹಾರ ಜನ್ಮಜನ್ಮಕ್ಕೂ ಬೇಡವೆಂದು ಮನೆಗೆ ಹೋಗಿ ಒಂದು ಕಡೆ ಸತ್ತು ಬಿದ್ದಿರುತ್ತಾನೆ. ಇಂತಹ ಪರಿಸ್ಥಿತಿ ಇದೆ. ನಮ್ಮ ಸ್ನೇಹಿತರು ಏನೋ ಮಾಡುತ್ತೇವೆ, ಎಂದು ಉಚಿತವಾಗಿ ನ್ಯಾಯದ ವ್ಯವಸ್ಥೆ ಕೊಡುತ್ತೇವೆ ಎಂದು ಹೇಳಿದರು ನಿಜವಾಗಿಯೂ ಕೂಡ ಇದು ತಮಿಳುನಾಡಿನಲ್ಲಿ ಸಫಲವಾಗಿದೆಯೆಂದು ಕೇಳಿದ್ದೇನೆ. ಕರ್ನಾಟಕದಲ್ಲಿ ಇದು ಆಗಿಲ್ಲ ಇದಕ್ಕೆ ಕಾರಣ ಸಾಕಷ್ಟು ಪ್ರಚಾರ ಇಲ್ಲವೆಂದು ಹೇಳುತ್ತಾರೆ. ಪ್ರಚಾರಕ್ಕಿಂತ ಇದು ಸಾಕಷ್ಟು ಜನರಿಗೆ ಉಪಯೋಗವಾಗುತ್ತಿಲ್ಲ. ಇದರ ಕಾನ್ಸೆಪ್ಟ್ ಏನಿದೆ ಅದು ಜನರ ಹತ್ತಿರ ಹೋಗಿಲ್ಲ ಈ ಕಾನ್ಸೆಪ್ಟ್ ಏನಿದೆ, ಅದನ್ನು ಜನ ಸೀರಿಯಸ್ ಆಗಿ ತೆಗೆದುಕೊಂಡಿಲ್ಲ, ಉಚಿತ ನ್ಯಾಯ ವ್ಯವಸ್ಥೆ ಏನಿದೆ, ಇದನ್ನು ಬಿರುಸಾಗಿ ಮಾಡಬೇಕು. ನಮ್ಮ ನ್ಯಾಯಾಂಗ ವ್ಯವಸ್ಥೆಯೇ ಆಮೆಯ ನಡಿಗೆಯಲ್ಲಿ ನಡೆಯುತ್ತಿದೆ. ಹೀಗಿರುವಾಗ ಈ ಉಚಿತ ನ್ಯಾಯ ವ್ಯವಸ್ಥೆ ಕೂಡ ಅದೇ ಮಂದಗತಿಯಲ್ಲಿ ನಡೆಯುತ್ತಿದೆಯೆಂದು ಹೇಳದೆ ಗತ್ಯಂತರವಿಲ್ಲ. ಇದರ ಹೊರತು ಈ ವ್ಯವಸ್ಥೆ ಅಂದುಕೊಂಡಷ್ಟು ತೃಪ್ತಿಕರವಾಗಿ ನಡೆಯುತ್ತಿರುವುದು ಕಾಣುತ್ತಿಲ್ಲ. ಇನ್ನು ಈ ವ್ಯವಸ್ಥೆ ಹೀಗೆಯೇ ಮುಂದುವರೆದರೆ, ಜಡ್ಜ್‌ಗಳ ಸಂಬಳ ಜಾಸ್ತಿ ಮಾಡದೇ ಇದ್ದರೆ. ಅವರಲ್ಲೂ ಕೂಡ ಈಗಾಗಲೇ ಕರಪ್ಷನ್ ಪ್ರಾರಂಭವಾಗಿದೆಯೆಂದು ಕೇಳುತ್ತಿದ್ದೇವೆ. ಆ ಮೇಲೆ ರೆವಿನ್ಯೂ ಡಿಪಾರ್ಟ್‌ಮೆಂಟಿನ ಬಿ.ಡಿ.ಓ. ಸಾಹೇಬರು ಆಗಿಬಿಡುತ್ತಾರೆ. ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮಕ್ಕಳಿಗೆ ಸೀಟು ಸಿಗಬೇಕಾದರೆ ಸಾವಿರಾರು ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಒಂದೊಂದು ಮೊಕದ್ದಮೆಯಲ್ಲೂ ಅಷ್ಟಿಷ್ಟು ಸಂಪಾದನೆ ಮಾಡಿ ಗಂಟು ಮಾಡಿಕೊಳ್ಳುವ ಪ್ರವೃತ್ತಿ ಬೆಳೆಯಬಹುದು. ಆದ್ದರಿಂದ ಇದನ್ನು ಮುಖ್ಯವಾಗಿ ಗಮನಿಸಿ ಅವರ ಸಂಬಳ ಸಾರಿಗೆ ಬಗ್ಗೆ ಯೋಚನೆ ಮಾಡಿ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು, ಕೋರ್ಟು ಬಿಲ್ಡಿಂಗ್‌ಗಳ ಬಗ್ಗೆ ಒಂದೆರಡು ಮಾತು ಹೇಳಬೇಕಾಗಿದೆ. ಕೋಲಾರದಲ್ಲಿ ಹೊಸದಾಗಿ ಕಟ್ಟಡ ಕೊಟ್ಟಿದ್ದಾರೆ. ಅಲ್ಲಿ ಹಳೆಯ ಕಟ್ಟಡ ಕೂಡ ಇದೆ. ಅದು ನಮ್ಮ ತಾತನ ಕಾಲದಲ್ಲಿ ಕಟ್ಟಿಸಿದ್ದು ಇದ್ದು, ಮಳೆಗಾಲದಲ್ಲಿ ಮಳೆನಿಂತಮೇಲೆ, ಅಲ್ಲಿ ಮಾತ್ರ ಹದಿನೈದು ದಿವಸವೂ ನೀರು ಸೋರುತ್ತಿರುತ್ತದೆ. ಅಲ್ಲಿ ಶೇಖರಣೆಯಾಗುವ ನೀರು ಮಳೆಯಂತೆ ಸುರಿಯುತ್ತಲೇ ಇರುತ್ತದೆ. ನೋಡುನೋಡುತ್ತಿದ್ದಂತೆಯೇ ಬಟ್ಟೆಗಳು ನೆಂದುಹೋಗುತ್ತವೆ. ನ್ಯಾಯಾಧೀಶರ ತಲೆಯಮೇಲೇ ನೀರು ತೊಟ್ಟಿಕ್ಕುತ್ತಿರುತ್ತದೆ. ಇವರು ಬಹಳ ಸೂಕ್ಷ್ಮಸ್ವಭಾವದವರು. ಇದು ಕೋಲಾರ ಒಂದೇ ಅಲ್ಲ ಎಲ್ಲಾ ಕಡೆಯೂ ಇರತಕ್ಕಂಥ ಪರಿಸ್ಥಿತಿ. ಆಮೇಲೆ ವಕೀಲರ ಬಗ್ಗೆ ಯೋಚನೆ ಮಾಡುವುದಾದರೆ, ಸ್ಟೈಪೆಂಡರಿ ಸ್ಕೀಮ್ ಎಂದು ಇಂಟ್ರಡ್ಯೂಸ್ ಮಾಡಿದರು ಲಾಯರುಗಳಿಗೆ ಐದರಷ್ಟೂ ಕೂಡ ನ್ಯಾಯಾಂಗ ಇಲಾಖೆಯವರು ಕೊಡುತ್ತಿಲ್ಲ ಅವರ ಕಷ್ಟದ ಬಗ್ಗೆ ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಗೊತ್ತಾಗುವುದಿಲ್ಲ. ಅವರು ನಮ್ಮ ಸಹದ್ಯೋಗಿಯಾಗಿ ಕಮ್ಯುನಿಸ್ಟ್ ಪಾರ್ಟಿಯಲ್ಲಿ ಇದ್ದವರು. ಅದೃಷ್ಟವಶಾತ್ ಅವರಿಗೆ ಯಾವ ತಾಪತ್ರಯಗಳೂ ಇಲ್ಲ. ಒಬ್ಬರು ಇದ್ದಿದ್ದರೆ ಆಗ ಕೇಳುತ್ತಿದ್ದರು...

ಶ್ರೀ ಎ. ಲಕ್ಷ್ಮೀಸಾಗರ್.—ಕಷ್ಟಗಳನ್ನು ನಾನು ಕಟ್ಟಿಕೊಂಡಿಲ್ಲ. ತಾವು ಕಟ್ಟಿಕೊಂಡಿದ್ದೀರಿ?

ಶ್ರೀ ಆರ್. ವೆಂಕಟರಾಮಯ್ಯ.—ಲಾಯರ್ ಆದಮೇಲೆ, ಜೂನಿಯರ್ ಆಗಿರುವಾಗ ನಾಲ್ಕೈದು ವರ್ಷ ತಂದೆತಾಯಿಗಳೇ ಸಾಕಬೇಕಾಗುತ್ತದೆ. ಇಲ್ಲದಿದ್ದರೆ ಮಾವ ಸಾಕಬೇಕು ಇಂದು

ಲಾಯರ್ ಕೆಲಸದ ಆಕರ್ಷಣೆಯೇ ಹೊರಟುಹೋಗಿದೆ. ಜೇಬಿನಲ್ಲಿ ಸರಿಯಾಗಿ ಹತ್ತು ರೂಪಾಯಿಗಳು ಇರುವುದಿಲ್ಲ. ಆದರೂ ಅವರು ಠೀವಿಯಿಂದ ಓಡಾಡಿಕೊಂಡಿರುತ್ತಾರೆ. ಸ್ಟೈಪೆಂಡರಿ ಸ್ಕೀಮ್ ಎಂದು ಮಾಡಿ ಲಕ್ಷ್ಮೀಸಾಗರ್ ಅವರು ನೂರಕ್ಕೆ ಇಬ್ಬರು-ಮೂವರಿಗೂ ಇದನ್ನು ಕೊಟ್ಟಿಲ್ಲ. ಈ ಜೂನಿಯರ್ಸ್ ಬಗ್ಗೆ ಜಾಸ್ತಿ ಅನುಕಂಪ ತೋರಿಸಬೇಕಾಗಿತ್ತು. ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಬಡತನದ ಬಗ್ಗೆ ಏನು ಗೊತ್ತು? ಒಬ್ಬಳು ಹೆಂಡತಿ ಇದ್ದು, ಐದಾರು ಮಕ್ಕಳು ಹುಟ್ಟಿದ್ದರೆ ಕಷ್ಟ ಏನು ಎಂದು ಗೊತ್ತಾಗುತ್ತಿತ್ತು. ಎಲ್ಲೋ ಒಂದು ಕಡೆ ಊಟ ಮಾಡಿಬಿಟ್ಟು ಮಲಗಿಬಿಡುತ್ತಾರೆ. ಮನೆಗೆ ಹೋದರೆ ಏನು ತಂದಿದ್ದೀರಿ ಎಂದು ಕೇಳಲಿಕ್ಕೆ ಹೆಂಡತಿ ಇಲ್ಲ. ಆದ್ದರಿಂದ ಈ ಸ್ಟೈಪೆಂಡರಿ ಸ್ಕೀಮ್‌ಗೆ ಐದು ಪರ್ಸೆಂಟ್ ಮಾಡುವುದೇ ಅಲ್ಲ, ಎಲ್ಲಾ ಜ್ಯೂನಿಯರ್ಸ್ ಕೂಡ ಇದರಲ್ಲಿ ಕವರೇಜ್ ಆಗುವ ಹಾಗೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಅಧ್ಯಕ್ಷರು.—ಇನ್ನು ಐದು ನಿಮಿಷ ಮಾತ್ರ ನಿಮಗೆ ಉಳಿದಿರುವುದು

ಶ್ರೀ ಸಿ. ಬೈರೇಗೌಡ.—ಅವರ ಆಫೀಸಿನಲ್ಲೂ ಕೂಡ ಜ್ಯೂನಿಯರ್ಸ್ ಇದ್ದಾರೆ. ಅವರು ಏನು ಮಾಡಿದ್ದಾರೆ ಎಂದು ವಿವರ ಕೊಟ್ಟರೆ ಸಂತೋಷ.

ಅಧ್ಯಕ್ಷರು.—ಅವೆಲ್ಲಾ ಬೇಡ ಈಗ. ವಿಷಯಕ್ಕೆ ಬನ್ನಿ.

ಶ್ರೀ ಆರ್. ವೆಂಕಟರಾಮಯ್ಯ.—ಆದ್ದರಿಂದ ಸ್ಟೈಪೆಂಡರಿ ಸ್ಕೀಮ್ ಏನಿದೆ, ಇದನ್ನು ಜಾಸ್ತಿ ಮಾಡಬೇಕು. ಐದು ಪರ್ಸೆಂಟ್ ಕೊಟ್ಟಿದ್ದಾರೆ ಇದು ಬಹಳ ಕಡಿಮೆ. ಜ್ಯೂನಿಯರ್ಸ್ ಬಗ್ಗೆ ಹೆಚ್ಚು ಅನುಕಂಪ ತೋರಿಸಬೇಕು. ಐದುನೂರು ರೂಪಾಯಿಗಳ ಸ್ಟೈಪೆಂಡರಿ ಕೊಡುತ್ತಿರುವುದು ತುಂಬಾ ಕಡಿಮೆ. ನ್ಯಾಯಾಂಗದ ಬಗ್ಗೆ ಇಷ್ಟು ಹೇಳಿ, ನಗರಾಭಿವೃದ್ಧಿ ಇಲಾಖೆ ಬಗ್ಗೆ ನಾನು ಜಾಸ್ತಿ ಹೇಳುವುದಿಲ್ಲ. ಸ್ಲಂಕ್ಲಿಯರೆನ್ಸ್ ಬಗ್ಗೆ ಸ್ವಲ್ಪ ಹೇಳಬೇಕು. ಈ ಫರ್ಮಾರ್ಮೆನ್ಸ್ ಬಡ್ಜೆಟ್ ನೋಡಿ ಬಿಟ್ಟರೆ ಯಾರಿಗೋಸ್ಕರ ಈ ಇಲಾಖೆಯಲ್ಲಿ ಅಧಿಕಾರಿಗಳನ್ನು ಇಟ್ಟಿದ್ದಾರೆ ಎಂದು ಗೊತ್ತಾಗುತ್ತದೆ. ಕೊಳಚೆ ನಿರ್ಮೂಲನ ಕಾಮಗಾರಿಗಳಿಗಾಗಿ ೭೬ ಲಕ್ಷ ೮೬ ಸಾವಿರ ರೂಪಾಯಿಗಳನ್ನು ಇಟ್ಟಿದ್ದರೆ, ಇವರು ಖರ್ಚು ಮಾಡಿರುವುದು ೪೩ ಲಕ್ಷ ೬ ಸಾವಿರ ಮಾತ್ರ. ಸುಮಾರು ೩೦ ಲಕ್ಷ ಹಣವನ್ನು ಮಿಗಿಸಿದ್ದಾರೆ. ಕೋಲಾರಕ್ಕೆ ೧೧ ಲಕ್ಷ ೭೨ ಸಾವಿರ ಕೊಟ್ಟಿದ್ದರೆ ನಾಲ್ಕು ಲಕ್ಷ ಮಿಗಿಸಿದ್ದಾರೆ. ಕೊಳಚೆ ನಿರ್ಮೂಲನದ ಬಗ್ಗೆ ಇವರ ಕಳಕಳಿ ಏನು ಎಂಬುದನ್ನು ಯೋಚನೆ ಮಾಡಿದರೆ ಬಹಳ ಖೇದವಾಗುತ್ತದೆ. ಕೊಳಚೆ ನಿರ್ಮೂಲನ ಮಾಡುತ್ತೇವೆ ಎಂದು ಹೇಳಿಬಿಟ್ಟು ಸ್ವಾತಂತ್ರ್ಯ ಬಂದಾಗಿನಿಂದ ಘೋಷಣೆ ಮಾಡುತ್ತಲೇ ಇದ್ದೇವೆ. ಆದರೆ ನಿರ್ಮೂಲನ ಮಾಡಿದ್ದುದು ಮಾತ್ರ ಏನೂ ಇಲ್ಲ. ಇದೊಂದು ಸಾಮಾಜಿಕ ಪಿಡುಗು. ಇಂತಹದ್ದರಲ್ಲಿ ಕೊಟ್ಟಿರುವ ಹಣವನ್ನು ಸಹ ಸರಿಯಾಗಿ, ನ್ಯಾಯವಾದ ರೀತಿಯಲ್ಲಿ ಖರ್ಚು ಮಾಡುವ ಪರಿಸ್ಥಿತಿ ಇಲ್ಲವೆಂದರೆ ಹೇಗೆ?

ನಾನು ಮುನಿಸಿಪಾಲಿಟಿಗಳ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಮ್ಮ ಕೋಲಾರ, ಮುಳಬಾಗಿಲು ಮತ್ತು ಚಿಂತಾಮಣಿಯ ನೀರಿನ ವ್ಯವಸ್ಥೆಯ ಬಗ್ಗೆ ಹೇಳಬೇಕಾಗಿದೆ. ಬೆಂಗಳೂರಿನಲ್ಲಿ ಐ.ಟಿ.ಐ. ಪ್ರಾರಂಭವಾಯಿತು ಆದರೆ ಇದರ ಶಾಖೆ ಕೋಲಾರದಲ್ಲಿ ಪ್ರಾರಂಭ ವಾಗಲಿಲ್ಲ ಕೋಲಾರದಲ್ಲಿ ನೀರಿನ ತೊಂದರೆ ಇದೆ ಎಂಬ ಕಾರಣದಿಂದ ಪ್ರಾರಂಭವಾಗಲಿಲ್ಲ. ಇವೊತ್ತಿಗೂ ಸಹ ಅಲ್ಲಿ ನೀರಿನ ಬವಣೆ ತಪ್ಪಿಲ್ಲ ನಮ್ಮ ಜಿಲ್ಲೆಯಲ್ಲಿರುವ ಎಲ್ಲಾ ನಗರಗಳಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ನಾವು ಬಹಳ ಕಾಲದಿಂದ ಕೇಳುತ್ತಲೇ ಇದ್ದೇವೆ. ಆದರೆ ಸರ್ಕಾರದವರು ಯಾವ ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ, ನಮ್ಮ ಕೋಲಾರದಲ್ಲಿ ನೀರಿಗಾಗಿ ಇರುವಂತಹ ಒಂದು ಕೆರೆಯನ್ನು ಬಿಟ್ಟರೆ ಬೇರೆ ಯಾವ ವ್ಯವಸ್ಥೆಯೂ ಇಲ್ಲ. ಈ ಕಾರಣದಿಂದ ಮಾನ್ಯ ಲಕ್ಷ್ಮೀಸಾಗರ್ ಅವರು ಕೊಳವೆ ಬಾವಿಗಳನ್ನು ಅಲ್ಲಿ ಹಾಕಿಸುತ್ತಿದ್ದಾರೆ. ಇವುಗಳ ಸಂಖ್ಯೆಯನ್ನಾದರೂ ಜಾಸ್ತಿ ಮಾಡಬೇಕು. ಪ್ರತಿ ಮುನಿಸಿಪಾಲಿಟಿಯ ವ್ಯಾಪ್ತಿಯಲ್ಲಿಯೂ ಹತ್ತತ್ತು ಕೊಳವೆ ಬಾವಿಗಳನ್ನು ತೆಗೆಯಿಸಬೇಕೆಂದು ಈ ಸಂದರ್ಭದಲ್ಲಿ ಕಳಕಳಿಯಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಸೈಟ್‌ಗಳ ಹಂಚಿಕೆಯ ಬಗ್ಗೆ ಹೇಳಬೇಕೆಂದರೆ, ಬಡವರಿಂದ ಮತ್ತು ಮಧ್ಯಮವರ್ಗದವ ರಿಂದ ಏನು ಬೇಡಿಕೆಗಳು ಬರುತ್ತಿವೆ, ಅದರಲ್ಲಿ ೫-೧೦ ಪರ್ಸೆಂಟ್‌ನಷ್ಟೂ ಸಹ ಪೂರೈಸುತ್ತಿಲ್ಲ. ಕೋಲಾರ ಹಾಗೂ ಇತರೇ ಪಟ್ಟಣಗಳ ಸುತ್ತಮುತ್ತ ಸೈಟ್‌ಗಳ ಹಂಚಿಕೆಗಾಗಿ ಜಮೀನನ್ನು ಸ್ವಾಧೀನ

ಪಡಿಸಿಕೊಳ್ಳಲು ಹೊರಟಾಗ, ಈ ಜಮೀನುಗಳ ಮಾಲೀಕರುಗಳು ಆ ಭಾಗದ ಮುನಿಸಿಪಲ್ ಕೌನ್ಸಿಲರ್‌ಗಳನ್ನು ಹಾಗೂ ಪ್ರೆಸಿಡೆಂಟರನ್ನು ಹಿಡಿದುಕೊಂಡು ತಮ್ಮ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳದ ರೀತಿಯಲ್ಲಿ ಏನೇನು ಒತ್ತಡಗಳನ್ನು ತರಬಹುದೋ ಅದನ್ನೆಲ್ಲಾ ತರುತ್ತಾರೆ. ಇದರ ಜೊತೆಗೆ ಜಮೀನುಗಳಲ್ಲಿ ೨೦—೩೦ ಮನೆಗಳನ್ನು ಸಹ ಕಟ್ಟಿಸಿಬಿಡುತ್ತಾರೆ. ಇದರಿಂದ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದು ತಡವಾಗುತ್ತಿದೆ. ಇನ್ನು ಮುಂದೆ ಹೆಚ್ಚು ಹೆಚ್ಚು ಜಮೀನುಗಳನ್ನು ಸ್ವಾಧೀನಕ್ಕೆ ತೆಗದುಕೊಂಡು, ಅಲ್ಲಿ ಪ್ಲಾನ್ ಪ್ರಕಾರ ಸೈಟ್‌ಗಳನ್ನು ವಿಂಗಡಿಸಿ ಜನರಿಗೆ ಹಂಚಬೇಕು. ಇಲ್ಲದಿದ್ದರೆ ಭೂಮಾಲೀಕರೇ ತಮಗಿಷ್ಟ ಬಂದ ರೀತಿಯಲ್ಲಿ ಮನೆಗಳನ್ನು ಕಟ್ಟಿಸಿಬಿಡುತ್ತಾರೆ. ಇದರಿಂದ ಅಲ್ಲಿ ಮುಂದೆ ಕೊಳಚೆ ಪ್ರದೇಶಗಳು ನಿರ್ಮಾಣವಾಗದಿದ್ದರೂ ಸಹ ಕಾಂಕ್ರೀಟ್ ಜಂಗಲ್ ತರಹ ಆಗಬಹುದು. ಆದ್ದರಿಂದ ಇದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಬಾರದೆಂದು ಹೇಳುತ್ತೇನೆ.

ಇನ್ನು ನಗರಸಭೆಗಳ ಮತ್ತು ಮುನಿಸಿಪಾಲಿಟಿಗಳ ಸಂಪನ್ಮೂಲಗಳ ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಸ್ಥಳೀಯ ಸಂಸ್ಥೆಗಳಿಗೆ ಈ ಮೊದಲು ಆಕ್ಟ್ರಾಯ್‌ನಿಂದ ಹೆಚ್ಚಿನ ಆದಾಯ ಬರುತ್ತಿತ್ತು. ಆದರೆ ಇದನ್ನು ರದ್ದು ಮಾಡಿದ ಮೇಲೆ ಪರಿಹಾರರೂಪದಲ್ಲಿ ಕರ್ನಾಟಕ ಟ್ಯಾಕ್ಸೇಷನ್ ರೆವ್ಯೂ ಕಮಿಟಿಯುವರ ವರದಿ ಆಧಾರದ ಮೇಲೆ ಸ್ವಲ್ಪ ಹಣವನ್ನು ಕೊಡುತ್ತಿದ್ದಾರೆ. ಈ ಒಂದು ವರದಿ ಆಧಾರದ ಮೇಲೆ ಕೊಡುತ್ತಿರುವ ಹತ್ತು ಪರ್ಸೆಂಟ್ ಪರಿಹಾರಧನ ಸಾಕಾಗುತ್ತಿಲ್ಲ. ಇದೇ ಮಾತನ್ನು ಮಾನ್ಯ ಧರ್ಮಸಿಂಗ್ ಅವರು ಸಹ ಹೇಳಿದ್ದಾರೆ. ಆದ್ದರಿಂದ ಇದನ್ನು ೨೦ ಪರ್ಸೆಂಟ್‌ಗೆ ಹೆಚ್ಚು ಮಾಡಬೇಕು. ಮನರಂಜನಾ ತೆರಿಗೆಯಿಂದ ಬರುವ ಆದಾಯದಲ್ಲಿ ಸಹಾಯಧನ ರೂಪದಲ್ಲಿ ಕೊಡುತ್ತಿರುವ ೨೫ ಪರ್ಸೆಂಟ್‌ನ್ನು ೭೫ ಪರ್ಸೆಂಟ್‌ಗೆ ಹೆಚ್ಚು ಮಾಡಬೇಕು. ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್‌ನಿಂದ ಬರುತ್ತಿರುವ ಆದಾಯದಲ್ಲಿಯೂ ಸಹ ಈಗ ಕೊಡುತ್ತಿರುವ ಸಹಾಯಧನವನ್ನು ಒಂದಕ್ಕೆ ಎರಡರಷ್ಟು ಹೆಚ್ಚು ಮಾಡಬೇಕು. ಇಲ್ಲದಿದ್ದರೆ ಮುನಿಸಿಪಾಲಿಟಿಯುವರು ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ನಮ್ಮ ರಾಜ್ಯದಲ್ಲಿ ೫ ನಗರಸಭೆಗಳು ಇವೆ. ಈ ನಗರಸಭೆಗಳ ವ್ಯಾಪ್ತಿಯಲ್ಲಿ ೪೭ ಲಕ್ಷ ಜನರು ವಾಸ ಮಾಡುತ್ತಿದ್ದಾರೆ. ಇವುಗಳಿಗೆ ಸರ್ಕಾರ ಕೊಡುತ್ತಿರುವ ಸಹಾಯಧನ ೪೭.೬ ಕೋಟಿ ರೂಪಾಯಿಗಳು. ಅಂದರೆ ತಲಾವರು ನೂರು ರೂಪಾಯಿಗಳಾಗುತ್ತದೆ. ಅದೇ ನಮ್ಮ ರಾಜ್ಯದಲ್ಲಿರುವ ೨೩೩ ಪುರಸಭೆಗಳಿಗೆ ಕೊಡುತ್ತಿರುವ ಸಹಾಯಧನ ೧೮.೬ ಕೋಟಿ ರೂಪಾಯಿಗಳು ಈ ಪುರಸಭೆಗಳ ವ್ಯಾಪ್ತಿಯಲ್ಲಿ ಅರವತ್ತೂವರೆ ಲಕ್ಷ ಜನರು ವಾಸ ಮಾಡುತ್ತಿದ್ದಾರೆ. ಅಂದರೆ ತಲಾವರು ೩೧ ರೂಪಾಯಿಗಳು ಬರುತ್ತದೆ. ಇದರಿಂದಲೇ ನಾವು ನಗರಸಭೆಗಳಿಗೂ ಮತ್ತು ಪುರಸಭೆಗಳಿಗೂ ಕೊಡುತ್ತಿರುವ ಸಹಾಯಧನದಲ್ಲಿ ಅಂತರ ಬಹಳ ಜಾಸ್ತಿ ಇದೆ ಎಂದು ತಿಳಿದುಕೊಳ್ಳಬಹುದು. ಇದರಿಂದ ಪುರಸಭೆಗಳವರು ಯಾವ ಕೆಲಸವನ್ನೂ ಮಾಡಿಸುವುದಕ್ಕಾಗುತ್ತಿಲ್ಲ. ಅನೇಕ ಮುನಿಸಿಪಾಲಿಟಿಗಳಲ್ಲಿ ಇವರು ಕೊಡುವ ಹಣ ಸಂಬಳ ಕೊಡುವುದಕ್ಕೂ ಸಹ ಸಾಲುತ್ತಿಲ್ಲ. ಇದೇ ಕಾರಣದಿಂದ ಅಭಿವೃದ್ಧಿ ಕಾರ್ಯಗಳನ್ನು ಮಾಡಿಸುವುದಕ್ಕೆ ಅವರಿಗೆ ಸಾಧ್ಯವಾಗುತ್ತಿಲ್ಲ. ನೀರಿನ ವ್ಯವಸ್ಥೆ, ರಸ್ತೆಗಳ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಇನ್ನಿತರ ಪೌರಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾದರೆ, ಈಗ ನೀವು ಕೊಡುತ್ತಿರುವ ಸಹಾಯಧನವನ್ನು ಒಂದಕ್ಕೆ ಎರಡರಷ್ಟು ಹೆಚ್ಚು ಮಾಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ನಗರಾಭಿವೃದ್ಧಿ ಸಚಿವರು ಮಂಡಿಸಿರುವಂತಹ ಬೇಡಿಕೆಗಳ ಮೇಲೆ ಮಾತನಾಡಲು ತಾವು ನನಗೆ ಕೊಟ್ಟಿರುವ ಸಮಯ ಬಹಳ ಕಡಿಮೆಯಾಗಿರುವುದರಿಂದ ನಾನು ಎಲ್ಲಾ ವಿಷಯಗಳ ಮೇಲೂ ಮಾತನಾಡಲು ಹೋಗುವುದಿಲ್ಲ. ಎಲ್ಲಾ ವಿಷಯಗಳ ಮೇಲೂ ಮಾತನಾಡಲು ಹೋದರೆ ಅದು ತಿರುಪತಿಯ ಕ್ಷೌರದಂತೆ ಆಗುತ್ತದೆ. ಆದ್ದರಿಂದ ಒಂದೆರಡು ವಿಷಯಗಳ ಮೇಲೆ ಮಾತ್ರ ನಾನು ಮಾತನಾಡುತ್ತೇನೆ. ಈ ಹಿಂದೆ ಈ ಖಾತೆಯನ್ನು ನೋಡಿಕೊಳ್ಳುತ್ತಿದ್ದ ಸಚಿವರು ನಾವು ಮಂಜೂರು ಮಾಡಿಕೊಟ್ಟಿದ್ದ ಹಣವನ್ನು ಪೂರ್ತಿಯಾಗಿ ಖರ್ಚು ಮಾಡುವುದರಲ್ಲಿ ವಿಫಲರಾಗಿದ್ದರು ಮಾನ್ಯ ಲಕ್ಷ್ಮೀಸಾಗರ್ ಅವರು ಈ ಖಾತೆಯನ್ನು ವಹಿಸಿಕೊಂಡ ಮೇಲೂ ಸಹ ಈ ಇಲಾಖೆಗೆ ಹೆಚ್ಚು ಹಣವನ್ನು ಪಡೆಯುವುದರಲ್ಲಿ ವಿಫಲವಾಗಿದ್ದಾರೆಂದು ಹೇಳಬಹುದು. ಇದರಿಂದ ಈ ಇಲಾಖೆಯನ್ನೇ ನಂಬಿಕೊಂಡು ಕುಳಿತಿರುವಂತಹ ಪುರಸಭೆಗಳು ನಗರ ಸಭೆಗಳು ಹಾಗೂ ಕಾರ್ಪೊರೇಷನ್ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಜನರು ಒಂದು

ರೀತಿಯಲ್ಲಿ ತಬ್ಬಲಿಗಳಾಗಿದ್ದಾರೆಂದು ಹೇಳಿ ಬಹುದು. ಅಭಿವೃದ್ಧಿ ಕಾರ್ಯಗಳನ್ನು ಹೆಚ್ಚಾಗಿ ಕೈಕೊಳ್ಳದ ಕಾರಣ ದಿಂದ ಪಟ್ಟಣಗಳ ಜನರು ಒಂದು ರೀತಿಯಲ್ಲಿ ವಂಚಿತರಾಗಿದ್ದಾರೆಂದು ಹೇಳಬಹುದು. ನಗರಾಭಿವೃದ್ಧಿಯ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಗುತ್ತಿದೆ. ಈಗಿನ ಸರ್ಕಾರದವರು ಅಧಿಕಾರಕ್ಕೆ ಬಂದು ಇಷ್ಟು ತಿಂಗಳಾದಮೇಲೂ ಸಹ ನಗರಾಭಿವೃದ್ಧಿ ಮಂಡಳಿಗಳ ಅಧ್ಯಕ್ಷರನ್ನು ನೇಮಕ ಮಾಡಲು ಇವರ ಕೈಯಲ್ಲಿ ಇನ್ನೂ ಆಗಿಲ್ಲ. ಈ ಬಗ್ಗೆ ಇವರು ರಾಜಕೀಯ ಗೊಂದಲದಲ್ಲಿ ಸಿಕ್ಕಿಕೊಂಡಿದ್ದಾರೆ. ಅಧ್ಯಕ್ಷರುಗಳನ್ನು ನೇಮಕ ಮಾಡಿರುವ ಕಾರಣದಿಂದ ಎಲ್ಲಾ ಕಡೆಯಲ್ಲಿಯೂ ಅಭಿವೃದ್ಧಿ ಕಾರ್ಯಗಳು ನಿಂತುಹೋಗಿವೆ. ಮೈಸೂರು ನಗರಾಭಿವೃದ್ಧಿ ಮಂಡಳಿಯ ಬಗ್ಗೆ ಹೇಳಬೇಕೆಂದರೆ, ಮೈಸೂರು ಬಳಿ ಇರುವಂಥ ಪಡುವಾರಹಳ್ಳಿಯ ಸಮೀಪ ಕೋಟ್ಯಾಂತರ ರೂಪಾಯಿಗಳಷ್ಟು ಬೆಲೆ ಬಾಳುವಂತಹ ಜಾಗವನ್ನು ಅಲ್ಲಿನ ಅಧಿಕಾರಿಗಳಿಗೆ ಮಂಕುಬೂದಿ ಎರಚಿ ತಮ್ಮತಮ್ಮಲ್ಲೇ ಹಂಚಿಕೊಳ್ಳಬೇಕೆಂದುಕೊಂಡು ಕೆಲವು ರಾಜಕಾರಣಿಗಳು ತೀರ್ಮಾನ ಮಾಡಿದರು. ಅನಂತರ ಈ ಜಾಗವನ್ನು ಅಲ್ಲಿನ ನಗರಾಭಿವೃದ್ಧಿ ಮಂಡಲಿಯವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಸೈಟುಗಳನ್ನಾಗಿ ವಿಂಗಡಿಸಿ ಜನರಿಗೆ ಹಂಚುವ ಸಲುವಾಗಿ ಅರ್ಜಿಗಳನ್ನು ಕರೆದರು. ಅದರ ಪ್ರಕಾರ ಸೈಟ್‌ಗಳನ್ನು ಪಡೆಯಲು ಜನರು ಮೂರೂವರೆ ಸಾವಿರದಿಂದ ನಾಲ್ಕು ಸಾವಿರದವರೆಗೆ ಹಣವನ್ನು ಅರ್ಜಿಯ ಜೊತೆಗೆ ಡಿಪಾಜಿಟ್ ಮಾಡಿದರು. ಇದಾದ ನಂತರ ಅಲ್ಲಿನ ವಿಭಾಗಾಧಿಕಾರಿಗಳು ಈ ಜಾಗದ ಬಗ್ಗೆ ರಾಜಕೀಯ ಮಾಡಿದಂಥ ಜನರಿಗೆ ಬುದ್ಧಿ ಕಲಿಸಬೇಕೆಂದುಕೊಂಡು ಸೈಟುಗಳನ್ನು ಲಾಟರಿ ಮೂಲಕ ಹಂಚುವುದಾಗಿ ತಿಳಿಸಿದರು. ಇದು ಸಾಕಷ್ಟು ಗೊಂದಲಕ್ಕೆ ಅವಕಾಶಮಾಡಿಕೊಟ್ಟಿತು. ಇಷ್ಟೆಲ್ಲಾ ಆದಮೇಲೆ ಆ ಜಾಗವನ್ನು ಸರ್ಕಾರ ತನ್ನ ವಶದಲ್ಲಿಯೇ ಉಳಿಸಿಕೊಳ್ಳಬೇಕೆಂದು ತೀರ್ಮಾನ ಮಾಡಿತು. ಕೊನೆಗಾದರೂ ಸರ್ಕಾರಕ್ಕೆ ಒಳ್ಳೆಯ ಬುದ್ಧಿ ಬಂದಿದೆ. ಈ ಬಗ್ಗೆ ನನ್ನ ವಿನಂತಿ ಏನೆಂದರೆ, ಈ ಜಾಗದಲ್ಲಿ ಕಾಂಪ್ಲೆಕ್ಸ್‌ನ್ನು ಕಟ್ಟಿ ಇನ್ನುಳಿದ ಜಾಗವನ್ನು ಪಾರ್ಕಿಗಾಗಿ ಮೀಸಲಿಟ್ಟರೆ ಅಲ್ಲಿನ ಜನರಿಗೆ ಅನುಕೂಲವಾಗುತ್ತದೆ. ಈ ಜಾಗದಲ್ಲಿ ಮಾಡಿದ ಸೈಟುಗಳನ್ನು ಪಡೆಯಲು ಯಾರುಯಾರು ಡಿಪಾಸಿಟ್ ಮಾಡಿದ್ದಾರೋ ಅವರಿಗೆಲ್ಲಾ ಆ ಹಣಕ್ಕೆ ಬಡ್ಡಿಯನ್ನು ಸೇರಿಸಿ ವಾಪಸ್ ಮಾಡಬೇಕೆಂದು ಸಲಹೆ ಮಾಡುತ್ತೇನೆ. ನಗರಸಭೆಗಳ ಪ್ರದೇಶದಲ್ಲಿ ವಾಸ ಮಾಡುವಂತಹ ಜನರು ಒಳ್ಳೆಯ ರಸ್ತೆಗಳಿರಬೇಕು, ನೀರಿನ ಸರಬರಾಜು ಚೆನ್ನಾಗಿರಬೇಕು, ದೀಪದ ವ್ಯವಸ್ಥೆ ಚೆನ್ನಾಗಿರಬೇಕು, ರಸ್ತೆಗಳು ಸ್ವಚ್ಛವಾಗಿರಬೇಕು ಹಾಗೂ ಒಳ್ಳೆಯ ಚರಂಡಿ ವ್ಯವಸ್ಥೆ ಇರಬೇಕು ಎಂದು ಅಪೇಕ್ಷೆಪಡುತ್ತಾರೆ. ಬೆಂಗಳೂರು ನಗರದ ಬಗ್ಗೆ ಮಾನ್ಯ ಧರ್ಮಸಿಂಗ್ ಅವರು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ನಗರದ ಬಗ್ಗೆ ನನ್ನ ಅಭಿಪ್ರಾಯ ಹೇಳಬೇಕೆಂದರೆ, ಅಲಂಕಾರ್ ಟಾಕೀಸ್ ಹತ್ತಿರ ಮತ್ತು ಜನತಾ ಬಜಾರ್ ಪಕ್ಕದಲ್ಲಿ ಸಾಯಂಕಾಲದ ಹೊತ್ತು ತಲೆ ತಗ್ಗಿಸಿಕೊಂಡು ಓಡಾಡುವಂತಹ ಪರಿಸ್ಥಿತಿ ಬಂದಿದೆ. ಮಾನ್ಯ ಮಂತ್ರಿಗಳಿಗೆ ಈ ಜಾಗಕ್ಕೆ ಹೋಗಿ ನೋಡಲು ಬಿಡುವಿಲ್ಲವೆಂದು ಕಾಣುತ್ತಿದೆ. ನಾವೆಲ್ಲರೂ ಈ ರಾಜ್ಯದ ಹಿತವನ್ನು ಬಯಸುತ್ತೇವೆ. ಆದರೆ ಸರಿಯಾದ ದಿಕ್ಕಿನಲ್ಲಿ ಪಟ್ಟಣ ಪ್ರದೇಶಗಳು ಅಭಿವೃದ್ಧಿಯಾಗುತ್ತಿಲ್ಲ. ಬೆಂಗಳೂರು ನಗರವೇ ಈ ಒಂದು ಸ್ಥಿತಿಗೆ ಬಂದು ಮುಟ್ಟಿರಬೇಕಾದರೆ ಇನ್ನು ತಾಲ್ಲೂಕ್ ಕೇಂದ್ರಗಳ ಪರಿಸ್ಥಿತಿ ಯಾವ ರೀತಿ ಇರಬಹುದು ಎಂಬುದನ್ನು ಎಲ್ಲರೂ ಯೋಚನೆ ಮಾಡಬೇಕಾಗುತ್ತದೆ. ಇಲ್ಲಿ ಭಾಗ್ಯಮಂದಿರ ಯೋಜನೆ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ೧೯೮೪–೧೯೮೫ರಲ್ಲಿ ಮಂಜೂರಾದಂಥ ಮನೆಗಳ ಸಂಖ್ಯೆ ೩೦,೭೭೫. ೧೯೮೫ನೇ ಮಾರ್ಚಿ ಅಂತ್ಯದವರೆಗೆ ೨೧,೫೪೪ ಮನೆಗಳನ್ನು ಕಟ್ಟಲಾಯಿತು. ಸಂಧಾರಣೆ ಮತ್ತು ರಿಪೇರಿಗಾಗಿ ೧೩,೧೬೭ ಮನೆಗಳನ್ನು ತೆಗೆದುಕೊಳ್ಳಲಾಯಿತೆಂದು ಹೇಳಿದ್ದಾರೆ. ಮುಂದೆ ಈಗಿರುವ ಮನೆಗಳ ಪೈಕಿ ೧೦,೯೩೩ ಮನೆಗಳನ್ನು ಸುಧಾರಣೆ ಇಲ್ಲವೇ ರಿಪೇರಿ ಮಾಡಲಾಯಿತು ಎಂದು ಹೇಳಿದ್ದಾರೆ. ಇದರ ಜೊತೆಗೆ ೧೯೮೫–೮೬ನೇ ಸಾಲಿನಲ್ಲಿ ೪೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ಸಾವಿರ ಮನೆಗಳನ್ನು ೧೯ ಜಿಲ್ಲೆಗಳಲ್ಲಿರುವಂತಹ ನಗರಸಭೆಗಳ ಮೂಲಕ ಮತ್ತು ಪುರಸಭೆಗಳ ಮೂಲಕ ಕಟ್ಟಿಸುತ್ತೇವೆಂದು ಹೇಳಿದ್ದಾರೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ೧೪ ಪುರಸಭೆಗಳಿವೆ. ಇವರ ಲೆಕ್ಕದ ಪ್ರಕಾರವೇ ತೆಗೆದುಕೊಂಡರೆ ಒಂದು ಜಿಲ್ಲೆಯಲ್ಲಿ ೫೨ ಮನೆಗಳನ್ನು ಕಟ್ಟಿಸುತ್ತಾರೆ. ತಾಲ್ಲೂಕ್‌ವಾರು ಲೆಕ್ಕ ತೆಗೆದುಕೊಂಡರೆ ಪ್ರತಿ ತಾಲ್ಲೂಕ್‌ಗೂ ಮೂರೂವರೆ ಮನೆಗಳು ಬರುತ್ತವೆ. ಇಡೀ ರಾಜ್ಯದಲ್ಲಿರುವಂತಹ ಎಲ್ಲಾ ಸಮಸ್ಯೆಗಳನ್ನು ಒಂದೇ ಸಲ ಬಗೆಹರಿಸಲು ಇವರು ಹೊರಟಿರುವಂತೆ ಕಾಣುತ್ತದೆ. ಆದರೆ ಯಾವುದೂ ಸಹ ಪೂರ್ಣವಾಗುತ್ತಿಲ್ಲ. ಒಟ್ಟಿನಲ್ಲಿ ಜನರು ಕೆಲವೊಂದು ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆಂದು ಹೇಳಬಹುದು.